ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 27 | ಜೂನ್ 29–ಜುಲೈ 5, 2020, | ಪುಟ 16 | ರೂ. 10


Web : www.janashakthi.co.in e-mail : js_weekly@yahoo.com





ಅನ್ನವಿಕ್ಕಿದವನ ಮನೆಗೆ ಕನ್ನವಿಡುವ ಕೆಲಸ

ಭೂ ಸುಧಾರಣಾ ಕಾಯ್ದೆ ತಿದ್ದುಪಡಿ



ಭಾರತ – ಚೀನಾ ಘರ್ಷಣೆಯ ಹಿಂದೆ

'ಬಾಯ್ಕಾಟ್' ಆಂದೋಲನದ ಮರ್ಮ

ಅರ್ಥ ವ್ಯವಸ್ಥೆ ಪಾತಾಳಕ್ಕೆ ಷೇರು ಮಾರುಕಟ್ಟೆ ಆಕಾಶಕ್ಕೆ





ಅರು ನೇಕಾರರ ಅತ್ಮಹತ್ಯೆ

ಸಾಲ ಮನ್ನಾ ಅಗಿದ್ದರೆ!

ಪೆಟ್ರೋಲಿಯಂ ಉತ್ಪನ್ನಗಳ ಸುಂಕ ಇಳಿಸಿ, ಜನಗಳಿಗೆ ಪರಿಹಾರ ಒದಗಿಸಿ–ಎಡಪಕ್ಷಗಳ ಆಗ್ರಹ

ಮೋದಿ ಸರಕಾರ ಮಹಾಮಾರಿ ಮತ್ತು ಅಯೋಜಿತ, ಏಕಪಕ್ಷೀಯವಾಗಿ ಪ್ರಕಟಿಸಿದ ಹಾಗೂ ಸಂಪೂರ್ಣ ಅವ್ಯವಸ್ಥೆಯಿಂದ ನಿರ್ವಹಿಸಿದ ಲಾಕ್‌ಡೌನ್ ಇವೆರಡರಿಂದಲೂ ಈಗಾಗಲೇ ಹೊಡೆತಗಳಿಗೆ ಒಳಗಾಗಿರುವ ಜನಗಳ ಜೀವನಾಧಾರಗಳನ್ನು ನಿರ್ದಯವಾಗಿ ಧ್ವಂಸ ಮಾಡ ಹೊರಟಿದೆ.

ಪೆಟ್ರೋಲ್, ಡೀಸೆಲ್ ಬೆಲೆಗಳನ್ನು ಕಳೆದ ಹದಿನೈದು ದಿನಗಳಲ್ಲಿ ಪ್ರತಿದಿನ ಏರಿಸಲಾಗಿದೆ. ಇದರಿಂದಾಗಿ ಪೆಟ್ರೋಲ್ ಬೆಲೆಯಲ್ಲಿ 7.97ರೂ. ಏರಿಕೆಯಾಗಿದೆ, ಡೀಸೆಲ್ ನಲ್ಲಿ 8.88 ರೂ. ಏರಿಕೆಯಾಗಿದೆ. ಇದು ಕೋಟ್ಯಂತರ ಜನಗಳ ಬದುಕುಗಳನ್ನು ಕುಂಟಿತಗೊಳಿಸಿದೆ ಎಂದಿರುವ ಎಡಪಕ್ಷಗಳು ಕೇಂದ್ರ ಸರಕಾರ ಜನಗಳಿಗೆ ಪರಿಹಾರ ಒದಗಿಸಲು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತನ್ನ ಅಬಕಾರಿ ಸುಂಕಗಳನ್ನು ತೀವ್ರವಾಗಿ ಇಳಿಸಬೇಕು, ಏಕೆಂದರೆ ಇಂದು ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿದೆ ಎಂದು ಆಗ್ರಹಿಸಿವೆ.

ತೈಲ ಮಾರುವ ಕಂಪನಿಗಳು ಜನಗಳ ಖರ್ಚಿನಲ್ಲಿ ಅತಿ ಲಾಭ ಮಾಡಿಕೊಳ್ಳುತ್ತಿವೆ. ಅದೇ ವೇಳೆಯಲ್ಲಿ ಕೇಂದ್ರ ಸರಕಾರ ಭಾರೀ ಆದಾಯಗಳನ್ನು ಗಳಿಸುತ್ತಿದೆ. ಇದು ಕ್ರಿಮಿನಲ್ ಕೃತ್ಯ.

ಜನಗಳು ಬದುಕುಳಿಯುವ ಸಮಸ್ಯೆಗಳನ್ನು ಎತ್ತಿಕೊಳ್ಳುವ ಬದಲು, ಮೋದಿ ಸರ್ಕಾರ ಮತ್ತಷ್ಟು ಹೊಡೆತಗಳನ್ನೇ ಹಾಕುತ್ತಿದೆ. ಇಂತಹ ಸಂದರ್ಭದಲ್ಲಿ ಐದು ಎಡಪಕ್ಷಗಳು ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಆರ್ ಎಸ್ ಪಿ ಮತ್ತು ಎ ಐ ಎಫ್ ಬಿ ಒಂದು ಅಖಿಲ ಭಾರತ ಪ್ರತಿಭಟನೆಯನ್ನು ಸಂಘಟಿಸಲು ನಿರ್ಧರಿಸಿವೆ. ಈ ಕೆಳಗಿನ ಬೇಡಿಕೆಗಳ ಮೇಲೆ ಇದನ್ನು ನಡೆಸಲಾಗುವುದು ಎಂದು ಅವು ಹೇಳಿವೆ:

1.ತಕ್ಷಣವೇ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸುಂಕಗಳನ್ನು ಕಡಿತ ಮಾಡಬೇಕು ಮತ್ತು ಬೆಲೆಗಳನ್ನು ಇಳಿಸಬೇಕು.

2.ತಕ್ಷಣವೇ ತಿಂಗಳಿಗೆ ರೂ.7500 ನ್ನು ಮುಂದಿನ ಆರು ತಿಂಗಳು ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲ ಕುಟುಂಬಗಳಿಗೆ ವರ್ಗಾಯಿಸಬೇಕು.

3.ಅಗತ್ಯವಿರುವ ಎಲ್ಲರಿಗೂ 10 ಕೆಜಿ ಆಹಾರಧಾನ್ಯಗಳನ್ನು ಉಚಿತವಾಗಿ ಹಂಚಬೇಕು.

ಕಲ್ಲಿದ್ದಲು ಕಾರ್ಮಿಕರು ಮೋದಿ ಸರಕಾರ ಕಲ್ಲಿದ್ದಲು ಗಣಿಗಳನ್ನು ಖಾಸಗೀಕರಿಸಲು ನಿರ್ಧರಿಸಿರುವುದರ ವಿರುದ್ಧ ನೀಡಿರುವ ಜುಲೈ 2ರಿಂದ 4 ರ ವರೆಗಿನ ಮುಷ್ಕರದ ಕರೆಗೆ ಎಡ ಪಕ್ಷಗಳು ಬೆಂಬಲ ವ್ಯಕ್ತ ಪಡಿಸಿವೆ.

ಜುಲೈ 3 ರಂದು ತಮ್ಮ ಬೇಡಿಕೆಗಳ ಮೇಲೆ ಅಖಿಲ ಭಾರತ ಪ್ರತಿಭಟನೆಗೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ನೀಡಿರುವ ಕರೆಗೆ ಸಂಪೂರ್ಣ ಬೆಂಬಲ ಮತ್ತು ಸೌಹಾರ್ದವನ್ನು ವ್ಯಕ್ತ ಪಡಿಸಿರುವ ಎಡ ಪಕ್ಷಗಳು ಅಖಿಲ ಭಾರತ ಪ್ರತಿಭಟನೆಯ ದಿನಾಂಕವನ್ನು ಇತರ ಜಾತ್ಯತೀತ ಪಕ್ಷಗಳೊಂದಿಗೆ ಸಮಾಲೋಚಿಸಿ ಪ್ರಕಟಿಸುವುದಾಗಿ ಹೇಳಿವೆ.

ವಾಣಿಜ್ಯ ಕಲ್ಲಿದ್ದಲು ಗಣಿಗಾರಿಕೆಯ ಖಾಸಗೀಕರಣವನ್ನು ನಿಲ್ಲಿಸಿ–ಸಿಪಿಐ(ಎಂ)

ವಿದೇಶಿ ಸಂಸ್ಥೆಗಳು ಸೇರಿದಂತೆ ಖಾಸಗಿ ವಲಯಕ್ಕೆ ಕಲ್ಲಿದ್ದಲಿನ ವಾಣಿಜ್ಯ ಗಣಿಗಾರಿಕೆಗೆ ಅವಕಾಶ ನೀಡುವ ಸರಕಾರದ ನರ್ಧಾರವನ್ನು ರದ್ದು ಮಾಡಬೇಕು ಮತ್ತು ಸಾರ್ವಜನಿಕ ವಲಯದ ಕಲ್ಲಿದ್ದಲು ಕಂಪನಗಳನ್ನು ಖಾಸಗೀಕರಿಸುವ ನಡೆಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿ ಕಲ್ಲಿದ್ದಲು ಕಾರ್ಮಿಕರ ಸಂಘಗಳು ಮತ್ತು ಒಕ್ಕೂಟಗಳ ಮೂರು ದಿನಗಳ ಮುಷ್ಕರಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಬೆಂಬಲ ವ್ಯಕ್ತಪಡಿಸಿದೆ.

ಸರಕಾರದ ಈ ನರ್ಧಾರ ನಮ್ಮ ದೇಶದ ಇಂಧನ ಭದ್ರತೆಯನ್ನು ಖಾತ್ರಿಪಡಿಸಲು ರಾಷ್ಟ್ರೀಯ ಹಿತದೃಷ್ಟಿಯಿಂದ ಕೈಗೊಂಡಿದ್ದ ಕಲ್ಲಿದ್ದಲು ಗಣಿಗಾರಿಕೆಯ ರಾಷ್ಟ್ರೀಕರಣವನ್ನು ಸಂಪೂರ್ಣವಾಗಿ ತಲೆಕೆಳಗಾಗಿಸುತ್ತದೆ. ಇದು ನಮ್ಮ ಅರ್ಥವ್ಯವಸ್ಥೆಯ ಸ್ವಾವಲಂಬೀ ಆಧಾರವನ್ನು ಧ್ವಂಸ ಮಾಡುತ್ತದೆ ಮತ್ತು ವಿದೇಶಿ ಹಾಗೂ ದೇಶಿ ಖಾಸಗಿ ಕಾರ್ಪೊರೇಟ್‌ಗಳ ಗರಿಷ್ಟ ಲಾಭಗಳಿಗೆ ನಮ್ಮ ದೇಶ ಸ್ವಯಂ– ಅಡಿಯಾಳು ಅಗುವಂತೆ ಮಾಡುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಕಲ್ಲಿದ್ದಲು ಹಲವು ಮಹತ್ವದ ಕೈಗಾರಿಕೆಗಳಿಗೆ–ವಿದ್ಯುತ್ ಉತ್ಪಾದನೆ, ಉಕ್ಕು, ಅಲುಮಿನಯಂ, ರಸಗೊಬ್ಬರ ಮತ್ತು ಸಿಮೆಂಟ್ ಉದ್ದಿಮೆಗಳಿಗೆ–ಅಗತ್ಯವಾಗಿರುವಂತಹ ಸಂಪನ್ಮೂಲ. ಆದ್ದರಿಂದ ಈಗ ರಫ್ತುಗಳ ಮೇಲಿನ ನಿಯಂತ್ರಣವೂ ಇಲ್ಲವಾಗುವುದರಿಂದ ನಮ್ಮ ದೇಶೀ ಉದ್ದಿಮೆಗಳಿಗೆ ಈ ಅಗತ್ಯ ಲಾಗುವಾಡು ಕೇಂದ್ರ ಸರಕಾರದ ಈ ನಡೆಯಿಂದಾಗಿ ಲಭ್ಯವಾಗದಂತಾಗುತ್ತದೆ.

ಇಂತಹ ಖಾಸಗೀಕರಣಕ್ಕೆ ಗುರುತಿಸಿರುವ 41 ಕಲ್ಲಿದ್ದಲು ಬ್ಲಾಕುಗಳು ದೇಶದ ವಿವಿಧ ಭಾಗಗಳಲ್ಲಿ, ಮಧ್ಯಪ್ರದೇಶ, ಛತ್ತೀಸ್‌ಗಡ, ಝಾರ್ಖಂಡ್, ತೆಲಂಗಾಣ ರಾಜ್ಯಗಳ ಅರಣ್ಯಪ್ರದೇಶಗಳಲ್ಲಿ ಇವೆ. ಇವು ನಮ್ಮ ಕೋಟ್ಯಂತರ ಜನಗಳಿಗೆ ಪಾರಂಪರಿಕ ವಾಸಸ್ಥಳಗಳು ಹಾಗೂ ಜೀವನೋಪಾಯದ ಮೂಲಗಳಾಗಿವೆ. ಆದ್ದರಿಂದ ಸರಕಾರದ ಈ ನಡೆ ನಮ್ಮ ಬುಡಕಟ್ಟು ಸಮುದಾಯಗಳ ಬದುಕುಗಳನ್ನು ಬುಡಮೇಲು ಮಾಡುತ್ತದೆ.

ಇಂತಹ ಖಾಸಗೀಕರಣದೊಂದಿಗೇ ಪರಿಸರ ವಿಧಿವಿಧಾನಗಳನ್ನು ಮತ್ತಷ್ಟು ನಿಯಂತ್ರಣಹೀನಗೊಳಿಸುವ ಕ್ರಮಗಳೂ ಬರುತ್ತವೆ. ಇದರಿಂದ ತೀವ್ರ ಪರಿಸರ ಮಾಲಿನ್ಯದ ಗಂಭೀರ ಬೆದರಿಕೆಗಳನ್ನು ಒಡ್ಡುತ್ತದೆ.

ಬಿಜೆಪಿ ಸರಕಾರ ಮಹಾಮಾರಿಯನ್ನು ಎದುರಿಸಲು ಮತ್ತು ಪ್ರಧಾನ ಮಂತ್ರಿ ಮೋದಿಯವರು ಯಾವುದೇ ಯೋಜನೆಯಿಲ್ಲದೆ, ಏಕಪಕ್ಷೀಯವಾಗಿ ಪ್ರಕಟಿಸಿದ ಲಾಕ್‌ಡೌನನಂದ ಧ್ವಂಸಗೊಂಡಿರುವ ಕೋಟ್ಯಂತರ ಬದುಕುಗಳಿಗೆ ಪೋಷಣೆ ಒದಗಿಸಲು ಸಂಪೂರ್ಣ ಗಮನ ಕೇಂದ್ರೀಕರಿಸುವ ಬದಲು, ಜನಗಳ, ಅದರಲ್ಲೂ ಕಾರ್ಮಿಕ ವರ್ಗದ ಶೋಷಣೆಯನ್ನು ಮತ್ತಷ್ಟು ತೀವ್ರಗೊಳಿಸುವ ತನ್ನ ಮೂಲ ಅಜೆಂಡಾವನ್ನೇ ಜಾರಿ ಮಾಡುತ್ತಿದೆ ಎಂದು ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ನಮ್ಮ ದೇಶದ ಹಿತದೃಷ್ಟಿಯಿಂದ ಈ ನಿರ್ಧಾರವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

41 ಕಲ್ಲಿದ್ದಲು ಬ್ಲಾಕುಗಳ ಹರಾಜನ್ನು ಹಿಂತೆಗೆದುಕೊಳ್ಳಿ –ಭೂಮಿ ಅಧಿಕಾರ್ ಆಂದೋಲನ್

ಮೋದಿ ಸರಕಾರ 41 ಕಲ್ಲಿದ್ದಲು ಬ್ಲಾಕುಗಳನ್ನು ಖಾಸಗಿಯವರಿಗೆ ಹರಾಜು ಹಾಕುವುದನ್ನು ಹಿಂತೆಗೆದುಕೊಳ್ಳಬೇಕು ಎಂದು ಭೂಮಿ ಅಧಿಕಾರ್ ಆಂದೋಲನ್(ಬಿಎಎ) ಹೇಳಿದೆ. ಕಲ್ಲಿದ್ದಲು ಒಂದು ಖಾಸಗೀ ಲಾಭದ ಸರಕಲ್ಲ, ಅದನ್ನು ಅಭಿವೃದ್ಧಿಯ ಹೆಸರಲ್ಲಿ ಮಾರಲಾಗದು ಎಂದು ಅದು ಹೇಳಿದೆ.

ದೇಶ ಹೆಚ್ಚುವರಿ ಇಂಧನವನ್ನು ಉತ್ಪಾದಿಸುತ್ತಿರುವಾಗ ಬಹುಮೂಲ್ಯ ವೃಕ್ಷಸಂಕುಲಗಳು ಹಾಗೂ ವೈವಿಧ್ಯಮಯ ವನ್ಯಜೀವಿಗಳಿರುವ ಈ 41 ಬ್ಲಾಕುಗಳಲ್ಲಿ ಗಣಿಗಾರಿಕೆಗೆ ತರಾತುರಿಯಿಂದ ಅವಕಾಶ ನೀಡುತ್ತಿರುವುದು ಸರಕಾರದ ವಾದದಲ್ಲಿರುವ ಮೋಸವನ್ನು ತೋರಿಸುತ್ತದೆ. ಅಲ್ಲದೆ ಕಲ್ಲಿದ್ದಲನ್ನು ರಫ್ತಿನ ಒಂದು ಪ್ರಾಥಮಿಕ ಉತ್ಪನ್ನವಾಗಿ ಉತ್ಪಾದಿಸುವುದರಿಂದ ದೇಶೀ ಉತ್ಪಾದನೆಗಳಿಗೆ ಕಲ್ಲಿದ್ದಲು ಬೆಲೆಗಳು ಏರಿ ರಸಗೊಬ್ಬರ, ವಿದ್ಯುತ್ ಮುಂತಾದವುಗಳ ಉತ್ಪಾದನೆಯನ್ನು ತುಟ್ಟಿಯಾಗಿಸುತ್ತದೆ.

ಕಲ್ಲದ್ದಲು ಗಣಿಗಳ ಹರಾಜು ಕ್ರಿಯೆ ರಾಜ್ಯ ಸರಕಾರಗಳ ವ್ಯಾಪ್ತಿಯಲ್ಲಿ ಬರುತ್ತದೆ. ಆದರೆ ಕೇಂದ್ರ ಸರಕಾರ ಇದನ್ನು ಮಾಡಲು ಹೊರಟಿದೆ. ಇದು ಒಕ್ಕೂಟತತ್ವದ ಭಾವನೆಗೆ ಹೊರತಾದದ್ದು. ಈಗಾಗಲೇ ಝಾರ್ಖಂಡ್ ಮುಖ್ಯಮಂತ್ರಿಗಳು ಈ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇತರ ಸಂಬಂಧಪಟ್ಟ ರಾಜ್ಯಗಳ ಮುಖ್ಯಮಂತ್ರಿಗಳೂ ಇದನ್ನು ಅನುಸರಿಸಿ, "ಜಲ, ಜಂಗಲ್, ಜಮೀನ್' ನ 'ನಿಜವಾದ ಮಾಲಿಕರಾದ ಆದಿವಾಸಿಗಳು ಮತ್ತು ಇತರ ಅರಣ್ಯವಾಸಿಗಳ ಬದುಕುಗಳು ಧ್ವಂಸವಾಗವುದನ್ನು ತಪ್ಪಿಸಬೇಕು ಎಂದು ಆಗ್ರಹಿಸಿರುವ ಬಿಎಎ, ಕೇಂದ್ರ ಸರಕಾರ ಈ ಲಂಗುಲಗಾಮಿಲ್ಲದ ಲೂಟಿಯನ್ನು ಮುಂದುವರೆಸುವುದಾದರೆ ತಾನು ಈ ಹೋರಾಟವನ್ನು ದೇಶದೆಲ್ಲೆಡೆಗಳಿಗೆ ಒಯ್ಯುವುದಾಗಿ ಹೇಳಿದೆ, ದೇಶಪ್ರೇಮಿ ನಾಗರಿಕರು ಈ ಹೋರಾಟವನ್ನು ಬೆಂಬಲಿಸಬೇಕು ಎಂದು ಅದು ಮನವಿ ಮಾಡಿಕೊಂಡಿದೆ.

ಪ್ರಧಾನ ಮಂತ್ರಿಗಳ ಹೇಳಿಕೆಗೆ ಸ್ಪಷ್ಟೀಕರಣಗಳಿಂದ ಮತ್ತಷ್ಟು ಗೊಂದಲ

ಸರಕಾರ ಬಹಳ ವಿಳಂಬದ ನಂತರ ಜೂನ್ 19ರಂದು ಭಾರತ–ಚೀನಾ ವಾಸ್ತವ ಹತೋಟಿ ರೇಖೆ(ಎಲ್.ಎ.ಸಿ) ಯಲ್ಲಿನ ಬೆಳವಣಿಗೆಗಳ ಸರಣಿಯ ಬಗ್ಗೆ ಪ್ರತಿಪಕ್ಷಗಳಿಗೆ ತಿಳಿಸಲು ಒಂದು ಸರ್ವಪಕ್ಷ ಸಭೆಯನ್ನು ಕರೆಯಿತು. ಈ ಸಭೆಯನ್ನುದ್ದೇಶಿಸಿ ಮಾತಾಡುತ್ತ ಪ್ರಧಾನ ಮಂತ್ರಿಗಳು "ನುಸುಳಿಕೆಯಿಲ್ಲ, ಆಕ್ರಮಣ ಇಲ್ಲ ಮತ್ತು ನಮ್ಮ ನೆಲೆಗಳನ್ನು ವಶಪಡಿಸಿಕೊಂಡಿಲ್ಲ" ಎಂದು ನಿಸ್ಸಂದಿಗ್ಧವಾಗಿ ಹೇಳಿದರು. ಹಾಗಿದ್ದರೆ ಘರ್ಷಣೆ ಏಕೆ? ನಮ್ಮ ಧೀರ ಸೈನಿಕರು ಹುತಾತ್ಮರಾದ್ದೇಕೆ? ಇಲ್ಲಿ ಪ್ರಸಕ್ತ ಸನ್ನಿವೇಶ ಉಂಟಾಗಿರುವ ಬಗ್ಗೆ ಮತ್ತು ಯಾವಾಗದಿಂದ ಉಂಟಾಯಿತು ಎಂಬ ಪ್ರಶ್ನೆಗಳಲ್ಲದೆ ಎಲ್.ಎ.ಸಿ.ಯಲ್ಲಿ ಮುಖಾಮುಖಿ ನಿಖರವಾಗಿ ಯಾವ ಸ್ಥಳದಲ್ಲಿ ನಡೆಯಿತು ಎಂಬ ನಿರ್ದಿಷ್ಟ ಪ್ರಶ್ನೆಯೂ ಇದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯರೊ ಈ ಬಗ್ಗೆ ಪ್ರತಿಕ್ರಿಯಿಸುತ್ತ ಹೇಳಿದೆ.

ಪ್ರಧಾನ ಮಂತ್ರಿಗಳ ಈ ಮಾತು ನಮ್ಮ ಧೀರ ಸೈನಿಕರ ವೀರಕೃತ್ಯದ ನ್ಯಾಯಬದ್ಧತೆಗೆ ಒಂದು ಪ್ರಮುಖ ಹಿನ್ನಡೆ, ಅಲ್ಲದೆ ಇದು ವಿವಾದವನ್ನು ಬಗೆಹರಿಸುವ ನಮ್ಮ ರಾಜತಾಂತ್ರಿಕ ಪ್ರಯತ್ನಗಳನ್ನು ಶಿಥಿಲಗೊಳಿಸುತ್ತದೆ ಎಂದು ಅದು ಹೇಳಿದೆ.

ಪ್ರಧಾನಮಂತ್ರಿಗಳ ಟಿಪ್ಪಣಿಗಳಿಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿರುವುದರಿಂದ ಸರಕಾರ ಈಗ ದೀರ್ಘ ಸ್ಪಷ್ಟೀಕರಣಗಳನ್ನು ಕೊಟ್ಟಿದೆ, ಒಂದು, ಪ್ರಧಾನ ಮಂತ್ರಿಗಳ ಕಚೇರಿ(ಪಿಎಂಒ)ಯು ಪತ್ರಿಕಾ ಮಾಹಿತಿ ಕಚೇರಿ(ಪಿಐಬಿ) ಮೂಲಕ ಬಂದಿದೆ, ಇನ್ನೊಂದು, ವಿದೇಶಾಂಗ ವ್ಯವಹಾರಗಳ ಮಂತ್ರಾಲಯದ ವಕ್ತಾರರಿಂದ ಬಂದಿದೆ. ತಮ್ಮದೇ ಆದ ವೈರುಧ್ಯಗಳಿರುವ ಈ ಸ್ಪಷ್ಟೀಕರಣಗಳು ಗೊಂದಲವನ್ನು ನಿವಾರಿಸುವ ಬದಲು ಮತ್ತಷ್ಟು ಗೊಂದಲವನ್ನು ಸೇರಿಸಿವೆ. ರಕ್ಷಣಾ ಮಂತ್ರಾಲಯ ಮತ್ತು ವಿದೇಶಾಂಗ ವ್ಯವಹಾರಗಳ ಮಂತ್ರಾಲಯದ ನಿಲುವುಗಳೊಂದಿಗೆ ವೈರುಧ್ಯ ಹೊಂದಿರುವ ಪ್ರಧಾನ ಮಂತ್ರಿಗಳ ಮಾತುಗಳಿಂದ ಎದ್ದು ಬಂದಿರುವ ಪ್ರಶ್ನೆಗಳನ್ನು 'ತುಂಟತನದ ವ್ಯಾಖ್ಯೆ' ಎನ್ನುವುದು, ನ್ಯಾಯಯುತವಂತೂ ಖಂಡಿತಾ ಅಲ್ಲ.

ಆದ್ದರಿಂದ ಘರ್ಷಣೆ ನಡೆದ ನಿಖರವಾದ ಸ್ಥಳ ಮತ್ತು ಈ ಘರ್ಷಣೆಗೆ ಕಾರಣವಾದ ಸನ್ನಿವೇಶಗಳನ್ನು ಕುರಿತ ಪ್ರಶ್ನೆಗಳಿಗೆ ಒಂದು ದೃಢವಾದ ಉತ್ತರ ಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯರೊ ಹೇಳಿದೆ. ಇದು ಸಂದೇಹಗಳನ್ನು ನಿವಾರಿಸಲು ಮತ್ತು ಅಧಿಕೃತವಾಗಿ ಹೇಳಿರುವಂತೆ ಘರ್ಷಣೆಯನ್ನು ತಪ್ಪಿಸುವ ಹಾಗೂ ಲಡಾಖ್‌ನಲ್ಲಿ ಎಲ್.ಎ.ಸಿ. ಗುಂಟ ಶಾಂತಿ ಮತ್ತು ಪ್ರಶಾಂತತೆಯನ್ನು ಮತ್ತೆ ನೆಲೆಗೊಳಿಸುವ ಗುರಿಯನ್ನು ಅನುಸರಿಸುವ ಪರಿಸ್ಥಿತಿಗಳನ್ನು ನಿರ್ಮಿಸಬೇಕು ಎಂದು ಅದು ಹೇಳಿದೆ.

ಸಹಕಾರಿ ಬ್ಯಾಂಕುಗಳ ಮೇಲೆ ಕೇಂದ್ರ ಸರಕಾರದ ಉಸ್ತುವಾರಿಯ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳಬೇಕು

ಕೇಂದ್ರ ಸರಕಾರ ಒಂದು ಸುಗ್ರೀವಾಜ್ಞೆಯ ಮೂಲಕ 1540 ನಗರ ಮತ್ತು ಗ್ರಾಮೀಣ ಸಹಕಾರಿ ಬ್ಯಾಂಕುಗಳ ಉಸ್ತುವಾರಿಯನ್ನು ತಾನೆ ವಹಿಸಿಕೊಂಡಿದೆ. ಸಿಪಿಐ(ಎಂ) ಪೊಲಿಟ್‌ಬ್ಯುರೋ ಇದು ಏಕಪಕ್ಷೀಯ ನರ್ಧಾರ ಎಂದು ಖಂಡಿಸುತ್ತ ಇದನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಸಹಕಾರೀ ಬ್ಯಾಂಕುಗಳೂ ಸೇರಿದಂತೆ ಸಹಕಾರಿ ವಲಯದ ಉಸ್ತುವಾರಿಯನ್ನು ರಾಜ್ಯ ಸರಕಾರಗಳು ನೋಡಿಕೊಳ್ಳುತ್ತಿವೆ. ಆದರೆ ಕೇಂದ್ರ ಸರಕಾರ ಯಾವ ಚುನಾಯಿತ ರಾಜ್ಯ ಸರಕಾರದೊಡನೆಯೂ ಸಮಾಲೋಚನೆ ನಡೆಸದೆ ಈ ನರ್ಧಾರವನ್ನು ಕೈಗೊಂಡಿದೆ. ಇದು ದೇಶದ ಒಕ್ಕೂಟ ರಚನೆಯ ಮೇಲೆ ಮತ್ತೊಂದು ದಾಳಿ. ಈ ರೀತಿಯ ವಿಪರೀತ ಕೇಂದ್ರೀಕರಣ ನಮ್ಮ ಸಂವಿಧಾನದ ಮೂಲ ಲಕ್ಷಣಗಳಲ್ಲಿ ಒಂದಾದ ಒಕ್ಕೂಟ ತತ್ವದ ಮೇಲೆ ನಡೆಸಿರುವ ಪ್ರಹಾರ. ಇದು ಸಹಕಾರಿಗಳ ಸ್ವಾಯತ್ತತೆಯನ್ನು ಧ್ವಂಸ ಮಾಡುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಸದ್ಯ ಈ ಬ್ಯಾಂಕುಗಳು 8.4 ಕೋಟಿ ಖಾತೆದಾರರನ್ನು ಮತ್ತು 4.5ಲಕ್ಷ ಕೋಟಿ ರೂ.ಗಳ ಠೇವಣಿಗಳನ್ನು ಹೊಂದಿವೆ. ಬಿಜೆಪಿ ಕೇಂದ್ರ ಸರಕಾರ ಈ ಮೋದಲು ರಿಝರ್ವ್ ಬ್ಯಾಂಕ್‌ನ ಮೀಸಲು ನಧಿಗೆ ಮಾಡಿದಂತೆ ಈ ಸಹಕಾರಿ ಬ್ಯಾಂಕುಗಳಲ್ಲಿ ಇರುವ ಅಪಾರ ಹಣದ ಮೇಲೆ ಕಣ್ಣು ಹಾಕಿದೆ.

ದೇಶದ ಬಹುಭಾಗಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ, ವಿಶೇಷವಾಗಿ ಕೃಷಿಯಲ್ಲಿ ಸಹಕಾರಿ ವಲಯ ಮತ್ತು ಅದರ ಬ್ಯಾಂಕುಗಳು ಬೆನ್ನೆಲುಬಾಗಿವೆ. ಈಗ ಅವುಗಳ ಠೇವಣಿಗಳು ಕೇಂದ್ರ ಸರಕಾರಕ್ಕೆ ಹಂಚಿಕೆಗೆ ಲಭ್ಯವಾಗುವುದರಿಂದ, ಹೆಚ್ಚಿನ ಸಾಲ ಸಾಮರ್ಥ್ಯ ಇರುವ ಶ್ರೀಮಂತರು ಬಡವರ ಖರ್ಚಿನಲ್ಲಿ ಪ್ರಯೋಜನ ಪಡೆಯಲಿದ್ದಾರೆ. ಇದು ನಮ್ಮ ಕೋಟ್ಯಂತರ ಜನಗಳ ಜೀವನಾಧಾರಗಳಿಗೆ ಬೆಂಬಲವನ್ನು ನಾಶ ಪಡಿಸುತ್ತದೆ.

ಈ ಸುಗ್ರೀವಾಜ್ಞೆಯನ್ನು ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿಯ 45ನೇ ವಾರ್ಷಿಕದಂದೇ ತಂದಿರುವುದು ನಜವಾಗಿಯೂ ಒಂದು ವ್ಯಂಗ್ಯ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದು ಭಾರತದ ಸಂವಿಧಾನಕ ವ್ಯವಸ್ಥೆಯ ಮೇಲೊಂದು ಗಂಭೀರ ದಾಳಿ ಎನ್ನುತ್ತ ಇದನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಸಂಪಾದಕೀಯ

ನೇಕಾರರ ಸಾಲ ಮನ್ನಾ ಯೋಜನೆ 6 ಮಂದಿ ಆತ್ಮಹತ್ಯೆ

ಕೆಲವು ನಿರ್ದಿಷ್ಟ ಪತ್ರಿಕೆಗಳಿಗೆ ಸರಕಾರ ನೀಡುತ್ತಿರುವ ಜಾಹೀರಾತುಗಳಿಂದ ಆ ಪತ್ರಿಕೆಗಳಿಗೆ ಒಳ್ಳೆಯ ಆದಾಯ ದೊರೆಯುತ್ತದೆ. ಕೋವಿಡ್ 19 ರ ದಾಳಿಗೆ ತುತ್ತಾಗಿ ಜನಸಾಮಾನ್ಯರು ಸಾಯುತ್ತಿದ್ದಾರೆ, ಉಚಿತ ಹಾಗೂ ಗುಣಮಟ್ಟದ ಚಿಕಿತ್ಸೆ ದೊರೆಯದೆ ಆತ್ಮಹತ್ಯೆಯಲ್ಲಿ ಪರಿಹಾರ ಕಾಣಲು ಮುಂದಾಗುತ್ತಿದ್ದಾರೆ, ಉದ್ಯೋಗ ಇಲ್ಲದೆ, ವೇತನ ಇಲ್ಲದೆ ಅಸಂಘಟಿತ ವಲಯದ ಕಾರ್ಮಿಕರು, ಕೃಷಿ ಕೂಲಿಕಾರರು ಬದುಕಿ ಉಳಿಯಲು ಪರದಾಡುತ್ತಿದ್ದಾರೆ, ಅವರಿಗೆ ಸರ್ಕಾರ ಘೋಷಿಸುವ, ಆದರೆ ಜಾರಿಮಾಡದಿರುವ ನೆರವು ಪ್ಯಾಕೇಜ್‌ಗಳ ಜಾಹಿರಾತುಗಳನ್ನು ಪ್ರಕಟಿಸಿ ಧನ್ಯರಾಗುತ್ತಿದ್ದಾರೆ! ಅಂತಹ ಒಂದು ಜಾಹಿರಾತು ಇತ್ತೀಚೆಗೆ ಹಲವು ಬಾರಿ ಪ್ರಕಟವಾಯಿತು. ಕೈಮಗ್ಗ ಮತ್ತು ಜವಳಿ ಇಲಾಖೆ ಪ್ರಕಟಿಸಿದ ಜಾಹೀರಾತು ಅದು. ಕೋವಿಡ್ 19 ರ ಹಿನ್ನಲೆಯಲ್ಲಿ ಆರ್ಥಿಕ ಹಿನ್ನಡೆಯಿಂದ ಸಂಕಷ್ಟದಲ್ಲಿರುವ ನೇಕಾರರಿಗೆ ಅವರ ಸಾಲ ಮನ್ನಾ ಮಾಡಿ ಅವರಿಗೆ ಆರ್ಥಿಕ ನೆರವು ಒದಗಿಸುವ ಸರ್ಕಾರದ ಯೋಜನೆಗೆ ಪ್ರಚಾರ ದೊರಕಿಸುವ ಜಾಹೀರಾತು ಅದಾಗಿತ್ತು. ಆದರೆ ಸರ್ಕಾರದ ಈ ಯೋಜನೆ ಇದುವರೆಗೂ ಜಾರಿಗೆ ಬಂದಿಲ್ಲ.

ನೇಕಾರರ ಸಾಲ ಮನ್ನಾ ಯೋಜನೆಯನ್ನು ಆಗಾಗ ಘೋಷಿಸಿ ಮುಖ್ಯಮಂತ್ರಿ ಯಡಿಯೂರಪ್ಪನವರು ಬಹಳಷ್ಟು ಪ್ರಚಾರ ಗಿಟ್ಟಿಸಿಕೊಂಡಿದ್ದರು. ಮುಂದಿನ ಚುನಾವಣೆಯಲ್ಲಿ ಅದರ ಲಾಭ ಪಡೆಯುವ ಕನಸು ಕಂಡಿದ್ದರು. ಆದರೆ ರಾಜ್ಯದ ನೇಕಾರರು ಅವರನ್ನು ಶಪಿಸುತ್ತಿರುವುದನ್ನು ಕಂಡೂ ಕಾಣದವರಂತಿದ್ದಾರೆ. ಇತ್ತೀಚೆಗೆ ಬೆಳಗಾವಿ, ದೊಡ್ಡಬಳ್ಳಾಪುರ, ಧಾರವಾಡ ಮುಂತಾದ ಕಡೆ 6 ಜನ ನೇಕಾರರು ಸಾಲ ಹಿಂತಿರುಗಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿರುವ ಆಘಾತಕಾರಿ ಮಾಹಿತಿ ವರದಿಯಾಗಿದೆ. ಇವರು ಬಹುತೇಕವಾಗಿ ವಿದ್ಯುತ್ ಮಗ್ಗಗಳ ನೇಕಾರರು. ಬ್ಯಾಂಕ್ ಸಾಲಪಡೆದು ಒಂದೋ, ಎರಡೋ ಮಗ್ಗಗಳನ್ನು ಖರೀದಿ ಮಾಡಿಕೊಂಡು, ಸಾಲದ ಹಣದಿಂದಲೇ ಕಚ್ಚಾ ನೂಲು ಮೊದಲಾದ ಅಗತ್ಯ ವಸ್ತುಗಳನ್ನು ತಂದು ಸೀರೆ ಮೊದಲಾದವುಗಳನ್ನು ನೇಯ್ದು, ಮಾರಾಟಮಾಡಿ ಜೀವನ ಸಾಗಿಸುತ್ತಿರುತ್ತಾರೆ. ಕಳೆದ ಕೆಲವು ತಿಂಗಳುಗಳಿಂದ ಕೋರೋನಾ ಹಾವಳಿಗೆ ಬಲಿಯಾಗಿ ಎಲ್ಲಾ ಉತ್ಪಾದನಾ ಚಟುವಟಿಕೆಗಳು ಸ್ತಬ್ಧಗೊಂಡ ಪ್ರಯುಕ್ತ ನೇಕಾರರ ಮಗ್ಗಗಳು ಸಹ ನಿಂತು ಬಿಟ್ಟವು. ನೇಯ್ದ ಜವಳಿ ಮಾರಾಟವಾಗಲಿಲ್ಲ. ನೇಕಾರರಿಗೆ ಸಹಜವಾಗಿ ಸಾಲ ಮರುಪಾವತಿ ಮಾಡಲು ಸಾಧ್ಯವಾಗಲಿಲ್ಲ. ಬಲವಂತದ ಸಾಲ ವಸೂಲಿಗೆ ಹೆದರಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯಡಿಯೂರಪ್ಪನವರ 'ನೇಕಾರರ ಸಾಲ ಮನ್ನಾ ಯೋಜನೆ' ಸರಿಯಾಗಿ ಜಾರಿಯಾಗಿದ್ದರೆ ನೇಕಾರರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಪ್ಪಿಸಬಹುದಾಗಿತ್ತು.

ಸರ್ಕಾರ ಪ್ರಕಟಿಸಿರುವ 'ನೇಕಾರರ ಸಾಲ ಮನ್ನಾ ಯೋಜನೆ' ಕೇವಲ ಸಹಕಾರ ಸಂಘಗಳ ನೇಕಾರರಿಗೆ ಮಾತ್ರ ಅನ್ವಯವಾಗುತ್ತದೆ. ಅದೂ ಕೇವಲ ಕೈಮಗ್ಗದ ನೇಕಾರರಿಗೆ. ನೇಕಾರರ ಸಹಕಾರಿ ಸಂಘಗಳಲ್ಲಿ ಬಹುತೇಕವಾಗಿ ನಡೆಯುತ್ತಿರುವುದು ಮೋಸ! ಸರಕಾರದಿಂದ ಲಭ್ಯವಾಗುವ ಇಂತಹ ಸೌಲಭ್ಯಗಳನ್ನು ಲಪಟಾಯಿಸಲು ಬಳಕೆಯಾಗುತ್ತಿರುವ ಜಾಲ. ಅಲ್ಲಿ ಯಾವುದೇ ಉತ್ಪಾದನೆ ಆಗುತ್ತಿರುವುದಿಲ್ಲ. ವಿದ್ಯುತ್ ಮಗ್ಗಗಳಲ್ಲಿ ತಯಾರಾಗುವ ಜವಳಿಯನ್ನು ತಂದು ಸಹಕಾರಿ ಸಂಘದ ಮೊಹರು ಒತ್ತಿ ಸರ್ಕಾರ ನೀಡುವ ಪ್ರೋತ್ಸಾಹ ಧನ ಇತ್ಯಾದಿಗಳನ್ನು ಕಬಳಿಸಲಾಗುತ್ತದೆ. ಕೈಮಗ್ಗದ ನೇಕಾರರ ಹಿತರಕ್ಷಣೆಗೆಂದು ನಿಗಮವೊಂದನ್ನು ರಾಜ್ಯ ಸರ್ಕಾರ ನಡೆಸುತ್ತಿದ್ದರೂ ಅಲ್ಲಿಯೂ ನೇಕಾರರಿಗೆ ಸರಿಯಾಗಿ ಕಚ್ಚಾ ನೂಲನ್ನು ಒದಗಿಸದೆ ಸಕಾಲದಲ್ಲಿ ಕೂಲಿ ಹಣ ಪಾವತಿ ಮಾಡದೆ ಸತಾಯಿಸಲಾಗುತ್ತಿದ್ದು ನೇಕಾರರು ಆಸಕ್ತಿ ಕಳೆದುಕೊಂಡು ಮಗ್ಗಗಳನ್ನು ನಿಲ್ಲಿಸಿದ್ದಾರೆ.

ಸದ್ಯ ದೊಡ್ಡಬಳ್ಳಾಪುರ, ಬೆಂಗಳೂರು, ಬೆಳಗಾವಿ, ರಾಮದುರ್ಗ, ಗದಗ, ಗಜೇಂದ್ರಗಡ, ಗುಳೇದಗುಡ್ಡ, ಮೊಳಕಾಲ್ಮೂರು ಮೊದಲಾದ ಕೆಲವು ಕೇಂದ್ರಗಳಲ್ಲಿ ವಿದ್ಯುತ್ ಮಗ್ಗಗಳಲ್ಲಿ ಜವಳಿ ಉತ್ಪಾದನೆ ಗಣನೀಯ ಪ್ರಮಾಣದಲ್ಲಿ ಬೆಳೆಯುತ್ತಿವೆ. ಒಂದೊಂದು ಕೇಂದ್ರಗಳಲ್ಲಿ ಸಾವಿರಾರು ಯುವಕರಿಗೆ ಕೆಲಸ ದೊರೆಯುತ್ತಿದೆ. ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನಕ್ಕಿಂತ ಹೆಚ್ಚು ವೇತನ ಸಿಗುತ್ತಿರುತ್ತದೆ. ಈ ಕೇಂದ್ರಗಳಲ್ಲಿ ಬೇರೆ ಜಿಲ್ಲೆಗಳಿಂದ ಹಾಗೂ ಬೇರೆ ರಾಜ್ಯಗಳಿಂದಲೂ ಕಾರ್ಮಿಕರು ವಲಸೆ ಬಂದು ದುಡಿಯುತ್ತಿರುತ್ತಾರೆ. ನೂರಾರು ಮಗ್ಗಗಳನ್ನು ಇಟ್ಟು ಕಾರ್ಮಿಕರನ್ನು ದುಡಿಸುವ ಸಾಹುಕಾರರೂ ಇದ್ದಾರೆ. ಒಂದೆರಡು ಮಗ್ಗಗಳನ್ನು ಇಟ್ಟುಕೊಂಡು ಸ್ವಂತ ಉದ್ಯೋಗ ಮಾಡುವವರೂ ಇದ್ದಾರೆ. ಇವರೇ ಹೆಚ್ಚಾಗಿ ಸಾಲಗಾರರಾಗಿ ಪರದಾಡುವವರಾಗಿದ್ದಾರೆ. ಕೊರೊನಾ ನಿರ್ವಹಣೆಯಲ್ಲಿ ಕೇಂದ್ರ ಮತ್ತು ಮತ್ತು ರಾಜ್ಯ ಸರ್ಕಾರಗಳು ಸಂಪೂರ್ಣ ವಿಫಲವಾಗಿರುವುದರಿಂದ ಇಂತಹ ದುಡಿದು ಬದುಕುವ ಸಮುದಾಯಗಳಿಗೆ ಸೇರಿದ ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ದೊಡ್ಡಬಳ್ಳಾಪುರದ ನೇಕಾರರು ಈಗಾಗಲೇ ಹಲವು ಬಾರಿ ಪ್ರತಿಭಟನೆಗಳನ್ನು ಮಾಡಿ ಸರ್ಕಾರದ ಗಮನ ಸೆಳೆದಿದ್ದಾರೆ. ಅವರ ಎಲ್ಲಾ ಸಾಲವನ್ನು ಮನ್ನಾ ಮಾಡಬೇಕು. ಕೊರೊನಾ ಅವಧಿ ಮುಗಿಯುವ ವರೆಗೆ ನೇಕಾರ ಕುಟುಂಬಗಳಿಗೆ ಕನಿಷ್ಠ 10 ಸಾವಿರ ರೂ. ಮಾಸಿಕ ನೆರವು ನೀಡಬೇಕು. ಉಚಿತ ಆಹಾರ ಧಾನ್ಯಗಳ ಕಿಟ್‌ಗಳನ್ನು ವಿತರಿಸಬೇಕು. ಬಾಕಿ ಇರುವ ವಿದ್ಯುತ್ ಶುಲ್ಕವನ್ನು ಮನ್ನಾ ಮಾಡಬೇಕು. ಕಚ್ಚಾ ವಸ್ತುಗಳನ್ನು ಸುಲಭ ದರದಲ್ಲಿ ಪೂರೈಸಬೇಕು. ಈ ಬೇಡಿಕೆಗಳಿಗಾಗಿ ನೇಕಾರರು ನಡೆಸಲು ಉದ್ದೇಶಿಸಿರುವ ಮುಂದಿನ ಹೋರಾಟಗಳಿಗೆ ನಾವೆಲ್ಲರೂ ಸಂಪೂರ್ಣ ಬೆಂಬಲ ನೀಡಬೇಕು.

ಕೋವಿಡ್– 19 ಸಮಸ್ಯೆ ಇತ್ಯರ್ಥವಾಗುವವರೆಗೆ ಖಾಸಗಿ ಆಸ್ಪತ್ರೆಗಳನ್ನು ಸ್ವತಃ ಸರಕಾರವೇ ನಡೆಸಲು ಸಿಪಿಐಎಂ ಒತ್ತಾಯ

ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ

ರಾಜ್ಯ ಸರಕಾರ ಹೆಚ್ಚಳವಾಗುತ್ತಿರುವ ಕೋವಿಡ್ – 19 ಕ್ಕೆ ಚಿಕಿತ್ಸೆ ನೀಡಲು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸ್ಥಳಾವಕಾಶವಿಲ್ಲವೆಂದು ಹೇಳಿ, ಖಾಸಗಿ ಆಸ್ಪತ್ರೆಗಳನ್ನು ಚಿಕಿತ್ಸೆಗಾಗಿ ಬಳಸಿಕೊಳ್ಳಲು ಮುಂದಾಗಿರುವುದು ಸ್ವಾಗತಾರ್ಹವಾಗಿದೆ.

ಆದರೇ, ಕೋವಿಡ್ – 19 ನಿವಾರಣೆಗಾಗಿ ನಿಗದಿಸಿರುವ ಖಾಸಗೀ ಸೇವೆಯ ಶುಲ್ಕಗಳು ಭರಿಸಲಾಗದಷ್ಟು ಹೆಚ್ಚಾಗಿವೆ.ಇದು ವಿಮಾ ವ್ಯಾಪ್ತಿಯಲ್ಲಿಲ್ಲದ ಕುಟುಂಬಗಳಿಗೆ ಮರಣ ಶಾಸನವಾಗಲಿದೆ. ಕೋವಿಡ್ – 19 ಸಮುದಾಯದ ಮಟ್ಟಕ್ಕೆ ವಿಸ್ತರಿಸಲ್ಪಡುತ್ತಿರುವಾಗ, ಇಂತಹ ಕುಟುಂಬಗಳು ತಮ್ಮ ಕುಟುಂಬಗಳ ರಕ್ಷಣೆಗಾಗಿ ಕನಿಷ್ಟ 20 ಲಕ್ಷ ರೂಗಳಿಗೂ ಅಧಿಕ ಮೊತ್ತವನ್ನು ವ್ಯಯಿಸಬೇಕಾಗುತ್ತದೆ. ಇದು ರಾಜ್ಯದ ಇಂತಹ ಶೇ 95 ಕುಟುಂಬಗಳಿಗೆ ಅತ್ಯಂತ ದುಬಾರಿಯಾದುದಾಗಿದೆ. ಅಂತಹ ಮೊತ್ತವನ್ನು ವ್ಯಯಿಸಲಾಗದೇ ಇಂತಹ ಕುಟುಂಬಗಳು ಬೇರೆ ದಾರಿಯಿಲ್ಲದೇ, ಸಾವುಗಳಿಗೆ ಶರಣಾಗುವ ಸಂಭವಗಳು ಹೆಚ್ಚಾಗಲಿವೆ. ಇದು ಸರಕಾರ ಸಾಮಾಜಿಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಫಲಾಯನವಾಗಿದೆ.

ಸರಕಾರವೇ, ವಿಮಾ ಸೌಲಭ್ಯ ಹೊಂದಿರುವ ಕೋವಿಡ್ – 19 ರೋಗಿಗಳಿಗೆ ಚಿಕಿತ್ಸೆ ನೀಡುವ ಮೂಲಕ ಅಲ್ಲಿನ ಆದಾಯವನ್ನು ವಿಮೆ ಇಲ್ಲದವರ ಉಚಿತ ಚಿಕಿತ್ಸೆಗೂ ಮತ್ತು ಸಾರ್ವಜನಿಕ ಆರೋಗ್ಯವನ್ನು ವಿಸ್ತರಿಸಲು ಸಾರ್ವಜನಿಕ ಬಂಡವಾಳದ ಜೊತೆ ಬಳಸಿಕೊಳ್ಳ ಬೇಕು.

ಅದಾಗದೇ, ಖಾಸಗೀ ಆಸ್ಪತ್ರೆಗಳ ಆದಾಯ ಹೆಚ್ಚಿಸುವ ನೀತಿಯನ್ನು ಅನುಸರಿಸುವುದರಿಂದ, ಸಾರ್ವ ಜನಿಕ ಆರೋಗ್ಯ ರಕ್ಷಣೆಯ ವಿಸ್ತರಣೆ ಬದಲಿಗೆ, ಸಾರ್ವಜನಿಕ ಆದಾಯದ ಲೂಟಿಗೆ ನೆರವಾಗಲಿದೆ. ಇದು ರಾಜ್ಯವನ್ನು ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ದೂಡಲಿದೆ.

ಆದ್ದರಿಂದ, ಕೋವಿಡ್ 19 ಸಮಸ್ಯೆ ಇತ್ಯರ್ಥವಾಗುವವರೆಗೆ ರಾಜ್ಯ ಸರಕಾರವೇ ಖಾಸಗೀ ಆಸ್ಪತ್ರೆಗಳನ್ನು ವಹಿಸಿಕೊಂಡು, ಎಲ್ಲರಿಗೂ ಉಚಿತ ಆರೋಗ್ಯ ಸೌಲಭ್ಯ ನೀಡುವಂತೆ ಕಾರ್ಯ ನಿರ್ವಹಿಸುವುದೇ ಜನರ ರಕ್ಷಣೆಯ ಸಾಧನವಾಗಲಿದೆ.

ಕೋವಿಡ್ – 19 ರ ಹಾಗೂ ಲಾಕ್ ಡೌನ್ ಅವಧಿಯ ಕಾರಣದಿಂದ ಈ ಖಾಸಗೀ ಸಂಸ್ಥೆಗಳು ಸಂಕಷ್ಟದಲ್ಲಿವೆ. ಅಲ್ಲಿನ ನೌಕರರು/ ಆರೋಗ್ಯ ಕಾರ್ಯಕರ್ತರು ತೊಂದರೆಯಲ್ಲಿದ್ದಾರೆ. ಅವುಗಳನ್ನು ಪರಿಹರಿಸಬೇಕಾಗಿದೆ. ಆ ನೆಲೆಯಲ್ಲಿ ಅವುಗಳನ್ನು ಸರಕಾರ ವಹಿಸಿಕೊಂಡು ನಡೆಸುವುದು ಎಲ್ಲಾ ರೀತಿಯಲ್ಲೂ ಸರಿಯಾದುದಾಗಿದೆ.

ಇನ್ನೂ ಕೂಡಾ, ಅಗತ್ಯವಿದ್ದಲ್ಲಿ ಕಲ್ಯಾಣ ಮಂಟಪಗಳು, ಲಾಡ್ಜ್‌ಗಳು, ತಾತ್ಕಾಲಿಕ ಶೆಡ್‌ಗಳೊಂದಿಗೆ ಮೈದಾನಗಳನ್ನು ಬಳಸಿಕೊಳ್ಳಬಹುದಾಗಿದೆ.

ಈ ಕುರಿತು ಅಗತ್ಯ ಕ್ರಮ ವಹಿಸಲು ಜನಗಳ ಆದಾಯದ ಲೂಟಿ ತಡೆಯಲು ವಿನಂತಿ.

ಯು. ಬಸವರಾಜ
ಕಾರ್ಯದರ್ಶಿ, (24.06.2020)

ನೇಕಾರ ಕಾರ್ಮಿಕ ಬಂಧುಗಳಿಗೆ ಸಮಗ್ರ ಪ್ಯಾಕೇಜ್ ಘೋಷಿಸಲು ಸಿಪಿಐಎಂ ಆಗ್ರಹ

ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ

ಕರ್ನಾಟಕ ರಾಜ್ಯದಲ್ಲಿ ಸುಮಾರು 60 ಲಕ್ಷದಷ್ಟು ನೇಕಾರ ಸಮುದಾಯದವರಿದ್ದಾರೆ. ನೇಕಾರ ವೃತ್ತಿ ಹೊಟ್ಟೆ ತುಂಬಿಸದೆಂದು ಅರಿತ ಬಹುತೇಕರು ವೃತ್ತಿಯಾಚೆ ಬದುಕು ಕಂಡುಕೊಳ್ಳುವ ಹೋರಾಟದಲ್ಲಿದ್ದಾರೆ. ಇವರಲ್ಲಿ ನೇಕಾರ ವೃತ್ತಿಯಲ್ಲಿ ಅಂದರೇ, ಕೈಮಗ್ಗ ಹಾಗೂ ವಿದ್ಯುತ್ ಚಾಲಿತ ಮಗ್ಗಗಳಲ್ಲಿ ಕಾರ್ಮಿಕರಾಗಿ ಹಾಗೂ ಸ್ವ ಉದ್ಯೋಗದಲ್ಲಿ ತೊಡಗಿ, ಕಾರ್ಯ ನಿರ್ವಹಿಸುವವರ ಸಂಖ್ಯೆಯು ಸುಮಾರು 15 ಲಕ್ಷವಾಗಿದೆ ಎಂದು ಗುರುತಿಸಲಾಗಿದೆ. ರಾಜ್ಯ ಸರಕಾರ ಇವರನ್ನು ಗುರುತಿಸಿ ನೊಂದಾಯಿಸಿಕೊಳ್ಳುವ ಕಾರ್ಯ ಇದುವರೆವಿಗೂ ಕೈಗೊಂಡಿಲ್ಲ ಅವರಿಗೆ ಗುರುತಿನ ಚೀಟಿಯನ್ನು ನೀಡಿಲ್ಲ.

ಹೆಚ್ಚುತ್ತಿರುವ ಕೋವಿಡ್ – 19 ಸಾಂಕ್ರಾಮಿಕ ಹಾಗೂ ಅದನ್ನು ಎದುರಿಸಲು, ಪೂರ್ವಭಾವಿ ಯೋಚಿಸದೇ, ಯೋಜಿಸದೇ, ಕೈಗೊಂಡ ಲಾಕ್ ಡೌನ್ ಗಳು ಮತ್ತು ಸೀಲ್ ಡೌನ್ ಗಳು ಇವರನ್ನು ವಾಸ್ತವಿಕವಾಗಿ ಹೊಸಕಿಹಾಕಿವೆ ಎಂದರೆ ತಪ್ಪಾಗಲಾರದು. ಇವುಗಳ ಪರಿಣಾಮವಾಗಿ ಇದುವರೆಗೆ 06 ಜನ ನೇಕಾರ ವೃತ್ತಿಯಲ್ಲಿರುವವರು ಸಾಲ ಹಾಗೂ ಹಸಿವಿನ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಈ ಗುಡಿ ಹಾಗೂ ಸಣ್ಣ ಕೈಗಾರಿಕೆಗಳು ಈ ದಿನಗಳಲ್ಲಿ ಅತ್ಯಂತ ಗಂಭೀರ ಬಿಕ್ಕಟ್ಟಿಗೆ ಒಳಗಾಗಿವೆ.

ಸಾಂಕ್ರಾಮಿಕದ ಕಾರಣದಿಂದ ಶುಭ ಕಾರ್ಯಗಳು ಜರುಗುತ್ತಿಲ್ಲ. ಇದರಿಂದ ಹಾಗೂ ಲಾಕ್ ಡೌನ್ ಗಳಿಂದಾಗಿ, ದಶ ಲಕ್ಷಾಂತರ ಸಂಖ್ಯೆಯಲ್ಲಿ ನೇಯ್ದ ಸೀರೆ ಮತ್ತಿತರೆ ಜವಳಿಗಳು ಮಾರಾಟವಾಗುತ್ತಿಲ್ಲ. ಮಾರಾಟವಾಗದ ಕಾರಣದಿಂದ ಮರಳಿ ಉತ್ಪಾದಿಸಲಾಗುತ್ತಿಲ್ಲ. ಇದರಿಂದಾಗಿ ಈ ಎಲ್ಲರೂ ಸಾಲಬಾಧಿತರಾಗಿದ್ದಾರೆ. ವಿದ್ಯುತ್ ಬಿಲ್ ಪಾವತಿಸಲಾಗುತ್ತಿಲ್ಲ. ತಮ್ಮ ಶ್ರಮದ ಮೇಲೆ ಆಧರಿಸಿದ ಕಾರ್ಮಿಕರ ಕುಟುಂಬಗಳಂತೂ ಹೊಟ್ಟೆಗಿಲ್ಲದೇ ಹಸಿವಿನ ತೀವ್ರ ಸಂಕಷ್ಟಗಳನ್ನೆದುರಿಸುತ್ತಿವೆ. ಹಲವರು, ಇದ್ದ ಬದ್ದ, ಸಣ್ಣ ಪುಟ್ಟ ಆಸ್ತಿ ಪಾಸ್ತಿಗಳನ್ನು ಮಾರಾಟ ಮಾಡಿಕೊಂಡರೂ, ಈ ಸಂಕಷ್ಟ ಹೆಚ್ಚುತ್ತಲೇ ಇದೆ. ಹೇಗಾದರಾಗಲಿ, ಉತ್ಪಾದನೆ ಮುಂದುವರೆಸೋಣವೆಂದು ಕೊಂಡವರಿಗೆ, ನೂಲು, ಜರಿ ಮುಂತಾದ ಕಚ್ಚಾ ಸಾಮಗ್ರಿಗಳು ಲಾಕ್ ಡೌನ್ ಹಾಗೂ ಸಾಂಕ್ರಾಮಿಕ ಕಾರಣದಿಂದಾಗಿ ದೂರದ ರಾಜ್ಯಗಳಿಂದ ತರಲಾಗುತ್ತಿಲ್ಲ. ಒಟ್ಟಾರೇ ಉತ್ಪಾದನೆ ಇಲ್ಲ? ಮಾರಾಟವಿಲ್ಲ? ಆದಾಯವಿಲ್ಲ? ಹೀಗಾಗಿ ಕುಟುಂಬ ನಡೆಸುವುದಾದರೂ ಹೇಗೆ? ಬೆಳೆಯುತ್ತಿರುವ ಬಡ್ಡಿಯ ಸಾಲ ತೀರಿಸುವುದಾದರೂ ಹೇಗೆ? ಎಂಬ ಪ್ರಶ್ನೆಗಳು ಇವರನ್ನು ಕಾಡುತ್ತಿವೆ.

ರಾಜ್ಯ ಸರಕಾರ ಈ ನಡುವೆ ಕೇವಲ ತಲಾ ಎರಡು ಸಾವಿರ ರೂಗಳ ನೆರವು ನೀಡಲು ಮುಂದಾಗಿರುವುದು ತಮಾಷೆಯ ವಿಚಾರವಾಗಿದೆ.

ಪುಟ 4 ಕ್ಕೆ

ಕೃಷಿ ಕಾಳಜಿ ಮೆರೆದ ಪಡುಕೋಣೆ ಡಿವೈಎಫ್ಐ ತಂಡ: ಹಡಿಲು ಭೂಮಿಯನ್ನು ಹಸನು ಮಾಡುವ ಪರಿಕ್ರಮ ಇದು



ಪಡುಕೋಣೆ, ಜೂ.21: ಕೃಷಿಯತ್ತ ಯುವ ಸಮುದಾಯವನ್ನು ಆಕರ್ಷಿಸಬೇಕು, ಹಡಿಲು ಭೂಮಿಯನ್ನು ಹಸನು ಮಾಡಬೇಕು ಎನ್ನುವ ಸದುದ್ದೇಶದಿಂದ ಡಿವೈಎಫ್ಐ ಪಡುಕೋಣೆ ಘಟಕದ ಹಡಿಲು ಭೂಮಿಯಲ್ಲಿ ಸಾಗುವಳಿ ಮಾಡುವ ಯೋಜನೆ ಕಾರ್ಯಗತಗೊಳಿಸಿ ಯುವ ಜನಾಂಗಕ್ಕೆ ಮಾದರಿಯಾಗಿದೆ. ಕಳೆದ ವರ್ಷ ಈ ಯೋಚನೆಯನ್ನು ಯೋಜನೆಯನ್ನಾಗಿ ಕಾರ್ಯಗತಗೊಳಿಸಿದೆ.

ಡಿವೈಎಫ್ಐ ಗೆಳೆಯರ ಸಾಂಘಿಕ ಪರಿಶ್ರಮದಿಂದ ಕಳೆದ ಮುಂಗಾರು ಹಂಗಾಮಿಯಲ್ಲಿ ಯಶಸ್ವಿಯಾದ ತಂಡ ಈ ವರ್ಷವೂ ಕೂಡಾ ಅದೇ ಹುರುಪಿನಿಂದ ಗಟ್ಟಿಗಿಳಿಯುವ ಸಂಕಲ್ಪ ಮಾಡಿದೆ. ಎಲ್ಲೆಡೆ ಜನ ಸೂರ್ಯಗ್ರಹಣ ಎಂದು ಮನೆಯಲ್ಲಿ ಕುಳಿತಿದದರೆ ಪಡುಕೋಣೆ ಯಲ್ಲಿ ಸಾಮೂಹಿಕ ನಾಟಿಯ ಸಡಗರ ಮನೆ ಮಾಡಿತ್ತು. ಸುಮಾರು 50ಕ್ಕೂ ಹೆಚ್ಚು ಮಹಿಳೆಯರು ನಾಟಿ ಕಾರ್ಯದಲ್ಲಿ ಭಾಗಿಯಾದರೆ, ಡಿವೈಎಫ್ಐ ಸಂಗಾತಿಗಳು ಸ್ವಯಂ ಪ್ರೇರಣೆಯಿಂದ ಮೇಲಾಳುಗಳಾಗಿ ಕಾರ್ಯನಿರ್ವಹಿಸಿದರು.

ಹಡಿಲು ಬಿದ್ದಿರುವ ಸುಮಾರು ಐದು ಮುಡಿ ಭತ್ತದ ಬೆಳೆಗೆ ಯೋಗ್ಯವಾದ ಭೂಮಿಯನ್ನು ಆ ಭೂಮಾಲಕರನ್ನು ಒಪ್ಪಿಗೆ ಪಡೆದು ವೈಜ್ಞಾನಿಕವಾಗಿ ಮಣ್ಣು ಪರೀಕ್ಷೆ ನಡೆಸಿ, ಅಗತ್ಯ ಪೋಷಕಾಂಶಗಳನ್ನು ಬಳಕೆ ಮಾಡಿ ನಾಟಿ ಮಾಡಲಾಯಿತು. ವೈಜ್ಞಾನಿಕ ಹಾಗೂ ಸಾಂಪ್ರಾದಾಯಿಕ ಪದ್ಧತಿ ಎರಡನ್ನು ಬಳಸಿಕೊಂಡು ಸಾಲು ನಾಟಿ ಮಾಡಲಾಯಿತು. ಭತ್ತದ ಬೇಸಾಯ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆ. ಕಾರ್ಮಿಕರ ಕೊರತೆಯಿಂದ ಅನ್ನದ ಬಟ್ಟಲುಗಳಾಗಿದ್ದ ಕರಾವಳಿಯ ಭತ್ತದ ಗದ್ದೆಗಳು ಹಡಿಲು ಬಿದ್ದಿವೆ. ಮುಖ್ಯವಾಗಿ ಯುವಜನತೆ ಗದ್ದೆಯತ್ತ ಬಾರದಿರುವುದೆ ಈ ಹಿನ್ನೆಡೆಗೆ ಕಾರಣ. ಈ ಸಂದರ್ಭದಲ್ಲಿ ಪಡುಕೋಣೆಯ ಯುವ ಪಡೆ ಹೊಸದೊಂದು ಸಾಹಸಕ್ಕೆ ಮುಂದಾಗಿದ್ದಾರೆ. ಹಡಿಲು ಭೂಮಿಯನ್ನು ಹಸನು ಮಾಡಲು ಹೊರಟ ಈ ಯುವಕರ ಕಥೆ ಪ್ರಸ್ತುತ ಅನುಕರಣೀಯವಾಗಿದೆ.

ಡಿವೈಎಫ್ಐ ಪಡುಕೋಣೆ ಘಟಕ ಸಾಮಾಜಿಕವಾಗಿ ಸಕ್ರೀಯತೆಯಿಂದ ತೊಡಗಿಸಿಕೊಂಡ ಸಂಸ್ಥೆ, ನಾವು ಏನಾದರೂ ಯುವ ಜನತೆಗೆ ಸೂರ್ತಿಯಾಗುವಂಥಹ ಕಾರ್ಯ ಮಾಡುತ್ತಲೇ ಇರುತ್ತಾರೆ. ಕಳೆದ ವರ್ಷ ಕೃಷಿಗೆ ಉತ್ತೇಜನ ನೀಡುವಂತಹ ಕಾರ್ಯಕ್ಕೆ ಮುಂದಾಗಿದ್ದಾರೆ.

ರವಿವಾರ ಬೆಳಿಗ್ಗೆಯಿಂದ ಮಾರಸ್ವಾಮಿ ದೇವಸ್ಥಾನದ ಹಿಂಭಾಗದ ವಿಶಾಲ ಗದ್ದೆಯಲ್ಲಿ ಜನರ ಜಂಗುಳಿ. ಟಿಲ್ಲರಳು ಉಳುಮೆ ಮಾಡುತ್ತಿದ್ದರೆ, ಗದ್ದೆಯ ಆಚೆ ಭಾಗದ ಈಚೆ ಭಾಗದ ತನಕ ನಾಟಿ ಮಾಡುವ ಮಹಿಳೆಯರ ಸಾಲು ಬಹು ಹಿಂದಿನ ಕಂಬಳಗದ್ದೆ ನಾಟಿಯ ನೆನಪನ್ನು ಮೆಲುಕು ಹಾಕಿತ್ತು. ಗದ್ದೆಯಲ್ಲಿ ಹಾರೆ ಹಿಡಿದು ಬದು ಸರಿ ಪಡಿಸುವಲ್ಲಿಂದ ಮೂಲೆ ಕೊಚ್ಚುವುದು, ದಂಡೆ ಒಡೆಯುವುದು, ಸಮತಟ್ಟು ಮಾಡುವುದು, ನೇಜಿ ತಂದು ಕೊಡುವುದು, ಸಾಲಿಗೆ ಹಗ್ಗ ಹಿಡಿಯುವುದು, ರಸ ಗೊಬ್ಬರ ಬಿಕ್ಕುವುದು ಹೀಗೆ ಒಂದೊಂದು ಕೆಲಸದಲ್ಲಿಯೂ ಅತೀವ ಉತ್ಸಾಹ, ಶ್ರದ್ದೆಯ ಭಾಗವಹಿಸುವಿಕೆ ಹತ್ತಾರು ಜನರಿಗೆ ಸ್ಫೂರ್ತಿ ನೀಡಿತು.

ಈ ಯುವಕರು ಒಬ್ಬಬ್ಬರು ಒಂದೊಂದು ರಂಗದಲ್ಲಿ ಬ್ಯುಸಿಯಿರುವವರು ಕೆಲಸ ಒತ್ತಡದ ನಡುವೆ ಭಾನುವಾರ ಕೆಸರು ಗದ್ದೆಯಲ್ಲಿ ಕೃಷಿ ಖುಷಿಯ ಸಂಭ್ರಮ ಅನುಭವಿಸಿದರು. ಕೆಸರು ಗದ್ದೆಯಲ್ಲಿ ಕೆಲಸ ಮಾಡುವ ಅವಕಾಶಗಳೇ ಇಲ್ಲದ ಈ ದಿನಗಳಲ್ಲಿ ಮೈ ಕೈ ಕೆಸರು ಮಾಡಿಕೊಂಡು ಸಂಭ್ರಮ ಪಟ್ಟ ಪರಿ ಅನನ್ಯ. ಡಿವೈಎಫ್ಐ ಗೆಳೆಯರ ಈ ಕಹಾನಿ ಇಲ್ಲಿಗೆ ಮುಗಿಯುವುದಿಲ್ಲ. ಕೃಷಿ ಹೆಜ್ಜೆಯನ್ನು ಮುಂದೆ ಮುಂದೆ ಮಾದರಿಯಾಗಿ ಇರಿಸುವ ಇಂಗಿತ ಹೊಂದಿದ್ದಾರೆ. ಕೃಷಿಯೋಗ್ಯ ಭೂಮಿ ವ್ಯರ್ಥವಾಗಿ ಹಡಿಲು ಬಿದ್ದು ಫಲವತ್ತತೆ ಕಳೆದುಕೊಳ್ಳುವ ಬದಲು ಸಾಗುವಳಿ ಮಾಡಬೇಕಿದೆ. ಮುಖ್ಯವಾಗಿ ವಿಜ್ಞಾನ, ತಂತ್ರಜ್ಞಾನ, ಉನ್ನತ ಶಿಕ್ಷಣ ಎಷ್ಟೇ ಎತ್ತರಕ್ಕೇರಿದರೂ ಕೃಷಿ ಸಂಸ್ಕತಿಯ ಮುಂದೆ ಅದೆಲ್ಲಾ ಗೌಣ. ನೇಗಿಲಯೋಗಿ ಉಳುಮೆ ಮಾಡಿದರೆ ಮಾತ್ರ ಉಣ್ಣಲು ಅನ್ನ. ಎಲ್ಲರೂ ಅಲಸ್ಯ ಮನೋಭಾವ ತಾಳಿ ಕೃಷಿ ಕೈ ಬಿಟ್ಟರೆ ಉಣ್ಣುವ ಅನ್ನವನ್ನು ಯಂತ್ರಗಳು ತಯಾರಿಸಿ ಕೊಡುವ ಕಾಲ ಬರಬಹುದು. ಅದಕ್ಕೆ ಯುವ ಜನಾಂಗ ಜಾಗ್ರತರಾಗಬೇಕು. ಕೃಷಿ ಖುಷಿ ಕೊಡುತ್ತದೆ. ನಾವೆಲ್ಲಾ ಒಟ್ಟಾಗಿ ಕೃಷಿಯನ್ನು ಪ್ರೀತಿಸುವ, ಭತ್ತದ ಭೂಮಿಯನ್ನು ಹಸನುಗೊಳಿಸುವ ಎನ್ನುವ ಉದಾತ್ತ ಪಡುಕೋಣೆ ಡಿವೈಎಫ್ ಐ ಘಟಕ ಸಂದೇಶ ನೀಡಿದೆ.

ಈ ಸಂದರ್ಭದಲ್ಲಿ ಪಡುಕೋಣೆ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ರಾಜೀವ ಪಡುಕೋಣೆ, ನಾಡ ಗ್ರಾಮ ಪಂಚಾಯತ್ ಸದಸ್ಯರಾದ ರಾಜೇಶ ಪಡುಕೋಣೆ, ಡಿವೈಎಫ್ಐ ಪಡುಕೋಣೆ ಘಟಕ ಅಧ್ಯಕ್ಷ ನಾಗರಾಜ ಕುರು, ಕಾರ್ಯದರ್ಶಿ ಕಿರಣ್ ಪಡುಕೋಣೆ, ಡಿವೈಎಫ್ಐ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು. ಮೊದಲಾದವರು ಉಪಸ್ಥಿತರಿದ್ದರು.

“ಯುವಜನರನ್ನು ಕೃಷಿ ಮಾಡುವುದರತ್ತ ಉತ್ತೇಜಿಸಬೇಕು ಎನ್ನುವುದು ನಮ್ಮ ಉದ್ದೇಶ. ಆ ಹಿನ್ನೆಲೆಯಲ್ಲಿ ನಮ್ಮ ತಂಡ ಕಳೆದ ವರ್ಷ ಈ ತೀರ್ಮಾನ ತೆಗೆದುಕೊಂಡು ಈ ಪ್ರಯತ್ನ ಮಾಡಿದ್ದೇವೆ. ಹಡಿಲು ಬಿದ್ದಿರುವ ಭತ್ತದ ಗದ್ದೆಗಳನ್ನು ಆ ಭೂಮಾಲಕರನ್ನು ಒಪ್ಪಿಸಿ, ಕೃಷಿಗೆ ಸಿದ್ಧಪಡಿಸಿ ಕಳೆದ ವರ್ಷನಾಟಿ ಮಾಡಿದೆವು. ಅದೇ ಸ್ಪೂರ್ತಿಯಿಂದ ಈ ವರ್ಷವೂ ಅದನ್ನು ಮುಂದುವರಿಸಿದ್ದೇವೆ. ಪಡುಕೋಣೆ ಡಿವೈಎಫ್ಐನ ಎಲ್ಲರೂ ಇದರಲ್ಲಿ ಪಾಲ್ಗೊಂಡಿದ್ದಾರೆ’

–ನಾಗರಾಜ ಕುರು

(**ಹಡಿಲು ಭೂಮಿ** – ಹಲವು ವರ್ಷಗಳಿಂದ ಬೇಸಾಯ ಮಾಡದೆ ಇರುವ ಭೂಮಿ, **5 ಮುಡಿ ಪ್ರದೇಶ** – ಸುಮಾರು 3 ಎಕ್ರೆ)

ಬಸ್ ಪ್ರಯಾಣ ದರ ಏರಿಕೆ ಉಡುಪಿ ಜಿಲ್ಲಾಡಳಿತದ ಸ್ಪಷ್ಟನೆಗೆ ಸಿಪಿಐ(ಎಂ) ಆಗ್ರಹ

ದೈಹಿಕ ಅಂತರ ಕಾಪಾಡುವುದು, ಪ್ರಯಾಣಿಕರ ಸಂಖ್ಯೆಯಲ್ಲಿ ಕುಂಠಿತ, ಸ್ಯಾನಿಟೈಸರ್ ಬಳಕೆ ಮುಂತಾದ ಕಾರಣಗಳನ್ನು ಮುಂದಿಟ್ಟು ಬಸ್ ಪ್ರಯಾಣದ ದರಗಳನ್ನು ಹೆಚ್ಚಿಸಿದ್ದು, ಅದನ್ನು ಖಾಯಂ ಆಗಿ ಮುಂದುವರಿಸುವ ಲಕ್ಷಣಗಳು ಕಾಣುತ್ತಿವೆ. ಇದಕ್ಕೆ ಜಿಲ್ಲಾಡಳಿತ ಸ್ಪಷ್ಟನೆ ನೀಡಬೇಕೆಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಆಗ್ರಹಿಸಿದೆ.

ಕರೋನಾ ಪೀಡಿತ ಅವಧಿಯಲ್ಲಿ ಉಂಟಾಗಿರುವ ಬೇರೆ ಬೇರೆ ಕಾರಣಗಳಿಂದಾಗಿ ಶೇ 15ರಷ್ಟು ಬಸ್ ದರ ಹೆಚ್ಚಳಕ್ಕೆ ಸಾರಿಗೆ ಅಧಿಕಾರಿಗಳು ಅವಕಾಶ ನೀಡುತ್ತಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆದರೆ ಬಸ್ ಮಾಲಕರ ಸಂಘದ ಮುಖಂಡ ಹಾಗೂ ಉಡುಪಿ ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಕುಯಿಲಾಡಿ ಸುರೇಶ್ ನಾಯಕ್ ಅವರು “ಇದು ಕರೋನ ದರ ಏರಿಕೆಯಲ್ಲ, ದರ ಪರಿಷ್ಕರಣೆ” ಎಂದು ಹೇಳಿರುತ್ತಾರೆ. ಅಂದರೆ ಖಾಯಂ ಆಗಿ ದರ ಹೆಚ್ಚಳ ಮಾಡಲಾಗಿದೆ. ಜಿಲ್ಲಾಡಳಿತ ಈ ಕುರಿತು ಸ್ಪಷ್ಟನೆ ನೀಡಬೇಕು ಎಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಶೇ. 15 ರಷ್ಟು ದರ ಹೆಚ್ಚಳ ಎಂದು ಹೇಳಿದ್ದರೂ ಕೆಲವು ಹಂತಗಳಲ್ಲಿ ಶೇ. 50 ರಷ್ಟು ದರ ಹೆಚ್ಚಳವಾಗಿದೆ.ಉದಾಹರಣೆಗೆ ಉಡುಪಿಯ ಪೆರಂಪಳ್ಳಿಯಿಂದ ಸಿಟಿ ಬಸ್ ನಿಲ್ದಾಣಕ್ಕೆ ಮೊದಲು 8 ರೂ. ತೆಗೆದುಕೊಳ್ಳುತ್ತಿದ್ದು, ಈಗ ರೂ. 12 ಕ್ಕೆ ಹೆಚ್ಚಿಸಲಾಗಿದೆ. ಉಡುಪಿ–ಮಣಿಪಾಲ ರೂ. 9 ರಿಂದ ರೂ. 12ಕ್ಕೆ ಹೆಚ್ಚಿಸಲಾಗಿದೆ (ಶೇ. 33) ಕುಂದಾಪುರದಿಂದ ಉಡುಪಿಗೆ 45 ರಿಂದ ರೂ.55ಕ್ಕೆ ಹೆಚ್ಚಿಸಲಾಗಿದೆ. ಸಂಕಷ್ಟದಲ್ಲೂ ಲಾಭ ಮಾಡುವುದು ವ್ಯಾಪಾರಿ ಧರ್ಮ ಎಂಬ ನಿರ್ಧಾರಕ್ಕೆ ಬಸ್ ಮಾಲಕರು ಬಂದಂತಿದೆ.

ಇನ್ನೊಂದೆಡೆಯಲ್ಲಿ ತಮ್ಮ ನೌಕರರ ವೇತನದಲ್ಲಿ ವಿಪರೀತ ಕಡಿತ ಮಾಡಲಾಗಿದೆ. ಹಿಂದೆ ದಿನಕ್ಕೆ 700–800 ರೂ ವೇತನ ಪಡೆಯುತ್ತಿದ್ದ ಚಾಲಕರು ಈಗ ರೂ. 500–600 ವೇತನ ಪಡೆಯುತ್ತಿದ್ದಾರೆ. ಇತರೆ ವೆಚ್ಚಕ್ಕೆಂದು ನೀಡುತ್ತಿದ್ದರೂ. 100–150 ರೂ. ನ್ನು ಕಡಿತ ಮಾಡಲಾಗಿದೆ. 12.00 ಗಂಟೆಗೂ ಹೆಚ್ಚು ಕಾಲ ಅವರು ದುಡಿಯಬೇಕಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ವೇತನ ಕಡಿತ ಮಾಡಬಾರದೆಂದು ಆದೇಶಿಸಿದ್ದರೂ, ಅದನ್ನು ಅವಗಣನೆ ಮಾಡಲಾಗಿದೆ. ಕಾರ್ಮಿಕ ಇಲಾಖೆ ಮಧ್ಯಪ್ರವೇಶ ಮಾಡಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಬಾಲಕೃಷ್ಣ ಶೆಟ್ಟಿ
ಕಾರ್ಯದರ್ಶಿ, (19.06.2020)

ನೇಕಾರ ಕಾರ್ಮಿಕ ಬಂಧುಗಳಿಗೆ ಸಮಗ್ರ ಪ್ಯಾಕೇಜ್ ಘೋಷಿಸಲು...... ಪುಟ 3 ರಿಂದ

ಅದೂ ಕೂಡಾ ಸೇರಬೇಕಾದವರಿಗೆ ಸಮರ್ಪಕವಾಗಿ ಸೇರಿಲ್ಲ. ಇದು ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಾಗಿದೆ

ರಾಜಕೀಯ ಪ್ರಾತಿನಿಧ್ಯ ಹಾಗೂ ಅಧಿಕಾರಕ್ಕಾಗಿ ಈ ಸಮುದಾಯವನ್ನು ತೋರಿದವರು, ಬಡಿದಾಡಿದವರು ಈಗ ನಾಪತ್ತೆಯಾಗಿದ್ದಾರೆ.

ಈ ಹಿನ್ನೆಲೆಯಲ್ಲಿ, ಈ ಜನರ ಸಂಕಷ್ಟ ನಿವಾರಿಸುವುದು, ಈ ಗುಡಿ ಹಾಗೂ ಸಣ್ಣ ಕೈಗಾರಿಕಾ ಕ್ಷೇತ್ರವನ್ನು ರಕ್ಷಿಸಿ ಬೆಳೆಸುವುದು, ಸರಕಾರದ ಆದ್ಯತೆಯಾಗಬೇಕಿದೆ.

ಆದ್ದರಿಂದ, ಈ ಕೆಳಕಂಡ ಹಕ್ಕೊತ್ತಾಯಗಳನ್ನು ಈಡೇರಿಸುವ ಸಮಗ್ರ ಪ್ಯಾಕೇಜ್ ನ್ನು ಘೋಷಿಸಲು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಹಕ್ಕೊತ್ತಾಯಗಳು :

1) ರಾಜ್ಯದ ನೇಕಾರ ಕುಟುಂಬಗಳಿಗೆ ತಕ್ಷಣವೇ ಕಳೆದ ಮೂರು ತಿಂಗಳ ಹಿಂದಿನಿಂದಲೆ ಜಾರಿಗೆ ಬರುವಂತೆ ಮತ್ತು ಸಾಂಕ್ರಾಮಿಕ ಪರಿಹಾರವಾಗುವವರೆಗೆ ಮಾಸಿಕ ಕನಿಷ್ಟ ತಲಾ 7,500 ರೂಗಳ ಸಹಾಯಧನ ಒದಗಿಸಬೇಕು. ಅದರಂತೆ ಆದಾಯ ತೆರಿಗೆ ವ್ಯಾಪ್ತಿಯಲ್ಲಿ ಬಾರದ ಎಲ್ಲರಿಗೂ ವಿಸ್ತರಿಸಬೇಕು.

2) ಪ್ರತಿ ವ್ಯಕ್ತಿಗೆ ಮಾಸಿಕ 10 kg ಯಂತೆ ಸಮಗ್ರ ಆಹಾರ ಧಾನ್ಯಗಳ ಹಾಗೂ ಆರೋಗ್ಯ ಸುರಕ್ಷಾ ಪರಿಕರಗಳ ಕಿಟ್ಟಗಳನ್ನು ಎಲ್ಲಾ ಕುಟುಂಬಗಳಿಗೂ ಒದಗಿಸಬೇಕು.

3) ಆತ್ಮಹತ್ಯೆ ಮಾಡಿಕೊಂಡ ನೇಕಾರ ಕುಟುಂಬಗಳಿಗೆ ತಲಾ ಹತ್ತು ಲಕ್ಷ ರೂ ಪರಿಹಾರ ನೀಡಬೇಕು. ಅವರ ವಿಧವಾ ಮಹಿಳೆಯರಿಗೆ ಮಾಸಿಕ ತಲಾ ಐದು ಸಾವಿರ ವಿಶೇಷ ನೆರವು ನೀಡಬೇಕು. ಕುಟುಂಬದ ಎಲ್ಲ ರೀತಿಯ ಸಾಲ ಮನ್ನಾ ಮಾಡಬೇಕು. ಮಕ್ಕಳ ವಿದ್ಯಾಭ್ಯಾಸವನ್ನು ಉಚಿತವಾಗಿ ಒದಗಿಸಬೇಕು.

4) ಕೈಮಗ್ಗ ಹಾಗೂ ವಿದ್ಯುತ್ ಮಗ್ಗಗಳಲ್ಲಿ ದುಡಿಯುವ ಎಲ್ಲ ರೀತಿಯ ಕಾರ್ಮಿಕರು, ಸ್ವ ಉದ್ಯೋಗದಲ್ಲಿ ತೊಡಗಿದವರಿಗೆ, ನೇಕಾರ ಕಲ್ಯಾಣ ಮಂಡಳಿ ರಚಿಸ ಬೇಕು. ಕಟ್ಟಡ ಕಾರ್ಮಿಕರ ಮಾದರಿಯಲ್ಲಿ ಈ ಎಲ್ಲರನ್ನು ನೊಂದಾಯಿಸಿಕೊಳ್ಳ ಬೇಕು. ಜವಳಿ ಇಲಾಖೆಯಿಂದ ಗುರುತಿನ ಚೀಟಿ ವಿತರಿಸಬೇಕು.

5) ನೇಯ್ದ ಎಲ್ಲ ಜವಳಿಗಳನ್ನು ಸರಕಾರವೇ ಖರೀದಿಸಬೇಕು. ಉತ್ಪಾದನೆಗೆ ಅಗತ್ಯವಾದ ಕಚ್ಚಾ ಮಾಲುಗಳನ್ನು ಸ್ವ ಉದ್ಯೋಗದ ಎಲ್ಲಾ ಸಣ್ಣ ಕೈಗಾರಿಕೆಗಳಿಗೆ ಸರಕಾರವೇ ತರಿಸಿಕೊಡಬೇಕು.

6) ಎಲ್ಲರ ಗೃಹ ಹಾಗೂ ವಿದ್ಯುತ್ ಮಗ್ಗಗಳ ವಿದ್ಯುತ್ ಬಾಕಿ ಮನ್ನಾ ಮಾಡಬೇಕು. ಅದೇ ರೀತಿ, ನೇಕಾರಿಕೆಗಾಗಿ ಪಡೆದ ಸಾಲ ಮನ್ನಾ ಮಾಡಬೇಕು.

7) ಈ ಕ್ಷೇತ್ರದ ಸಮಗ್ರ ಸಮಸ್ಯೆಗಳನ್ನು ಗುರುತಿಸಿ ಅವುಗಳ ನಿವಾರಣೆಯ ಸಮರ್ಪಕ ಕ್ರಮಗಳನ್ನು ಕೈಗೊಳ್ಳಲು ತಜ್ಞರ ಅಧ್ಯಯನ ಸಮಿತಿಯನ್ನು ನೇಮಿಸಿ ಆರು ತಿಂಗಳಲ್ಲಿ ವರದಿ ಪಡೆದು ನೆರವು ನೀಡಬೇಕು.

8) ಸ್ವ ಉದ್ಯೋಗಿಗಳ ಕೈಗಾರಿಕೆಗಳಿಗೆ ಜಿಎಸ್‌ಟಿ ಯಿಂದ ವಿನಾಯಿತಿ ನೀಡಬೇಕು..

9) ಮಗ್ಗಗಳ ಖರೀದಿಯ ಮೂಲಕ ಸ್ವ ಉದ್ಯೋಗದಲ್ಲಿ ತೊಡಗುವವರಿಗೆ ಶೇ. 75 ಸಹಾಯ ಧನದ ಹಾಗೂ ಬಡ್ಡಿ ರಹಿತ ಅಗತ್ಯ ಸಾಲ ಒದಗಿಸಬೇಕು.

10) ದಕ್ಷಿಣ ಭಾರತದ ಇತರ ರಾಜ್ಯಗಳಲ್ಲಿ ನೀಡುವಂತೆ ಕರ್ನಾಟಕ ಸರಕಾರವು ಈ ಕ್ಷೇತ್ರಕ್ಕೆ ಸಹಾಯ ನೀಡಬೇಕು. ಆಂಧ್ರಪ್ರದೇಶ ಸರಕಾರವೂ ಮಾಸಿಕ ಎರಡು ಸಾವಿರ ರೂ ಸಹಾಯಧನ ನೀಡುತ್ತಿದೆ. ಹಾಗೂ ತಮಿಳುನಾಡು ಸರಕಾರ ಉಚಿತ ವಿದ್ಯುತ್ ಒದಗಿಸುತ್ತದೆ.

ಯು. ಬಸವರಾಜ,
ಕಾರ್ಯದರ್ಶಿ (26.06.2020)



ದಲಿತರ ಮೇಲೆ ಹಲ್ಲೆ: ಡಿಹೆಚ್‌ಎಸ್ ಮಧ್ಯಪ್ರವೇಶ

ತುಮಕೂರು ಜಿಲ್ಲೆಯ ಮಧುಗಿರಿ ತಾಲೋಕಿನ ತಿಪ್ಪಾಪುರ ಗ್ರಾಮದಲ್ಲಿ ಹನುಮಂತಪ್ಪ ಎಂಬ ದಲಿತ ಮಾದಿಗ ಕೊಳವೆ ಬಾವಿ ಕೊರೆಸಿದ ಕಾರಣಕ್ಕೆ ಪಕ್ಕದ ಜಮೀನಿನ ಮೇಲ್ಜಾತಿ ನರಸಿಂಹಮೂರ್ತಿ ಮತ್ತು ಅವನ ತಮ್ಮ ಅಶ್ವತಪ್ಪ ಆತನ ಕೈ ಮತ್ತು ಬಲ ಕಾಲು ದೊಣ್ಣೆಗಳಿಂದ ಮನಸ್ಸಿಚ್ಚೆ ಬಡಿದು ಮುರಿದು ಹಾಕಿದ್ದಾರೆ. ತುಮಕೂರು ಸಿದ್ದಾರ್ಥ ಆಸ್ಪತ್ರೆ ಸೇರಿದ್ದಾರೆ. ಅಲ್ಲದೆ ಅವರ ಮಕ್ಕಳಾದ ಅಶೋಕ, ಮಂಜುನಾಥನ ಮೇಲೆ ಕೌಂಟರ್ ಕೇಸು ಹಾಕಿ ಜೈಲಿಗೆ ಕಳುಹಿಸಿದ್ದಾರೆ.

ವಿಷಯ ತಿಳಿದ ತಕ್ಷಣ ಡಿಹೆಚ್‌ಎಸ್ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ನೀಯೋಗ ಆಸ್ಪತ್ರೆಗೆ ಬೇಟಿ ನೀಡಿ ಅವರ ಹೆಂಡತಿ ನಾಗಮ್ಮನಿಂದ ನಡೆದ ದೌರ್ಜನ್ಯದ ಬಗ್ಗೆ ಮಾಹಿತಿ ಪಡೆಯಿತು. ದೈರ್ಯದ ಮಾತುಗಳನ್ನು ಹೇಳಿ ಸಂತೈಸಲಾಗಿದೆ.

ತುಮಕೂರು ಎಸ್.ಪಿ ಯವರಿಗೆ ದೂರು ನೀಡಿ ನ್ಯಾಯಕ್ಕಾಗಿ ಒತ್ತಾಯಿಸಲಾಯಿತು. ಮುಂದೆ ಎಲ್ಲಾ ಸಂಘಟನೆಗಳನ್ನು ಜತೆಗೊಡಿಸಿ ಹೋರಾಟ ನಡೆಸಲು ನಿರ್ಧರಿಸಲಾಗಿದೆ.

ನಿಯೋಗದಲ್ಲಿ ಪ್ರಧಾನ ಕಾರ್ಯದರ್ಶಿಗಳಾದ ಸುಬ್ರಹ್ಮಣ್ಯ, ತುಮಕೂರು ಜಿಲ್ಲೆಯ ಮುಖಂಡರುಗಳಾದ ರಾಜು ವೆಂಕಟಪ್ಪ, ಸುದರ್ಶನ್ (ಕುಣಿಗಲ್), ಕೊರಟಗೆರೆ ಡಿಹೆಚ್‌ಎಸ್ ಮುಖಂಡರಾದ ಜಗದೀಶ, ಮಧುಗಿರಿ ಡಿಹೆಚ್‌ಎಸ್ ಮುಖಂಡರಾದ ಮಲ್ಲಯ್ಯ, ಪಂಚಾಯತಿ ನೌಕರರ ಮುಖಂಡರು ಬೆಂ. ಡಿಹೆಚ್‌ಎಸ್ ಮುಖಂಡರಾದ ಶ್ರೀನಿವಾಸ್, ಕಟ್ಟಡ ಕಾರ್ಮಿಕ ಮುಖಂಡರಾದ ವೆಂಕಟೇಶ್, ತುಮಕೂರಿನ ಪೌರಕಾರ್ಮಿಕ ಮುಖಂಡರಾದ ನಾಗರಾಜು ನಿಯೋಗದಲ್ಲಿದ್ದರು.



ಉಚಿತ ಚಿಕಿತ್ಸೆಗೆ ಡಿವೈಎಫ್‌ಐ ಆಗ್ರಹ

ಕೋವಿಡ್ ಹಿಮ್ಮೆಟ್ಟಿಸಲು ಸಾರ್ವಜನಿಕ ಆಸ್ಪತ್ರೆ ಬಲಪಡಿಸಲು ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲು ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಡಿವೈಎಫ್‌ಐ ಆಗ್ರಹಿಸಿದೆ.

ರಾಜ್ಯದಲ್ಲಿರುವ ಸಾರ್ವಜನಿಕ ಆಸ್ಪತ್ರೆಗಳು ಆಳುವ ಸರಕಾರಗಳ ನಿರ್ಲಕ್ಷ್ಯದಿಂದಾಗಿ ಅಗತ್ಯ ಡಾಕ್ಟರ್–ಸಿಬ್ಬಂದಿ ಕೊರತೆ, ಔಷಧ ಸೇರಿದಂತೆ ಮೂಲಭೂತ ಸೌಲಭ್ಯಗಳ ಕೊರತೆಯಿಂದ ಬಳಲುತ್ತಿವೆ. ಇದರಿಂದಾಗಿ ಸಾಮಾನ್ಯ ಜನತೆಗೆ ಉತ್ತಮ ಆರೋಗ್ಯ ಲಭಿಸದೇ ಖಾಸಗೀ ಆಸ್ಪತ್ರೆಗಳ ಧನದಾಹಿ ಕೋರತನಕ್ಕೆ ಬಲಿಯಾಗುತ್ತಿರುವ ಈ ಸ್ಥಿತಿಯಲ್ಲಿ ಕೋವಿಡ್–19 (ಕೊರೊನ ಸೋಂಕು) ರೋಗ ಸಾಮನ್ಯ ಜನರ ಪಾಲಿಗೆ ಕಂಟಕವಾಗಿ ಪರಿಣಮಿಸಿದೆ. ಸಾಮಾನ್ಯ ರೋಗಿಗಳು ಈಗ ಆಸ್ಪತ್ರೆಗಳಿಗೆ ಹೋಗಲಾರದ ಸ್ಥಿತಿ ಬಂದೊದಗಿದೆ.

ರಾಜ್ಯ ಸರಕಾರ ಇಂತಹ ಗಂಭಿರ ಸ್ಥಿತಿಯಲ್ಲಿ ಕೋವಿಡ್ –19 ಕೊರೊನ ಸೋಂಕಿತ ರೋಗಿಗಳಿಗೆ ಸರಿಯಾದ ಚಿಕಿತ್ಸೆ ನೀಡಲು ಸಾರ್ವಜನಿಕ ಆಸ್ಪತ್ರೆಗಳನ್ನು ಡಾಕ್ಟರ್, ಸಿಬ್ಬಂದಿ, ಔಷಧ ಸೇರಿದಂತೆ ಎಲ್ಲ ರೀತಿಯಲ್ಲಿಯೂ ಸಜ್ಜುಗೊಳಿಸಬೇಕು. ಅಗತ್ಯಬಿದ್ದರೆ ಖಾಸಗಿ ಆಸ್ಪತ್ರೆಗಳನ್ನು ವಶಕ್ಕೆ ಪಡೆದು ಎಲ್ಲರಿಗೂ ಉಚಿತ ಚಿಕಿತ್ಸೆ ಕೊಡಬೇಕು. ಆದರೆ ಕರ್ನಾಟಕ ರಾಜ್ಯ ಸರಕಾರ ದ (ಉಪ ಮುಖ್ಯಮಂತ್ರಿ, ಗೃಹ ಸಚಿವ, ಆರೋಗ್ಯ ಸಚಿವರನ್ನೊಳಗೊಂಡ) ಕಾರ್ಯಪಡೆಯು ಕರೋನಾ ಸೋಂಕಿತರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ದರ ನಿಗದಿಗೊಳಿಸಿ ಸರಕಾರಕ್ಕೆ ವರದಿ ಸಲ್ಲಿಸಿದೆ. ಈ ವರದಿಗೆ ಸಚಿವ ಸಂಪುಟದ ಒಪ್ಪಿಗೆಯಷ್ಟೆ ಬಾಕಿಯಿದೆ. ಕಾರ್ಯಪಡೆಯು ಸಿದ್ಧಪಡಿಸಿದ ವರದಿ ಪ್ರಕಾರ, ಸಮಾನ್ಯ ರೋಗಿಗೆ ಸಾಮಾನ್ಯ ವಾರ್ಡ್ ನಲ್ಲಿ ರೂ. 10,000/–, ಆಮ್ಲ ಜನಕ ಸಹಿತ ವಾರ್ಡ್ ನಲ್ಲಿ ರೂ. 12,000/–, ಐಸಿಯು ಹಾಸಿಗೆ– ರೂ. 15,000/–, ವೆಂಟಿಲೇಟರ್ ಸಹಿತ ಐಸಿಯು ಗೆ ರೂ. 25,000/– ದರ ನಿಗದಿಗೊಳಿಸಿದೆ.

ಇದಕ್ಕೆ ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಯಡಿ ಬಿಪಿಎಲ್ ಕುಟುಂಬದ ರೋಗಿಗಳಿಗೆ ಕ್ರಮವಾಗಿ ಸಾಮಾನ್ಯ ವಾರ್ಡ್ ಗೆ ರೂ. 5,200, ಆಮ್ಲಜನಕ ಸಹಿತ ವಾರ್ಡ್ ಗೆ ರೂ. 7000, ತೀವ್ರ ನಿಗಾ ಘಟಕಕ್ಕೆ ರೂ. 8500, ಹಾಗೂ ವೆಂಟಿಲೇಟರ್ ಸಹಿತ ಐಸಿಯು ಗೆ ರೂ. 10,000 ನಿಗದಿಗೊಳಿಸಿ ವರದಿ ಸಿದ್ದಪಡಿಸಿದೆ. ಆದರೆ ಗ್ರಾಮೀಣ ಪ್ರದೇಶದ ಬಹುತೇಕರು ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಯ ವ್ಯಾಪ್ತಿಗೊಳಪಟ್ಟಿಲ್ಲವೆಂಬುದು ವಾಸ್ತವ.

ಈ ಹಂತದಲ್ಲಿ ರಾಜ್ಯ ಸರಕಾರಕ್ಕೆ ಸಲ್ಲಿಕೆಯಾಗಿರುವ ಈ ವರದಿಯು ಜನ ಸಾಮಾನ್ಯರಿಗೆ ಗಂಭೀರ ಹೊರೆಯಾಗಿ ಪರಿಣಮಿಸುವುದು. ಈಗಾಗಲೇ ಕರೋನಾ ಲಾಕ್ ಡೌನ್ ನಿಂದಾಗಿ ಯಾವುದೇ ಆದಾಯ, ಉದ್ಯೋಗವಿಲ್ಲದೆ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು ಈ ಚಿಕಿತ್ಸೆಯ ದರ ನಿಗದಿಯು ಗಾಯದ ಮೇಲೆ ಬರೆ ಎಳೆದಂತಾಗುವುದು. ಇದನ್ನು ಸಹಿಸಲಾಗದು.

ಕರೋನಾ ಸೋಂಕಿತ ರೋಗಿ ಉದಾಹರಣೆಗೆ; ಚಿಕಿತ್ಸೆಗಾಗಿ ಕನಿಷ್ಠ ಹತ್ತು ದಿನಗಳ ವರೆಗೆ ಸಾಮಾನ್ಯವಾರ್ಡ್ ನಲ್ಲಿ ಚಿಕಿತ್ಸೆ ಪಡೆದರೂ ದಿನಕ್ಕೆ 10,000 ದಂತೆ ಹತ್ತು ದಿನಕ್ಕೆ ಒಂದು ಲಕ್ಷ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಮತ್ತೆ ಕೋವಿಡ್ ಸಾಂಕ್ರಾಮಿಕ ಅಂಟು ರೋಗವಾದ್ದರಿಂದ ಮನೆಯಲ್ಲಿ ಎರಡು ಮೂರು ಜನಕ್ಕೇನಾದರೂ ಸೋಂಕು ತಗಲಿದರೆ ಎರಡು ಮೂರು ಲಕ್ಷ ಹಣವನ್ನು ಭರಿಸಬೇಕಾಗುತ್ತದೆ. ಸರಕಾರವೇ ಮುಂದೆ ನಿಂತು ಖಾಸಗಿಯವರಿಗೆ ಸುಲಿಗೆಗೆ ಅವಕಾಶ ಮಾಡಿಕೊಡುವ ಈ ವರದಿಯನ್ನು ಕೂಡಲೇ ರದ್ದುಗೊಳಿಸಿ ಕರೋನಾ ಸೋಂಕಿತರೆಲ್ಲರಿಗೂ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲು ಬೇಕಾದ ಸಕಲ ವ್ಯವಸ್ಥೆ ಮಾಡಿಕೊಳ್ಳುವುದು ಹಾಗೂ ಅಗತ್ಯಬಿದ್ದರೆ ಖಾಸಗಿ ಆಸ್ಪತ್ರೆಗಳನ್ನು ಸರಕಾರದ ವಶಕ್ಕೆ ಪಡೆದು ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲು ರಾಜ್ಯ ಸರಕಾರ ಮುಂದಾಗಬೇಕೆಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ರಾಜ್ಯ ಸಮಿತಿಯು ಆಗ್ರಹಿಸುತ್ತದೆ.

ಮುನೀರ್ ಕಾಟಿಪಳ್ಳ ಅಧ್ಯಕ್ಷರು, ಬಸವರಾಜ ಪೂಜಾರ ಕಾರ್ಯದರ್ಶಿ (22.06.2020)



ಶ್ರಮ ಸಮಾಜ ವಿಜ್ಞಾನ ಅಧ್ಯಯನ ಮತ್ತು ಸಂಶೋಧಕ ಕೇಂದ್ರ ಮತ್ತು ಭಾರತ ಜ್ಞಾನವಿಜ್ಞಾನ ಸಮಿತಿ ಸಹಯೋಗದಲ್ಲಿ ಗ್ರಹಣೋತ್ಸವ

ಭಾನುವಾರ ಘಟಿಸಿದ ಕಂಕಣ ಸೂರ್ಯಗ್ರಹಣವನ್ನು ಹಾಸನದಲ್ಲಿ ವೀಕ್ಷಿಸಲು ಶ್ರಮ ಸಮಾಜ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರವು ಭಾರತ ಜ್ಞಾನ ವಿಜ್ಞಾನ ಸಮಿತಿ ಸಹಕಾರದಲ್ಲಿ ನಗರದ ಹೇಮಾವತಿ ಪ್ರತಿಮೆ ಬಳಿ ಗ್ರಹಣೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಮಾತನಾಡಿದ ಮಲ್ನಾಡ್ ನರ್ಸಿಂಗ್ ಹೋಂನ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ ಡಾ. ಸಾವಿತ್ರಿ, ಗ್ರಹಣ ಎಂಬುದು ಸೌರವ್ಯೂಹದಲ್ಲಿ ನಡೆಯುವ ಸಹಜ ಪ್ರಕ್ರಿಯೆ. ಖಗೋಳ ಕೌತುಕವಾಗಿದ್ದು, ಈ ಬಗ್ಗೆ ಮೌಢ್ಯ ಹೋಗಲಾಡಿಸಬೇಕಿದೆ. ಆದರೆ ಕೆಲವು ಮಾಧ್ಯಮಗಳಲ್ಲಿ ಗ್ರಹಣ ಸಂಬಂಧ ಮೌಢ್ಯ ಬಿತ್ತರಿಸುವ ಕೆಲಸ ಮಾಡುತ್ತಿವೆ. ಜನಸಾಮಾನ್ಯರು ಮೂಢನಂಬಿಕೆಯನ್ನು ಬಿಟ್ಟು ವೈಜ್ಞಾನಿಕ ಮನೋಭಾವವನನು ಬೆಳೆಸಿಕೊಳ್ಳಬೇಕಿದೆ ಎಂದು ಹೇಳಿದರು.

ಹಾಸನ ಜಿಲ್ಲಾ ಕಾರ್ಯಕರ್ತರ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಪ್ರಸನ್ನಕುಮಾರ್, ಗ್ರಹಣದಂತಹ ಸೌರವಿದ್ಯಮಾನಗಳನ್ನು ಎಲ್ಲರೂ ನೋಡುವ ಮೂಲಕ ಸೌರ ಕೌತುಕಗಳನ್ನು ಅಧ್ಯಯನ ಮಾಡಬೇಕು. ಇಂತಹ ಘಟನೆಗಳನ್ನು ಜನಸಾಮಾನ್ಯರಿಗೆ ವೀಕ್ಷಿಸುವ ಅವಕಾಶ ಮಾಡಿಕೊಟ್ಟಿರುವ ಸಂಘಟನೆಗಳ ಕಾರ್ಯ ಶ್ಲಾಘನೀಯ ಎಂದರು.

ಶ್ರಮ ಸಮಾಜ ವಿಜ್ಞಾನ ಅಧ್ಯಯನ ಮತ್ತು ಸಂಶೋಧಕ ಕೇಂದ್ರದ ಅಧ್ಯಕ್ಷ ಧರ್ಮೇಶ್ ಮಾತನಾಡಿ, 2020 ವೈಜ್ಞಾನಿಕ ಮನೋಧರ್ಮದ ಪರಿಚಾರಕರಾದ ಎಚ್.ನರಸಿಂಹಯ್ಯ ಅವರ ಜನ್ಮ ಶತಮಾನೋತ್ಸವ ವರ್ಷವಾಗಿದ್ದು, ಎಚ್ಚೆನ್ ಜನ್ಮಶತಮಾನೋತ್ಸವದ ಅಂಗವಾಗಿ ಗ್ರಹಣ ವೀಕ್ಷಣೆ ಕಾರ್ಯಕ್ರಮ ಹಯಮ್ಮಿಕೊಳ್ಳಲಾಗಿದೆ. ಗ್ರಹಣ ಸೌರವ್ಯೂಹದ ನೆರಳು ಬೆಳಕಿನ ಕೌತುಕವಾಗಿದೆ. ಇದನ್ನು ವೀಕ್ಷಣೆ ಮಾಡುವುದು ವೈಜ್ಞಾನಿಕ ಮನೋಭಾವ ಬೆಳೆಸುವಲ್ಲಿ ನೆರವಾಗಲಿದೆ. ಎಚ್ಚೆನ್ ಜನ್ಮಶತಮಾನೋತ್ಸವದ ಅಂಗವಾಗಿ ಇದೇ ರೀತಿಯ ವೈಜ್ಞಾನಿಕ ಮನೋಧರ್ಮ ಬೆಳೆಸುವ ಕಾರ್ಯಕ್ರಮಗಳು ಸೇರಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು.

ವಿಜ್ಞಾನ ಬರಹಗಾರರಾದ ಅಹಮದ್ ಹಗರೆ, ಕೆ.ಎಸ್.ರವಿಕುಮಾರ್, ಕವಿತಾ ಕಾರ್ಯಕ್ರಮದ ವೇಳೆ ಗ್ರಹಣ ವಿವರ ನೀಡಿದರು. ಭಾರತ ಜ್ಞಾನ ವಿಜ್ಞಾನ ಸಮಿತಿಯ ಜಯಪ್ರಕಾಶ್, ಕಾಂತರಾಜು, ಗೋಪಾಲಕೃಷ್ಣ, ಶ್ರಮ ಸಮಾಜ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರದ ಕೇಂದ್ರದ ಟ್ರಸ್ಟಿಗಳಾದ ಪೃಥ್ವಿ, ಸತ್ಯನಾರಾಯಣ ಅರವಿಂದ, ವಸಂತಕುಮಾರ್, ಹಾಸನ ಜಿಲ್ಲಾ ಕಾರ್ಯಕರ್ತರ ಸಂಘದ ಮಾಜಿ ಜಿಲ್ಲಾ ಅಧ್ಯಕ್ಷ ರವಿ ನಾಕಲಗೂಡು, ದಸಂಸ ಮುಖಂಡರಾದ ಸಂದೇಶ್, ಕಲಾವಿದ ಗ್ಯಾರಂಟಿ ರಾಮಣ್ಣ ಮತ್ತಿತರರು ಇದ್ದರು.



ಕಂಕಣ ಸೂರ್ಯಗ್ರಹಣವು ಬೆಳಗ್ಗೆ 10:13ಕ್ಕೆ ಆರಂಭವಾಗಿ ಮಧ್ಯಾಹ್ನ 1.31 ರವರೆಗೆ ಗೋಚರಿಸಿತು.

ಎಚ್.ಆರ್. ನವೀನ್‌ಕುಮಾರ್
ಕಾರ್ಯದರ್ಶಿ



‘ಬಾಯ್ಕಾಟ್ ಚೀನಾ ಗೂಡ್ಸ್’ ಆಂದೋಲನದ ಮರ್ಮವೇನು?

ಬಾನುಗೊಂದಿ ಲಿಂಗರಾಜು

ಈಗ ‘ಬಾಯ್ ಕಾಟ್ ಚೀನಾ ಗೂಡ್ಸ್’ ನಡೀತಾ ಇದೆಯಲ್ಲ, ಅದು ಯಶಸ್ವಿಯಾಗಬೇಕು ಅಂದರೆ ಬರೀ ಚೀನಾ ಹೆಡ್ ಕ್ವಾರ್ಟರ್ಸ್ ಆಗಿರುವ ಕಂಪೆನಿಗಳನ್ನು ಬಹಿಷ್ಕರಿಸಿದರೆ ಆಗೋದಿಲ್ಲ. ‘ಮೇಕ್ ಇನ್ ಇಂಡಿಯಾ’ದಡಿ ಇಂಡಿಯಾದಲ್ಲೇ ಇರುವ ಚೀನಾ ಸೇರಿದಂತೆ ಎಲ್ಲಾ ಕಂಪನಿಗಳನ್ನು ಬಹಿಷ್ಕರಿಸಬೇಕಾಗುತ್ತದೆ. ಮೋದಿ ಸರ್ಕಾರ ಈಆಖ ಸರಳೀಕರಣಗೊಳಿಸಿದ ನಂತರ ಭಾರತದ ಯಾವ ಯಾವ ಸ್ಟಾರ್ಟ್ ಅಪ್ ಗಳಲ್ಲಿ ವಿದೇಶಿ ಸಂಸ್ಥೆಗಳು ಬಂಡವಾಳ ಹೂಡಿವೆಯೋ ಅವೆಲ್ಲವನ್ನೂ ಬಹಿಷ್ಕರಿಸಬೇಕಾಗುತ್ತದೆ. ಅಮೆರಿಕ, ಜರ್ಮನಿ, ಜಪಾನ್, ಕೊರಿಯಾ ಯಾವುದೇ ದೇಶದ ಮಲ್ಟಿನ್ಯಾಷನಲ್ ಆಗಿರಲಿ, ಅದರಲ್ಲಿ ಚೀನಾ ಹೂಡಿಕೆ ಇದ್ದರೆ ಅವುಗಳನ್ನು ಬಹಿಷ್ಕರಿಸಬೇಕಾಗುತ್ತದೆ. ಚೀನಾದ ಬ್ಯಾಂಕುಗಳಿಂದ ಸಾಲ ತೆಗೆದುಕೊಂಡ ಸಂಸ್ಥೆಗಳನ್ನೂ ಬಹಿಷ್ಕರಿಸಬೇಕಾಗುತ್ತದೆ.

ಮಾತ್ರವಲ್ಲ, ಇಂಡಿಯಾಗೆ ಬಂದು ಇಂಡಿಯಾದಲ್ಲೇ ತಯಾರಿಸಿ ಎಂದು ರೆಡ್ ಕಾರ್ಪೆಟ್ ಹಾಸಿದವರನ್ನೂ ಬಹಿಷ್ಕರಿಸಬೇಕಾಗುತ್ತದೆ. ಇದಕ್ಕೆ ಈ ‘ಬಾಯ್ಕಾಟ್ ಚೀನಾ ಗೂಡ್ಸ್’ ಚಳುವಳಿಗಾರರು ಸಿದ್ಧರಿದ್ದಾರಾ? ಇದೆಲ್ಲ ಸಾಧ್ಯವಾ? ಇವೆಲ್ಲವನ್ನು ಮಾಡಬೇಕಾದರೆ ಹಣಕಾಸು ಬಂಡವಾಳದ ತ್ರಿಮೂರ್ತಿಗಳ ಹಲವು ಒಪ್ಪಂದಗಳನ್ನು ಮುರಿಯಬೇಕಾಗುತ್ತದೆ. ಅಥವಾ ಅದರಿಂದ ಹೊರ ಬರಬೇಕಾಗುತ್ತದೆ. ಟ್ರಂಪ್ ಟ್ವೀಟ್ ಬೆದರಿಕೆಗೆ ಹೆದರಿ ದಿನ ಬೆಳಗಾಗುವುದರ ಒಳಗೆ ಮಂಡಿಯೂರಿದ ಸರಕಾರದಿಂದ ಇಂತಹ ರಾಜಕೀಯಇಚ್ಛೆ ನಿರೀಕ್ಷಿಸಬಹುದಾ?

ಭಾರತ ಮತ್ತು ಚೀನಾ ನಡುವೆ ಉದ್ವಿಗ್ನತೆಗೆ ಕಾರಣವಾಗಿದ್ದ ಗಡಿ ಪರಿಸ್ಥಿತಿ ಈಗ ಸ್ವಲ್ಪ ತಣ್ಣಗಾಗಿದೆ. ಈ ನಡುವೆ ಭಾರತದೊಳಗೆ ಕೆಲವು (ಆಳುವ ಬಿಜೆಪಿ ಸೇರಿದಂತೆ ಹೆಚ್ಚಾಗಿ ಸಂಘ ಪರಿವಾರ ಪ್ರಾಯೋಜಿತ ಮತ್ತು ಕುಮ್ಮಕ್ಕಿನ) ಸಂಘಟನೆಗಳು, ಚೀನಾ ವಿರೋಧಿ ಘೋಷಣೆ ಕೂಗುವುದು, ಚೀನಾ ಕಂಪನಿಗಳು, ಕಂಪನಿಗಳ ಉತ್ಪನ್ನಗಳ ಬಹಿಷ್ಕಾರ ಹಾಕುವ ಆಂದೋಲನವನ್ನು ಆರಂಭಿಸಿವೆ. ಇದನ್ನು ಗಡಿಯಲ್ಲಿ ಚೀನಾದ ಘರ್ಷಣೆಗೆ ‘ಪ್ರತೀಕಾರವಾಗಿಅದಕ್ಕೆ ಪಾಠ ಕಲಿಸುವ ಆರ್ಥಿಕ ಯುದ್ಧ’ ಎಂಬಂತೆ ಅವು ಮತ್ತು ಅವುಗಳನ್ನೂ ಸರಕಾರವನ್ನೂ ಬೆಂಬಲಿಸುವ ಮಾಧ್ಯಮಗಳು ಬಿಂಬಿಸುತ್ತಿವೆ.

ಇದಕ್ಕೆ ಸರಕಾರದ ಅಧಿಕೃತ ಬೆಂಬಲವಿಲ್ಲದಿದ್ದರೂ, ಕೊವಿದ್–19 ಆರ್ಥಿಕ ಪರಿಹಾರ ಪ್ಯಾಕೇಜಿಗೆ ‘ಆತ್ಮ ನಿರ್ಭರ್ ಪ್ಯಾಕೇಜ್’ ಎಂಬ ಹೆಸರಿಡಲಾಗಿದ್ದು, ಸಹ ‘ಆತ್ಮ ನಿರ್ಭರ್’ ಪರವಾಗಿ ಈ ಆಂದೋಲನ ಎಂದು ಚಳುವಳಿಗಾರರು ಹೇಳಿಕೊಂಡಿರುವುದು ಒಂದೇ ಪ್ರಚಾರಯಂತ್ರದ ಭಾಗಗಳಂತೆ ಕಾಣುತ್ತವೆ. ಅವುಗಳ ನಿಜವಾದ ಉದ್ದೇಶಗಳನ್ನು ಬದಿಗಿಟ್ಟು, ಇಂತಹ ಆಂದೋಲನ ಪರಿಣಾಮಕಾರಿ ಆಗಬಲ್ಲುದೇ? ಭಾರತದ ಹಿತಾಸಕ್ತಿಗೆ ಪೂರಕವಾಗಿರುತ್ತದೋ? ಈ ಎರಡಕ್ಕೂ ಉತ್ತರ ಹೌದು ಎಂದಾಗಿದ್ದರೂ ಇದು ಕಾರ್ಯಸಾಧ್ಯವೇ – ಎಂಬುದನ್ನು ಮೊದಲು ನೋಡೋಣ.

ಮೊದಲು ಭಾರತ ಚೀನಾಗಳ ಆರ್ಥಿಕ ಸಂಬಂಧಹೇಗಿದೆ ಎಂದು ಕೆಲವು ಉದಾಹರಣೆಗಳ ಮೂಲಕ ನೋಡೋಣ.

ಚೀನಾ ಬಾಯ್ಕಾಟ್ ಜನೌಷಧಿಗೆ ಮಾರಕ

ದೇಶಾದ್ಯಂತ ಬಿಜೆಪಿ ನಾಯಕರು ಫೋಸ್ ಕೊಟ್ಟು ಚಾಲನೆ ಕೊಟ್ಟ ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳ ಬಗ್ಗೆ ಮಾತನಾಡೋಣ. ಆಗ ಅವರು ಹೇಳಿದ್ದು ಬಡವರಿಗೆ ಅತಿ ಕಡಿಮೆ ದರದಲ್ಲಿ ಔಷಧಿ ಸಿಕ್ಕು ಎಷ್ಟೋ ಜನ ಬದುಕಿದರು ಎಂದು. ಅದು ಹೌದು ಕೂಡ. ಚೀನಾ ಬಹಿಷ್ಕಾರ ಆದರೆ ಈ ಕಡಿಮೆ ದರದ ಔಷಧಿಗಳು ಸಿಗೋದೇ ಇಲ್ಲ ಹೇಗೆ ಅಂತ ನೋಡೋಣ.

ಅಮೆರಿಕದಲ್ಲಿ ಕರೋನಾ ಪ್ರಕರಣಗಳು ಹೆಚ್ಚಾಗುತ್ತಿದ್ದಂತೆ, ಭಾರತ ಹೈಡ್ರಾಕ್ಸಿಕ್ಲೋರೋಕ್ವಿನ್ ಕಳಿಸುವಂತೆ ಡೊನಾಲ್ಡ್ ಟ್ರಂಪ್ ಬೆದರಿಸಿದ್ದು, ಒಂದು ವೇಳೆ ಭಾರತ ಈ ಔಷಧಿ ಕಳುಹಿಸದಿದ್ದರೆ ಸೇಡು ತೀರಿಸಿಕೊಳ್ಳುವುದಾಗಿ ಧಮಕಿ ಹಾಕಿದ್ದು ನೆನಪಿದೆಯಲ್ಲ? ಹೈಡ್ರಾಕ್ಸಿಕ್ಲೋರೋಕ್ವಿನ್ ಮಲೇರಿಯಾಗೆ ತಯಾರಿಸಲಾದ ಜೆನೆರಿಕ್ ಔಷಧಿ. ಬಹಳಷ್ಟು ಮಂದಿ ಅಮೆರಿಕ ಯಾಕೆ ಭಾರತವನ್ನು ಅವಲಂಬಿಸಿದೆ ಎಂದು ಹುಬ್ಬೇರಿಸಿದ್ದರು. ವಿಷಯ ಇಷ್ಟೇನೇ, ಭಾರತ ಜೆನೆರಿಕ್ ಔಷಧಿ ತಯಾರಿಕೆಯಲ್ಲಿ ಜಗತ್ತಿನ ನಂ.1 ದೇಶ. ಅಮೆರಿಕ ಮತ್ತು ಯೂರೋಪಿಯನ್ ರಾಷ್ಟ್ರಗಳು ಜನರಿಕ್ ಔಷಧಿಗಳಿಗಾಗಿ ಭಾರತವನ್ನೇ ಅವಲಂಬಿಸಿವೆ. ಭಾರತದ ಜೆನೆರಿಕ್ ಔಷಧಿಗಳ ಮೂರನೇ ಒಂದು ಭಾಗ ಅಮೆರಿಕವನ್ನೇ ತಲುಪುತ್ತದೆ.


ಭಾರತಕ್ಕೆ ಇದು ನಿಜಕ್ಕೂ ಹೆಮ್ಮೆಯ ವಿಷಯ. ಕೇವಲ ಜೆನೆರಿಕ್ ಔಷಧಿ ತಯಾರಿಕೆ ಮಾತ್ರವಲ್ಲ ಒಟ್ಟಾರೆ ಔಷಧಿ ತಯಾರಿಕೆಯಲ್ಲೂ ಭಾರತ ದಾಪುಗಾಲು ಹಾಕುತ್ತಲೇ ಇದೆ. ಇದೇ ವೇಗದಲ್ಲಿ ಸಾಗಿದರೆ ಭಾರತವೇ ಔಷಧಿ ತಯಾರಿಕಾ ಉದ್ಯಮದಲ್ಲಿ ನಂ.1 ಆಗಿಬಿಡಬಹುದು. ಜೆನೆರಿಕ್ ಔಷಧಿಗೂ ಇತರ ಸಾಮಾನ್ಯ ಔಷಧಿಗೂ ದರದಲ್ಲಿ ಹೊರತುಪಡಿಸಿದರೆ ಬೇರೆ ಏನೂ ವ್ಯತ್ಯಾಸ ಇಲ್ಲ. ದರ ಏಕೆ ಕಡಿಮೆ ಅಂದರೆ ಜೆನೆರಿಕ್ ಕಂಪೆನಿಗಳು ಪೇಟೆಂಟ್ ಇಲ್ಲದಿರುವ ಔಷಧಿಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಡುತ್ತವೆ. ಅದೇ ಫಾರ್ಮುಲಾ, ಅದೇ ೦ಕಖ ಗಳು, ಅದೇ ಔಷಧಿ. ಕ್ವಾಲಿಟಿಯಲ್ಲಿ ಯಾವ

ONE-WAY TRAFFIC In FY19, 5.1% of India's exports were destined for China, while only 3% of China's came to India. Also, 13.7% of India's imports were from China, while only 0.9% of China's were from India

	India-China (% of total)		China-India (% of total)	
Year	Export	Import	Export	Import
FY15	3.9	13.5	2.6	0.8
FY16	3.4	16.2	2.8	0.7
FY17	3.7	15.9	3.0	0.9
FY18	4.4	16.4	3.1	0.9
FY19	5.1	13.7	3.0	0.9

ಬದಲಾವಣೆಯೂ ಇರಲ್ಲ. ಔಷಧಿಯ ಬೆಲೆ ಮಾತ್ರ ಸಸ್ತಾ. ಎಷ್ಟು ಸಸ್ತಾ ಎಂದರೆ ಮೂಲ ಔಷಧಿಯ ಹತ್ತನೇ ಒಂದು ಭಾಗದಷ್ಟು! ಒಮ್ಮೊಮ್ಮೆ ಅದಕ್ಕಿಂತ ಕಡಿಮೆ!

ಜೆನೆರಿಕ್ ಔಷಧಿ ತಯಾರಿಸಲು API (Active Pharmaceutical Ingredients) ಬೇಕಲ್ಲವೇ? API ಅಂದ್ರೆ ಔಷಧಿ ತಯಾರಿಕೆಗೆ ಬೇಕಾದ ಕಚ್ಚಾ ರಾಸಾಯನಿಕ ಸಾಮಗ್ರಿ. ಜೆನೆರಿಕ್ ಕಂಪೆನಿಗಳಿಗೆ ಬೇಕಾಗುವ ಶೇ. 70ರಷ್ಟು ೦ಕಖ ಗಳು ಬರುತ್ತಿರುವುದು ಚೀನಾದಿಂದ! ಒಂದೇ ಮಾತಿನಲ್ಲಿ ಹೇಳುವುದಾದರೆ ಚೀನಾದಿಂದ ೦ಕಖ ಬರುವುದು ನಿಂತುಹೋದರೆ ನಮ್ಮ ಜೆನೆರಿಕ್ ಔಷಧಿ ಕಂಪೆನಿಗಳೆಲ್ಲ ಬಾಗಿಲು ಮುಚ್ಚಿಕೊಳ್ಳಬೇಕಾಗುತ್ತದೆ. ಇದು ಈಗಾಗಲೇ



ಇದರ ಪರಿಣಾಮ ಕೇವಲ ಭಾರತದ ಮೇಲೆ ಮಾತ್ರವಲ್ಲ. ಭಾರತ 2019–20ರ ಸಾಲಿನಲ್ಲಿ ಇಪ್ಪತ್ತು ಶತಕೋಟಿ ಡಾಲರ್ ಮೌಲ್ಯದ ಜೆನೆರಿಕ್ ಔಷಧಿಗಳನ್ನು ರಫ್ತು ಮಾಡಿದೆ. ಅಷ್ಟು ದೊಡ್ಡ ಪ್ರಮಾಣದ ಮಾರುಕಟ್ಟೆ ಭಾರತಕ್ಕೆ ವಿದೇಶಗಳಲ್ಲಿ ಇದೆ. ಇದನ್ನು ಇನ್ನೊಂದು ಬಗೆಯಲ್ಲಿ ಅರ್ಥ ಮಾಡಿಕೊಳ್ಳುವುದಾದರೆ ಅಮೆರಿಕ, ಇಂಗ್ಲೆಂಡ್ ಸೇರಿದಂತೆ ಹಲವಾರು ರಾಷ್ಟ್ರಗಳು ಜೆನೆರಿಕ್ ಔಷಧಿಗಳಿಗಾಗಿ ಭಾರತವನ್ನು ಅವಲಂಬಿಸಿದೆ. ಇದೆಲ್ಲ ಹೋಗಲಿ ಸ್ವತಃ ಚೀನಾ ಕೂಡಾ ಭಾರತದ ಜೆನೆರಿಕ್ ಔಷಧಿಗಳಿಗೆ ಬಾಗಿಲು ತೆರೆದಿದೆ. ಈಗ ಒಮ್ಮಿಂದೊಮ್ಮೆಗೆ ಔಷಧಿ ತಯಾರಿಕೆ, ರಫ್ತನ್ನು ನಿಲ್ಲಿಸಿದರೆ ಅಮೆರಿಕದಲ್ಲೂ ಸಮಸ್ಯೆಗಳು ಶುರುವಾಗುತ್ತವೆ. ಔಷಧಿಗಳ ಬೆಲೆ ಗಗನಕ್ಕೇರುತ್ತದೆ. ಟ್ರಂಪ್ ಯಾಕೆ ಕಿರುಚಾಡಿದ ಎಂಬುದನ್ನೊಮ್ಮೆ ನೆನಪಿಸಿಕೊಳ್ಳಿ. ಇದೆಲ್ಲ ಅರ್ಥವಾಗಿಬಿಡುತ್ತದೆ.

ಚೀನಾ ಬಾಯ್ಕಾಟ್ ಕಾರ್ಯಸಾಧ್ಯವೇ?

ಇಂಡಿಯಾದಲ್ಲೇ ತಯಾರಾಗುವ ಕಾರು ಇತ್ಯಾದಿ ವಾಹನಗಳ ತಯಾರಿಕಾ ಘಟಕಗಳಿಗೆ ಬಿಡಿಭಾಗಗಳನ್ನು ಪೂರೈಸುವವರು ಯಾರು? ಭಾರತದ ವಾಹನ ತಯಾರಿಕಾ ಕ್ಷೇತ್ರ ಅತಿಹೆಚ್ಚು ಅವಲಂಬಿತವಾಗಿರೋದು ಮತ್ತದೇ ಚೀನಾ ದೇಶವನ್ನು. ಪ್ರತಿವರ್ಷ 17.5 ಶತಕೋಟ್ ಡಾಲರ್ ಮೌಲ್ಯದ ಬಿಡಿಭಾಗಗಳು ಆಮದಾದರೆ, ಅದರಲ್ಲಿ ಚೀನಾದ ಪಾಲು ಶೇ. 27. ಚೀನಾದಿಂದ ಇದ್ದಕ್ಕಿದ್ದಂತೆ ಆಮದು ನಿಲ್ಲಿಸಿದರೆ ಭಾರತದ ವಾಹನ ತಯಾರಿಕಾ ಘಟಕಗಳು ಬಾಗಿಲು ಮುಚ್ಚಿಕೊಳ್ಳಬೇಕಾಗುತ್ತದೆ. ಇದು ಚೀನಾದ ಆಟೋ ಬಿಡಿಭಾಗ ಕ್ಷೇತ್ರದ ಸಣ್ಣ ಭಾಗವಾದ್ದರಿಂದ ಅಂತಹ ದೊಡ್ಡ ಪರಿಣಾಮವನ್ನೇನೂ ಬೀರುವುದಿಲ್ಲ. ಇಂತಹ ಕ್ರಮದಿಂದ ಈಗಾಗಲೇ ಸಂಕಷ್ಟದಲ್ಲಿರುವ ಭಾರತದ ವಾಹನ ತಯಾರಿಕಾ ಕ್ಷೇತ್ರಕ್ಕೆ ಇನ್ನಷ್ಟು ಸಂಕಷ್ಟ ತಂದಿಡುವುದು ಬಿಟ್ಟು ಇನ್ನೇನನ್ನೂ ಸಾಧಿಸಿದಂತಾಗುವುದಿಲ್ಲ.

ಇವು ಎರಡು ‘ಬಾಯ್ಕಾಟ್ ಚೀನಾ ಗೂಡ್ಸ್’ನ ಘೋಷಣೆಯನ್ನು ನಿಜವಾಗಿಯೂ ಜಾರಿ ಮಾಡಿದರೆ ಆಗುವ ಪರಿಣಾಮಗಳ ಉದಾಹರಣೆಗಳು. ಇನ್ನೂ ಒಟ್ಟಾರೆ ಆರ್ಥಿಕದ ಒಟ್ಟು ಚಿತ್ರಣವೇನು? ಈ ಚಿತ್ರಣ ನೀಡುವ ಕೆಲವು ಅಂಕೆಸಂಖ್ಯೆಗಳು ಮತ್ತು ಚಾರ್ಟ್‌ಗಳನ್ನು ನೋಡೋಣ:

* 2019–20ರಲ್ಲಿ ಚೀನಾದಿಂದ ಭಾರತಕ್ಕೆ ಆಮದು (74 ಶತಕೋಟಿ ಡಾಲರ್) ಭಾರತದಿಂದ ರಫ್ತಿನ (18 ಶತಕೋಟಿ ಡಾಲರ್) 4 ಪಟ್ಟಿಗಿಂತಲೂ ಹೆಚ್ಚಿತ್ತು. 2014–17 ಅವಧಿಯ 3 ವರ್ಷಗಳಲ್ಲೇ ಚೀನಾದಿಂದ ಭಾರತದ ಆಮದು 50 ಶತಕೋಟಿ ಡಾಲರ್ ಏರಿದರೆ, ಚೀನಾಕ್ಕೆ ಭಾರತದ ರಫ್ತು ಕೇವಲ 2.5 ಶತಕೋಟಿ ಡಾಲರಿನಷ್ಟು ಏರಿತ್ತು.ಭಾರತದ ಒಟ್ಟು ರಫ್ತಿನ ಕೇವಲ 3.9% ಚೀನಾಕ್ಕೆ ಹೋಗಿತ್ತು. ಆದರೆ ಭಾರತದ ಒಟ್ಟು ಆಮದಿನ 13.7% ಚೀನಾದಿಂದ ಬರುತ್ತದೆ. ಚೀನಾದ ಒಟ್ಟು ರಫ್ತಿನ ಕೇವಲ 3.0% ಭಾರತಕ್ಕೆ ಬರುತ್ತದೆ. ಚೀನಾದ ಒಟ್ಟು ಆಮದಿನಲ್ಲಿ 0.9% ಮಾತ್ರ ಭಾರತದಿಂದ ಬರುತ್ತದೆ. ವಿವರಗಳಿಗೆ ಚಾರ್ಟ್–1ನ್ನು ನೋಡಬಹುದು

* ಭಾರತದಿಂದ ಆಮದು ಮಾಡುವ ದೇಶಗಳಲ್ಲಿ ಚೀನಾ ಮೊದಲನೆಯ ನಂಬರಿನಲ್ಲಿದೆ. ಭಾರತ–ಚೀನಾ ವ್ಯಾಪಾರ ಮೋದಿ ಸರಕಾರದ ಅವಧಿಯಲ್ಲಿ ವೇಗವಾಗಿ ಏರಿದೆ. 2014–2017 ಅವಧಿಯ 3 ವರ್ಷಗಳಲ್ಲೇ ಒಟ್ಟು ವ್ಯವಹಾರ 4 ಪಟ್ಟಿನಷ್ಟು ಏರಿದೆ. ಅಮೆರಿಕ ದೂರದ ಎರಡನೇ ಸ್ಥಾನದಲ್ಲಿದೆ. ಭಾರತ ರಫ್ತು ಮಾಡುವ ದೇಶಗಳಲ್ಲಿ ಸಹ ಚೀನಾ ಮೂರನೇ ಸ್ಥಾನದಲ್ಲಿದೆ.ವಿವರಗಳಿಗೆ ಚಾರ್ಟ್–2ನ್ನು

ಪುಟ 10 ಕ್ಕೆ





ಲಡಾಖ್‌ನಲ್ಲಿ ನಡೆದಿರುವುದು ಕೆಲವು ಪ್ರದೇಶವನ್ನು ಬಾಚಿಕೊಳ್ಳುವ ಚೀನಾದ ಪ್ರಯತ್ನವೆಂದಷ್ಟೇ ನೋಡಿದರೆ ಸಾಲದು. ಎಂದಿನ ಎಲ್‌ಎಸಿ ತಿಕ್ಕಾಟಗಳನ್ನೂ ಮೀರಿದ ಭೌಗೋಳಿಕ–ರಾಜಕೀಯ ಅಂಶಗಳು ಇದರಲ್ಲಿವೆ. ಮೂಲತಃ ಭಾರತ ಮತ್ತು ಚೀನಾದ ಸಂಬಂಧಗಳ ನಡುವೆ ಒಂದು ಮಟ್ಟದ ಅವಿಶ್ವಾಸ ಮತ್ತು ಸಂಶಯ ಬೆಳೆದಿದೆ. ಚೀನಾದ ವಿರುದ್ಧ ಅಮೆರಿಕನ್ ಕೂಟದಲ್ಲಿ ಸೇರಿಕೊಳ್ಳುವುದರಿಂದ ದೇಶಕ್ಕೆ ಒಳಿತಾಗುತ್ತದೆಯೇ ಎಂದು ಮೋದಿ ಸರಕಾರ ಪರಿಶೀಲಿಸಬೇಕಾಗಿದೆ.

ಒಂದು ಸಮಾನ ಮತ್ತು ಸ್ವತಂತ್ರ ನೆಲೆಯಲ್ಲಿ ವ್ಯವಹರಿಸಲು ವಾಸ್ತವತೆಗಳನ್ನು ಗುರುತಿಸಬಲ್ಲ ಮತ್ತು ದೇಶದ ಗಹನವಾದ ಹಿತಗಳನ್ನು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವತ್ತ ಕೆಲಸ ಮಾಡುವ ಒಂದು ರಾಜಕೀಯ ಮುಖಂಡತ್ವ ಬೇಕಾಗುತ್ತದೆ.

ಭಾರತ–ಚೀನಾ ಘರ್ಷಣೆಯ ಹಿಂದೆ

ಗಡಿಗಳನ್ನು ಮೀರಿದ ಭೌಗೋಳಿಕ–ರಾಜಕೀಯ ಅಂಶಗಳು

ಪ್ರಕಾಶ ಕಾರಟ್

ಗಲ್ವಾನ್ ನದಿ ಕಣಿವೆಯಲ್ಲಿ ನಡೆದ ಸಂಘರ್ಷ ಭಾರತದ ಜನತೆಯಲ್ಲಿ ಸಹಜವಾಗಿಯೇ ಕ್ರೋಧವನ್ನು ಎಬ್ಬಿಸಿದೆ. ಇದರಲ್ಲಿ 16 ಬಿಹಾರ್ ರೆಜಿಮೆಂಟಿನ ಸೇನಾಧಿಕಾರಿ ಸೇರಿದಂತೆ 20 ಭಾರತೀಯ ಸೈನಿಕರು ಮಡಿದಿದ್ದಾರೆ. ಈ ಘಟನೆ ಜೂನ್ 6ರ ಸಭೆಯಲ್ಲಿ ಎರಡೂ ಕಡೆಯ ಹಿರಿಯ ಮಿಲಿಟರಿ ಅಧಿಕಾರಿಗಳು ವಾಸ್ತವ ಹತೋಟಿ ರೇಖೆ(ಎಲ್‌ಎಸಿ)ಯ ವಿವಿಧ ಸ್ಥಳಗಳಲ್ಲಿ ಪರಿಸ್ಥಿತಿಯನ್ನು ತಿಳಿಗೊಳಿಸುವ ಮತ್ತು ಘರ್ಷಣೆಯನ್ನು ತಪ್ಪಿಸುವ ಬಗ್ಗೆ ಒಂದು ಒಪ್ಪಂದಕ್ಕೆ ಬಂದ ನಂತರ ನಡೆದಿರುವುದು ಆಘಾತಕಾರಿ ಮತ್ತು ಖಂಡನೀಯ. ಜೂನ್ 15ರ ರಾತ್ರಿ ಭಾರತೀಯ ಮತ್ತು ಚೀನೀ ಸೈನಿಕರ ನಡುವೆ ದೈಹಿಕ ಸಂಘರ್ಷಗಳು ನಡೆಯಲು ಕಾರಣವಾದ ಸಂದರ್ಭಗಳ ಬಗ್ಗೆ ಇನ್ನೂ ಹೆಚ್ಚೇನೂ ತಿಳಿದಿಲ್ಲ. ಸರಕಾರ ಈ ವಿಷಯವನ್ನು ಸ್ಪಷ್ಟೀಕರಿಸಲು ಏನೂ ಮಾಡಿಲ್ಲ.

ಜೂನ್ 19ರಂದು ನಡೆದ ಸರ್ವಪಕ್ಷ ಸಭೆಯಲ್ಲಿ ದೇಶ ಪರಿಸ್ಥಿತಿಯನ್ನು ಎದುರಿಸಲು ಒಗ್ಗಟ್ಟಾಗಿದೆ ಎಂದು ಎಲ್ಲ ಪ್ರತಿಪಕ್ಷಗಳು ಮತ್ತೆ ಹೇಳಿದವು. ಆದರೆ ಇದರ ಅರ್ಥ ಲಡಾಖ್‌ನಲ್ಲಿ ಚೀನೀ ಮತ್ತು ಭಾರತೀಯ ಪಡೆಗಳ ನಡುವೆ ಮುಖಾಮುಖಿಯ ಇಡೀ ಘಟನೆಯ ಬಗೆಗೆ ಮತ್ತು ಅದಕ್ಕೆ ನಮ್ಮ ಸ್ಪಂದನೆಯ ಬಗ್ಗೆ ಯಾವ ಪ್ರಶ್ನೆಯನ್ನೂ ಕೇಳಬಾರದು ಎಂದೇನಲ್ಲ. ಇದನ್ನು ಸೂಕ್ತವಾಗಿ ಅಂದಾಜು ಮಾಡಬೇಕು ಮತ್ತು ಪಾಟಗಳನ್ನು ಕಲಿಯಬೇಕು. ಇದು ಮಾತ್ರವೇ ಸರಕಾರ ಮತ್ತು ಜನತೆಗೆ ಮುಂದೆ ಸಾಗುವ ಒಂದು ದಾರಿ ಕಂಡುಕೊಳ್ಳಲು ನೆರವಾಗಬಲ್ಲದು.

ಭಾರತ ಮತ್ತು ಚೀನಾದ ವಿದೇಶ ಮಂತ್ರಿಗಳು ಜೂನ್ 17ರಂದು ದೂರವಾಣಿ ಮಾತುಕತೆ ನಡೆಸಿದರು. ತಂತಮ್ಮ ನಿಲುವುಗಳನ್ನು ಪುನರುಚ್ಚರಿಸಿದ ನಂತರ ಅವರು "ಒಟ್ಟಾರೆ ಸನ್ನಿವೇಶವನ್ನು ಒಂದು ಜವಾಬ್ದಾರಿಯುತ ರೀತಿಯಲ್ಲಿ ನಿಭಾಯಿಸಲಾಗುವುದು ಮತ್ತು ಎರಡೂ ಕಡೆಯವರು ಘರ್ಷಣೆ ತಪ್ಪಿಸುವ ಜೂನ್ 6ರ ತಿಳುವಳಿಕೆಯನ್ನು ವಿಧೇಯತೆಯಿಂದ ಪಾಲಿಸುತ್ತಾರೆ" ಎಂಬ ತೀರ್ಮಾನಕ್ಕೆ ಬಂದರು. ಅಲ್ಲದೆ, "ಎರಡೂ ಕಡೆಯವರು ವಿಷಯಗಳನ್ನು ಎಳೆದಾಡುವ ಯಾವ ಕ್ರಿಯೆಯನ್ನೂ ಮಾಡುವುದಿಲ್ಲ ಮತ್ತು ಬದಲಾಗಿ ದ್ವಿಪಕ್ಷೀಯ ಒಪ್ಪಂದಗಳು ಮತ್ತು ವಿಧಿವಿಧಾನಗಳ ಪ್ರಕಾರ ಶಾಂತಿ ಮತ್ತು ಪ್ರಶಾಂತತೆಯನ್ನು ಕಾಯ್ದುಕೊಳ್ಳುತ್ತಾರೆ" ಎಂದರು. ಸರ್ವಪಕ್ಷ ಸಭೆಯಲ್ಲಿ ಸಿಪಿಐ(ಎಂ) ಈ ನಿಲುವನ್ನು ಬೆಂಬಲಿಸಿತು.

ಈ ಸಂದರ್ಭದಲ್ಲಿ, ಪ್ರತೀಕಾರ ಮತ್ತು ಮಿಲಿಟರಿ ಪ್ರತ್ಯುತ್ತರದ ಸಂಕುಚಿತ ಭಾವನೆಯ ಕೂಗುಗಳನ್ನಂತೂ ಮೇಲ್ನೋಟಕ್ಕೇ ತಳ್ಳಿ ಹಾಕಬಹುದು. ಬುದ್ಧಿಯಿರುವ ಯಾವುದೇ ವ್ಯಕ್ತಿಗಳು, ಅವರ ರಾಜಕೀಯ ವಿಚಾರಗಳೇನೇ ಇದ್ದರೂ, ಇಂತಹ ಅವಾಸ್ತವಿಕ ಮತ್ತು ಬಾಲಿಶ ಸ್ಪಂದನೆಯನ್ನು ಬೆಂಬಲಿಸಲಾರರು.

ಇನ್ನು ಕೆಲವರಿದ್ದಾರೆ, ಅವರ ಪ್ರಕಾರ ಗಡಿಯಲ್ಲಿ ಶಾಂತಿ ಮತ್ತು ಪ್ರಶಾಂತತೆಯನ್ನು ಕಾಯ್ದುಕೊಳ್ಳಲು ಚೀನಾದೊಂದಿಗೆ ಮಾಡಿಕೊಂಡಿರುವ ಹಿಂದಿನ ಎಲ್ಲ ಒಪ್ಪಂದಗಳು ಈಗ ನಿರರ್ಥಕಗೊಂಡಿವೆ. ಎಲ್‌ಎಸಿಯಲ್ಲಿ ಗಡಿ ಪ್ರಶ್ನೆಗಳನ್ನು ನಿರ್ವಹಿಸುವ ಕುರಿತು ಒಪ್ಪಂದಗಳ ಒಂದು ಸರಣಿಯೇ ಸಂಭವಿಸಿದೆ. ಇದು 1993ರಲ್ಲಿ "ಭಾರತ–ಚೀನಾ ಗಡಿಯಲ್ಲಿ ವಾಸ್ತವ ಹತೋಟಿ ರೇಖೆಯ ಗುಂಟ ಶಾಂತಿ ಮತ್ತು ಪ್ರಶಾಂತತೆಯನ್ನು ಕಾಯ್ದುಕೊಳ್ಳುವ ಒಪ್ಪಂದ"ದೊಂದಿಗೆ ಆರಂಭವಾಯಿತು. ನಂತರ, 1996, 2005, 2013 ಮತ್ತು 2015ರಲ್ಲಿ ಭಾರತದಲ್ಲಿ ವಿವಿಧ ಸರಕಾರಗಳ ಅಡಿಯಲ್ಲಿ ಮತ್ತಷ್ಟು ಒಪ್ಪಂದಗಳಾದವು. ಇವುಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ಸರಕಾರಗಳೂ ಸೇರಿವೆ. ಈ ಒಪ್ಪಂದಗಳು ಮತ್ತು ಅವುಗಳಲ್ಲಿ ರೂಪಿಸಿದ ವ್ಯವಸ್ಥೆಗಳೇ ಭಿನ್ನಾಭಿಪ್ರಾಯಗಳು ಮತ್ತು ಘರ್ಷಣೆಗಳನ್ನು ನಿಭಾಯಿಸಿ ಹಿಮಾಲಯದ ಔನತ್ಯದಲ್ಲಿ ಶಾಂತಿಯನ್ನು ಕಾಯ್ದುಕೊಳ್ಳಲು ನೆರವಾಗಿವೆ. 45 ವರ್ಷಗಳ ಹಿಂದೆ, 1975ರಲ್ಲಿ ಸಾವು–ನೋವುಗಳುಂಟಾದ ಘರ್ಷಣೆಗಳ ನಂತರ ಸಶಸ್ತ್ರ ಘರ್ಷಣೆ ನಡೆದಿರಲಿಲ್ಲ. ಈ ಎಲ್ಲ ಪ್ರಯತ್ನಗಳನ್ನು ಸಾರಾಸಗಟು ಬದಿಗೆ ತಳ್ಳುವುದು ತಪ್ಪಾಗುತ್ತದೆ. ತದ್ವಿರುದ್ಧವಾಗಿ, ಈ ಒಪ್ಪಂದಗಳನ್ನು ಆಧರಿಸಿ ಹೊಸದೊಂದು ಒಡಂಬಡಿಕೆ ಆಗಬೇಕಾಗಿದೆ.

ಮುಂದೆ ಸಾಗುವ ದಾರಿ ಎರಡು ವಿಧದ್ದು– ಒಂದು, ತಕ್ಷಣದ ಸಂದರ್ಭದಲ್ಲಿ, ಸಮಸ್ತ ಎಲ್‌ಎಸಿ ಗುಂಟ ತಿಳಿಗೊಳಿಸುವ ಮತ್ತು ಘರ್ಷಣೆ ತಪ್ಪಿಸುವ ಕಾರ್ಯತಂತ್ರಗಳ ಬಗ್ಗೆ ಮಾತುಕತೆಗಳನ್ನು ನಡೆಸಬೇಕು. ಜೂನ್ 22ರಂದು ಮೊಲ್ಡೊದಲ್ಲಿ ಲೆಫ್ಟಿನೆಂಟ್ ಜನರಲ್ ಮಟ್ಟದಲ್ಲಿ ಸಭೆ ಒಂದು ಮುಂದಿಟ್ಟ ಹೆಜ್ಜೆ. ಆದರೆ ಮಿಲಿಟರಿ ಮಟ್ಟದಲ್ಲಿ ಮಾತ್ರ ಮಾತುಕತೆಗಳು ಸಾಲದು. ರಾಜತಾಂತ್ರಿಕ ಮತ್ತು ರಾಜಕೀಯ ಮಟ್ಟಗಳಲ್ಲೂ ಒಂದು ಸಂವಾದವನ್ನು ಆರಂಭಿಸಲು ಉನ್ನತ ಮಟ್ಟದ ಮುತುವರ್ಜಿ ಬೇಕಾಗಿದೆ. ಆದರೆ ಇದಕ್ಕೆ ಒಂದು ಸುಸ್ಪಷ್ಟ ಕಾರ್ಯವ್ಯೂಹಾತ್ಮಕ ನಿಲುವು ಬೇಕಾಗುತ್ತದೆ.

ಲಡಾಖ್‌ನಲ್ಲಿನ ಮುಖಾಮುಖಿಯನ್ನು ಹಲವು ವಿಶ್ಲೇಷಕರು ಭಾರತೀಯ ಪ್ರದೇಶವನ್ನು ಚೂರು–ಚೂರೇ ಕೆತ್ತಿಕೊಳ್ಳುತ್ತ ಹೋಗುವ ಚೀನೀಯರ ಕಾರ್ಯತಂತ್ರದ ಪ್ರಯತ್ನವೆಂದು ಕಾಣುತ್ತಿದ್ದಾರೆ. ಆದರೆ ಇದನ್ನು ಕೆಲವು ಪ್ರದೇಶವನ್ನು ಬಾಚಿಕೊಳ್ಳುವ ಪ್ರಯತ್ನವೆಂದಷ್ಟೇ ನೋಡಿದರೆ ಸಾಲದು. ಗಡಿಯಲ್ಲಿನ ಈ ಜಗಳಕ್ಕೆ ಆಳವಾದ ಕಾರಣಗಳಿವೆ. ಎಂದಿನ ಎಲ್‌ಎಸಿ ತಿಕ್ಕಾಟಗಳನ್ನೂ ಮೀರಿದ ಭೌಗೋಳಿಕ–ರಾಜಕೀಯ ಅಂಶಗಳು ಇದರಲ್ಲಿವೆ. ಮೂಲತಃ ಭಾರತ ಮತ್ತು ಚೀನಾದ ಸಂಬಂಧಗಳ ನಡುವೆ ಒಂದು ಮಟ್ಟದ ಅವಿಶ್ವಾಸ ಮತ್ತು ಸಂಶಯ ಬೆಳೆದಿದೆ.

ಚೀನಾದ ಅತಿರೇಕದ ಕ್ರಿಯೆಗಳು ಏನೇ ಇರಲಿ, ಭಾರತದ ಸರಕಾರ ಅಂಗೀಕರಿಸಿರುವ ನಲುವುಗಳೂ ಇಂತಹ ಒಂದು ಸನ್ನಿವೇಶ ಬೆಳೆದು ಬರಲು ತಮ್ಮ ಕಾಣಿಕೆ ನೀಡಿವೆ. ಜಮ್ಮು ಮತ್ತು ಕಾಶ್ಮೀರವನ್ನು ಕಳಚಿ ಹಾಕಿ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಎಂಬೆರಡು ನೇರವಾಗಿ ಕೇಂದ್ರದ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳಾಗಿ ಮಾಡುವ ಕ್ರಮಗಳು ಹೊರಗೆ ಪರಿಣಾಮಗಳನ್ನು ಬೀರಿವೆ. ಚೀನಾ ತನ್ನದೇ ದೃಷ್ಟಿಯಿಂದ ಅದನ್ನು ನೋಡಿದೆ. ಚೀನಾ ಈ ವಿಷಯದಲ್ಲಿ ಎರಡು ಬಾರಿ ಪ್ರತಿಭಟಿಸಿದೆ. ಇಂತಹ ಒಂದು ಆಡಳಿತಾತ್ಮಕ ವ್ಯವಸ್ಥೆಯಲ್ಲಿನ ಬದಲಾವಣೆ ಅದು ತನ್ನದೆಂದು ಹೇಳಿಕೊಳ್ಳುವ ಒಂದು ಪ್ರದೇಶದ ಮೇಲೆ ಪರಿಣಾಮ ಬೀರಿದೆ. ಆದರೆ ಭಾರತ ಈ ಪ್ರತಿಕ್ರಿಯೆಯನ್ನು, ವಿಶ್ವಸಂಸ್ಥೆಯ ಒಂದು ಅನೌಪಚಾರಿಕ ಅಧಿವೇಶನದಲ್ಲಿ ಎತ್ತುವಂತೆ ಚೀನಾ ಮಾಡಿದ್ದರೂ ಉಪೇಕ್ಷಿಸಿತು.

ಈ ವಿಷಯಗಳ ಮೇಲೆ ಹಿರಿಯ ಸರಕಾರೀ ಮುಖಂಡರುಗಳ ಅಬ್ಬರದ ಮಾತುಗಳು ಕೂಡ ಪರಿಣಾಮ ಬೀರಿವೆ. ಆಗಸ್ಟ್ 6ರಂದು ಸಂಸತ್ತಿನಲ್ಲಿ ಜಮ್ಮು ಮತ್ತು ಕಾಶ್ಮೀರದ ಪುನರ್ರಚನೆಯ ಚರ್ಚೆಯಾಗುತ್ತಿದ್ದಾಗ ಗೃಹಮಂತ್ರಿ ಅಮಿತ್ ಷಾ "ನಾನು ಜಮ್ಮು ಮತ್ತು ಕಾಶ್ಮೀರದ ಬಗ್ಗೆ ಸದನದಲ್ಲಿ ಮಾತಾಡುವಾಗಲೆಲ್ಲ ಪಾಕಿಸ್ತಾನ–ಆಕ್ರಮಿತ ಕಾಶ್ಮೀರ ಮತ್ತು ಅಕ್ಸಾಯ್ ಚಿನ್ ಕೂಡ ಅದರ ಭಾಗವಾಗಿರುತ್ತದೆ ಎಂದು ದಾಖಲಿಸ ಬಯಸುತ್ತೇನೆ" ಎಂದು ಜೋರಾಗಿ ಹೇಳಿದ್ದರು. ವಿದೇಶ ಮಂತ್ರಿ ಎಸ್. ಜಯಶಂಕರ್ ಕಳೆದ ಸಪ್ಟಂಬರ್‌ನಲ್ಲಿ ಒಂದು ಪತ್ರಿಕಾ ಗೋಷ್ಠಿಯಲ್ಲಿ "ಒಂದು ದಿನ ಪಾಕಿಸ್ತಾನ–ಆಕ್ರಮಿತ ಕಾಶ್ಮೀರದ ಭೌತಿಕ ವ್ಯಾಪ್ತಿ"ಯನ್ನು ಹೊಂದುವ ಬಗ್ಗೆ ಹೇಳಿದ್ದರು.

ಅಮೆರಿಕ ಸಂಯುಕ್ತ ಸಂಸ್ಥಾನಗಳ ಭಾರತ–ಶಾಂತಸಾಗರ ರಣವ್ಯೂಹ ಚೀನಾವನ್ನು ಎದುರಿಸುವ ತಂತ್ರ. ಮೋದಿ ಸರಕಾರ ತನ್ನ ಎರಡನೇ ಅಧಿಕಾರಾವಧಿಯ ಮೊದಲ ವರ್ಷದಲ್ಲಿ ಈ ರಣವ್ಯೂಹದಲ್ಲಿ ಭಾರತವನ್ನು ಸಮಗ್ರೀಕರಿಸುವ ತ್ವರಿತ ಹೆಜ್ಜೆಗಳನ್ನೂ ಇಟ್ಟಿದೆ. ಕಳೆದ ವರ್ಷ ಸಪ್ಟಂಬರ್‌ನಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳು, ಭಾರತ, ಜಪಾನ್ ಮತ್ತು ಆಸ್ಟ್ರೇಲಿಯ ನಡುವೆ ರೂಪುಗೊಳ್ಳುತ್ತಿದ್ದ ಚತುಷ್ಕೋಣೀಯ ಮೈತ್ರಿಕೂಟ ನ್ಯೂಯಾರ್ಕಿನಲ್ಲಿ ಈ ನಾಲ್ಕು ದೇಶಗಳ ವಿದೇಶ ಮಂತ್ರಿಗಳ ಮಟ್ಟದ ಸಭೆಯೊಂದಿಗೆ ಮೇಲ್ದರ್ಜೆಗೆ ಏರಿದೆ. ಈ ಸಭೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದ ವೇಳೆಯಲ್ಲಿ ನಡೆಯಿತು.


ಪ್ರಸಕ್ತ ಮಹಾಸಾಂಕ್ರಾಮಿಕದ ವೇಳೆಯಲ್ಲಿ ಜಾಗತಿಕ ಆರೋಗ್ಯ ಸಭೆಯಲ್ಲಿ ಚೀನಾವನ್ನು ಗುರಿಮಾಡುವ ಅಮೆರಿಕಾದ ರಾಜತಾಂತ್ರಿಕ ಪ್ರಯತ್ನಗಳಲ್ಲಿ ಭಾರತವೂ ಜತೆಗೂಡುವಂತೆ ಕಂಡಿತ್ತು. ಕೊರೊನ ವೈರಸ್ ಚೀನಾದ ಒಂದು ಪ್ರಯೋಗಶಾಲೆಯಲ್ಲಿ ಉತ್ಪನ್ನವಾಗಿದೆ ಎಂಬ ಅಮೆರಿಕಾದ ಆರೋಪವನ್ನು ಒಬ್ಬ ಕೇಂದ್ರ ಮಂತ್ರಿ ಪ್ರತಿಧ್ವನಿಸಿದ್ದಾರೆ.

ಇವೆಲ್ಲವೂ ಲಡಾಖಿನಲ್ಲಿ ನಡೆದ ಮುಖಾಮುಖಿಗೆ ತಮ್ಮ ಕೊಡುಗೆಗಳನ್ನು ನೀಡಿರುವಂತೆ ಕಾಣುತ್ತದೆ. ದೌಲತ್ ಬೆಗ್ ಓಲ್ಡಿಗೆ ರಸ್ತೆ ನಿರ್ಮಾಣ ಮತ್ತು ಅದರ ಶಾಖೆಗಳು ಉತ್ತರದತ್ತ ಸಾಗಿರುವುದು ಭಾರತ ತನ್ನ ಗಡಿ ಮೂಲರಚನೆಗಳನ್ನು ಬೆಳೆಸುವ ನ್ಯಾಯಬದ್ಧ ಕ್ರಿಯೆಯ ಭಾಗವೇ ಆಗಿದೆ. ಇದನ್ನು ಈಗ ಚೀನ ಭಿನ್ನ ಬೆಳಕಿನಲ್ಲಿ ಕಾಣುತ್ತಿದೆ.

ಭಾರತ ತನ್ನ ನೆರೆದೇಶಗಳೊಂದಿಗೆ ತೊಂದರೆಗಳು ಏಕೆ ಹೆಚ್ಚುತ್ತಿವೆ ಎಂದು ತನ್ನನ್ನು ತಾನೇ ಕೇಳಿಕೊಳ್ಳಬೇಕಾಗಿದೆ. ನೇಪಾಳ ಈಗ ಕಾಳಪಾನಿ ಪ್ರದೇಶದಲ್ಲಿ ಒಂದು ವಿವಾದವನ್ನು ಎತ್ತಿದೆ. ಇನ್ನೊಂದು ಮಿತ್ರ ನೆರೆದೇಶ, ಬಾಂಗ್ಲಾದೇಶ್‌ಗೆ ಈಗ ಬಾಂಗ್ಲಾದೇಶಿ ನುಸುಳುಕೋರರ ವಿರುದ್ಧ ಎನ್ನಲಾಗುವ ಅಬ್ಬರದ ಅಧಿಕೃತ ಮಾತುಗಳು ಮತ್ತು ಈ "ಗೆದ್ದಲು"ಗಳನ್ನು ಬಾಂಗ್ಲಾದೇಶಕ್ಕೆ ಕಳಿಸುವ ಸಿಎಎ–ಎನ್‌ಆರ್‌ಸಿ ತಂತ್ರದಿಂದ ಮುಜುಗರ ಅನುಭವಿಸುತ್ತಿದೆ. ಇವೆಲ್ಲವೂ ಚೀನಾದ ಯಾವುದೋ ತಂತ್ರದ ಭಾಗ ಎಂದು ತಳ್ಳಿ ಹಾಕುವುದು ಆತ್ಮವಂಚನೆಯಾಗುತ್ತದೆ. ನಿಜಸಂಗತಿಯೆಂದರೆ, ಅತಿ–ರಾಷ್ಟ್ರವಾದಿ ಹಿಂದುತ್ವದ ಬಿಜೆಪಿ–ಆರೆಸ್ಸೆಸ್ ಜಗದೃಷ್ಟಿ ದಕ್ಷಿಣ ಏಷ್ಯಾದ ದೇಶಗಳೊಡನೆ ನಮ್ಮ ಸಂಬಂಧಗಳ ಮೇಲೆ ತನ್ನ ದುಷ್ಪರಿಣಾಮ ಬೀರುತ್ತಿದೆ.

ಭಾರತ ಪ್ರಸಕ್ತ ಘರ್ಷಣೆಯನ್ನು ಅಂತ್ಯಗೊಳಿಸಲು ಮಾತ್ರವಲ್ಲ, ಚೀನಾದೊಡನೆ ಉಳಿದಿರುವ ಇತರ ಪ್ರಶ್ನೆಗಳನ್ನೂ ಪರಿಹರಿಸಿಕೊಳ್ಳುವ ಒಂದು ದಾರಿಯನ್ನು ರೂಪಿಸಿಕೊಳ್ಳಬೇಕಾಗಿದೆ. ಇದನ್ನು ಉನ್ನತ ಮಟ್ಟದ ರಾಜಕೀಯ ಮತ್ತು ರಾಜತಾಂತ್ರಿಕ ಮಧ್ಯಪ್ರವೇಶದಿಂದ ಮಾತ್ರವೇ ಮಾಡಲು ಸಾಧ್ಯ. ಇದಕ್ಕೆ ಚೀನ ಕುರಿತಂತೆ ನಮ್ಮ ಕಾರ್ಯವ್ಯೂಹವನ್ನು ಮರು–ನಿರೂಪಿಸಿ ಕೊಳ್ಳಬೇಕಾಗಿದೆ. ಒಬ್ಬ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರರೂ ಮತ್ತು ನುರಿತ ಭದ್ರತಾ ಪರಿಣಿತರೂ ಆಗಿರುವ ಎಂ ಕೆ ನಾರಾಯಣನ್ ಇತ್ತೀಚೆಗೆ ರಾಷ್ಟ್ರೀಯ ಪತ್ರಿಕೆಯೊಂದರಲ್ಲಿ ಬರೆದ ಲೇಖನದಲ್ಲಿ, ಭಾರತ ಅಮೆರಿಕ–ಚೀನಾ ತಿಕ್ಕಾಟ ಕುರಿತಂತೆ ಒಂದು ಅಲಿಪ್ತ ನಿಲುವನ್ನು ತಳೆಯಬೇಕು, ಇದೇ ದೇಶದ ಹಿತದೃಷ್ಟಿಯಿಂದ ಅತ್ಯುತ್ತಮ ಎಂದಿದ್ದಾರೆ. ಇದು ಪಾಶ್ಚಿಮಾತ್ಯ–ಪರ ರಣತಂತ್ರ ಪರಿಣಿತರ ಮತ್ತು ಲಾಬಿದಾರರ ಏರುತ್ತಿರುವ ಸಮೂಹ ರಾಗಾಲಾಪನೆಗಳಿಗೆ ತದ್ವಿರುದ್ಧವಾದ ಒಂದು ಋಷಿಸದೃಶ ಸಲಹೆ. ಅಮೆರಿಕಾದ ಭಾರತ–ಶಾಂತಸಾಗರ ರಣವ್ಯೂಹದಲ್ಲಿ ಮತ್ತು ಅಮೆರಿಕಾದೊಂದಿಗೆ ಮೊಳೆಯುತ್ತಿರುವ ಮಿಲಿಟರಿ ಮತ್ತು ಸಾಮರಿಕ ಸಂಬಂಧಗಳಲ್ಲಿ ಮುಳುಗಿರುವ ಮೋದಿ ಸರಕಾರ ಚೀನಾದ ವಿರುದ್ಧ ಕೂಟದಲ್ಲಿ ಸೇರಿಕೊಳ್ಳುವುದರಿಂದ ದೇಶಕ್ಕೆ ಒಳಿತಾಗುತ್ತದೆಯೇ ಎಂದು ಪರಿಶೀಲಿಸಬೇಕು.

ಭಾರತ ಒಂದು ಸಮಾನ ಮತ್ತು ಸ್ವತಂತ್ರ ನೆಲೆಯಲ್ಲಿ ಚೀನಾದೊಂದಿಗೆ ವ್ಯವಹರಿಸಲು ಮತ್ತೆ ಸಾಧ್ಯವಾಗಬೇಕು. ಹೀಗೆ ಮಾಡಲು ನಮ್ಮ ಮೂಲ ಹಿತಗಳನ್ನು ಕೈಬಿಡುವ ಅಗತ್ಯವೇನೂ ಇಲ್ಲ. ಇದಕ್ಕೆ ಬೇಕಾಗಿರುವುದು ವಾಸ್ತವತೆಗಳನ್ನು ಗುರುತಿಸಬಲ್ಲ ಮತ್ತು ದೇಶದ ಗಹನವಾದ ಹಿತಗಳನ್ನು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವತ್ತ ಕೆಲಸ ಮಾಡುವ ಒಂದು ರಾಜಕೀಯ ಮುಖಂಡತ್ವವಷ್ಟೇ.



ಕೃಪೆ: ಪಿ.ಮಹಮ್ಮದ್



ಅನ್ನವಿಕ್ಕಿದವನ ಮನೆಗೆ ಕನ್ನವಿಡುವ ಕೆಲಸ ಭೂ ಸುಧಾರಣಾ ಕಾಯ್ದೆ ತಿದ್ದುಪಡಿ

ನಮ್ಮ ಕಂದಾಯ ಮಂತ್ರಿಗಳು ಹೇಳುವ ಮಾತಿನ ಸತ್ಯತೆ ಏನೆಂದು ಗಮನಿಸೋಣಾ! ಅವರ ಮತ್ತು ಅವರ ಸರಕಾರದ ಪ್ರಕಾರ ಕಾರ್ಪೋರೇಟ್ ಕಂಪನಿಗಳಿಗೆ ಕೃಷಿ ಜಮೀನುಗಳನ್ನು ವರ್ಗಾಯಿಸುವ ಉದ್ದೇಶಗಳಿಂದಲ್ಲ, ಬದಲಿಗೆ, ಬಂಡವಾಳ ತೊಡಗಿಸಬಲ್ಲ ವಿದ್ಯಾವಂತ ಯುವಜನರನ್ನು ಕೃಷಿಯೆಡೆಗೆ ಆಕರ್ಷಿಸುವುದು ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಮುಖ್ಯ ಉದ್ದೇಶದಿಂದ ಈ ತಿದ್ದುಪಡಿಗಳು ಎಂದರು. ಇಲ್ಲಿ ಒಂದಂಶ ನಾವೆಲ್ಲಾ ಗಮನಿಸಬೇಕಿದೆ.

ಈ ತಿದ್ದುಪಡಿ ಬರುವ ಮುಂಚೆಯೇ, ಕೃಷಿಯಲ್ಲಿ ತೊಡಗಲು ಇವೇ ಕಲಂಗಳಂತೆ, ಕನಿಷ್ಠ ವೆಂದರೂ 40 ಯೂನಿಟ್ ಜಮೀನು ಅಂದರೇ, 200 ಎಕರೆ ಹೊಂದಲು ಅವಕಾಶವಿತ್ತು. ಮಾತ್ರವಲ್ಲ, ಕಲಂ 109 ರಡಿ, ಹೂ-ಹಣ್ಣು ಬೇಸಾಯದಡಿ ಇನ್ನು 10 ಯೂನಿಟ್ ಅಂದರೆ 54 ಎಕರೆ ಜಮೀನು ಹೊಂದಲು ಅವಕಾಶಗಳಿತ್ತು ಅಲ್ಲದೆ ಕಲಂ 5 ರಡಿ, 40 ಯುನಿಟ್ ಗೂ ಹೆಚ್ಚು ಜಮೀನುಗಳನ್ನು ಮೀನುಗಾರಿಕೆ ಅಥವಾ ಅಕ್ವಾ ಕಲ್ಚರ್ ಹೆಸರಲ್ಲಿ ಪಡೆಯಲು ಅವಕಾಶವಿತ್ತು. ಇದೆಲ್ಲಾ ಸೇರಿದರೇ, ಒಟ್ಟು ಸುಮಾರು 500 ಎಕರೆ ಜಮೀನು ಹೊಂದಲು ಅವಕಾಶ ನೀಡಲಾಗಿತ್ತು. ಆದಾಗಲೂ ನೀವು ಹೇಳುವ ಆ ಯುವಜನರು ಯಾಕೆ ದೊಡ್ಡ ಪ್ರಮಾಣದಲ್ಲಿ ಬರಲಿಲ್ಲ ಮತ್ತು ತಮ್ಮನ್ನು ಕೃಷಿಯಲ್ಲಿ ತೊಡಗಿಸಿಕೊಳ್ಳಲಿಲ್ಲ?

ಯು. ಬಸವರಾಜ್

ಕರ್ನಾಟಕ ಸರಕಾರ ಕಳೆದ ಮೇ 13 ರಂದು 'ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ-2020' ನ್ನು ಪ್ರಕಟಿಸಿದೆ. ಅದೇ ರೀತಿ, ಕಳೆದ ಜೂನ್ 11 ರಂದು ನಡೆದ ಮಂತ್ರಿ ಮಂಡಲದ ಸಭೆಯಲ್ಲಿ, ಅದರ ಮೂಲಕಾಯಿದೆಯಾದ, 'ಕರ್ನಾಟಕ ಭೂ ಸುಧಾರಣಾ ಕಾಯ್ದೆ-1961'ರ ಹಲವು ಕಲಂಗಳಿಗೆ ಮತ್ತಷ್ಟು ತಿದ್ದುಪಡಿಗಳನ್ನು ಮಾಡಲು ನಿರ್ಧರಿಸಿದೆ. ಇವುಗಳು, ಕರ್ನಾಟಕದ ಕೃಷಿರಂಗದಲ್ಲಿ ಉತ್ಪಾದಕತೆ ಮತ್ತು ಉತ್ಪಾದನೆಯನ್ನು ಹೆಚ್ಚಿಸಲು ನೆರವಾಗಲಿವೆ ಮತ್ತು ಆ ಮೂಲಕ ಕೃಷಿ ಆಧಾರಿತ ಕೈಗಾರಿಕೆಗಳ ಹೆಚ್ಚಳಕ್ಕೆ ಹಾಗೂ ನಿರುದ್ಯೋಗದ ನಿವಾರಣೆಗೆ ಸಾಧನಗಳಾಗಲಿವೆ ಎಂದು ಸರಕಾರ ಹೇಳಿಕೊಂಡಿದೆ. ಈ ಗುರಿ ಸಾಧನೆಯ ಕಾರಣಗಳಿಂದಾಗಿಯೇ, ಅದಕ್ಕೆ ಅಡ್ಡಿಯಾಗಿದ್ದ ಮೂಲ ಕಾಯ್ದೆಯಲ್ಲಿನ ಕೆಲ ಕಲಂಗಳನ್ನು ತಿದ್ದುಪಡಿ ಮಾಡಬೇಕಾಗಿ ಬಂದಿತು ಎಂದಿದೆ. ಕೃಷಿರಂಗದ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ವ್ಯಾಪಕವಾಗಿ ಹೆಚ್ಚಿಸಲು ಕೃಷಿಯಲ್ಲಿ ಆಸಕ್ತಿ ಹೊಂದಿರುವ ಯಾರು ಬೇಕಾದರೂ ಜಮೀನುಗಳನ್ನು ಹೊಂದಲು ಅವಕಾಶ ನೀಡುವುದಾಗಿ ಘೋಷಿಸಿದೆ. ವಿಧಾನ ಸಭೆಯನ್ನು ಕರೆದು ಅಲ್ಲಿ ಚರ್ಚಿಸಿ ನಿರ್ಧರಿಸುವ ಪ್ರಕ್ರಿಯೆ ವಿಳಂಬವಾಗುವುದರಿಂದ ತಡಮಾಡದೇ, ಮುಂದಿನ ಮಂತ್ರಿ ಮಂಡಲದಲ್ಲಿ ಸುಗ್ರೀವಾಜ್ಞೆಯನ್ನು ಹೊರಡಿಸುವ ಆತುರವನ್ನು ಪ್ರಕಟಿಸಿದೆ.

ಆದರೇ, ಸರಕಾರದ ಈ ನಡೆಯು, ಸಾರ್ವಜನಿಕ ವಲಯದಲ್ಲಿ ತೀವ್ರ ಟೀಕೆಗೊಳಗಾಗಿದೆ. ಇವು ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದವುಗಳೆಂದು ಹಾಗೂ ಕಪ್ಪು ಹಣವನ್ನು ಬಿಳಿ ಮಾಡುವ ಖದೀಮರಿಗೆ ನೆರವಾಗುವ ದುರುದ್ದೇಶದಿಂದ ತರಲಾಗಿದೆ ಮತ್ತು ಕೆಲವರ ಕೈನಲ್ಲಿ ಭೂಮಿಯು ವ್ಯಾಪಕವಾಗಿ ಕೇಂದ್ರೀಕರಣಗೊಳ್ಳಲು ಹಾಗೂ ಭೂ ಸುಧಾರಣಾ ಕಾಯ್ದೆಯನ್ನು ಬುಡ ಮೇಲು ಮಾಡುವ, ರೈತ-ವಿರೋಧಿ ನಿಲುಮೆಗಳ ಭಾಗಗಳಾಗಿವೆಯೆಂದು ವ್ಯಾಪಕವಾಗಿ ಖಂಡನೆಗೊಳಗಾಗಿವೆ.

ಈ ಕುರಿತು ಇರುವ ವಿರೋಧದ ಮೇಲೆ ಸರಕಾರ ಮತ್ತು ಅದರ ಮಂತ್ರಿಗಳು ತಮ್ಮ ತುತ್ತೂರಿಗಳ ಮೂಲಕ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಅದೇ ರೀತಿ ತಿದ್ದುಪಡಿ ಮಾಡಿದ ರಾಜ್ಯಗಳಲ್ಲಿ ಕಾರ್ಪೋರೇಟ್ ಕಂಪನಿಗಳ ಕೈಗೆ ಕೃಷಿ ಹೋಗಿದೆಯಾ? ಎಂದು ಪ್ರಶ್ನಿಸಿದ್ದಾರೆ! ಇರಲಿ, ಈ ಚರ್ಚೆ ಒಳ್ಳೆಯದೇ? ನಾವೀಗ ಇದರ ಘನ ಉದ್ದೇಶ ತಿಳಿಯಲು ಈ ಕಾಯ್ದೆಗಳಿಗೇನೇನು ತಿದ್ದುಪಡಿ ಮಾಡಿದ್ದಾರೆ ಮತ್ತು ಮಾಡಲು ಉದ್ದೇಶಿಸಿದ್ದಾರೆ ಎಂಬುದನ್ನು ಮೊದಲಿಗೆ ಗಮನಿಸೋಣ.

ಆಹಾರ ಭದ್ರತೆಗೆ ಅಪಾಯ, ರೀಯಲ್ ಎಸ್ಟೇಟ್ ಲೂಟಿಯ ಉಪಾಯ

ಮೇ 13, 2020 ರಂದು ಪ್ರಕಟಿಸಿದ, ಕರ್ನಾಟಕ ಭೂಸುಧಾರಣಾ ತಿದ್ದುಪಡಿ ಕಾಯ್ದೆ-2020, ಕಲಂ 109 ಕ್ಕೆ ಮುಖ್ಯವಾಗಿ ಎರಡು ತಿದ್ದುಪಡಿಗಳನ್ನು ತಂದಿದೆ.

ಕರ್ನಾಟಕ ಭೂ ಸುಧಾರಣೆ ಕಾಯ್ದೆ-1961 ಇತರ ಅಂಶಗಳಲ್ಲಿ ಏನೇ ಹೇಳಿದ್ದರೂ, ಈ ಕಲಂ ನಲ್ಲಿ ಕೃಷಿಯೇತರ ಉದ್ದೇಶಗಳಿಗೆ ಅಂದರೆ, ಹಣವುಳ್ಳವರು ಅಥವಾ ಬಂಡವಾಳದಾರರು, ಕೈಗಾರಿಕೆಗಳಿಗೆ, ಮಾನ್ಯತೆಯ ಶಿಕ್ಷಣ ಸಂಸ್ಥೆಗಳಿಗೆ, ದೇವಾಲಯಗಳಿಗಾಗಿ ಮತ್ತು ಹೂ-ಹಣ್ಣು ಬೇಸಾಯಕ್ಕಾಗಿ, ಒಟ್ಟು 55 ಘಟಕಗಳಷ್ಟು ಜಮೀನುಗಳನ್ನು ರೈತರಿಂದ ನೇರವಾಗಿ ಖರೀದಿಸಲು ಇದ್ದ ಇದುವರೆಗಿನ ಮಿತಿಯನ್ನು, 110 ಯುನಿಟ್‌ಗಳಿಗೆ ವಿಸ್ತರಿಸಿದೆ. ಅಂದರೆ ತಿದ್ದುಪಡಿಯು ಎರಡು ಪಟ್ಟು ಹೆಚ್ಚಿಸಿ, ಒಟ್ಟು 594 ಎಕರೆ ಜಮೀನು ಹೊಂದಲು ಅವಕಾಶ ಮಾಡಿಕೊಟ್ಟಿದೆ.

ಅದೇ ರೀತಿ, ಇಂತಹ ಜಮೀನುಗಳ ಭೂ ಪರಿವರ್ತನೆಯನ್ನು ವಿಳಂಬವಿಲ್ಲದೇ ಮಾಡಿಕೊಡಬೇಕು ಎಂದು ಆದೇಶಿಸಿದೆ. ಒಂದು ವೇಳೆ ಜಿಲ್ಲಾಧಿಕಾರಿಗಳು ಯಾವುದೇ ಕಾರಣಕ್ಕೆ ಒಂದು ತಿಂಗಳೊಳಗೆ ಭೂ ಪರಿವರ್ತನೆ ಮಾಡಿಕೊಡಲಾಗದಿದ್ದಲ್ಲಿ, ಹಾಗೆ ಮಾಡಿಕೊಡಲಾಗಿದೆಯೆಂದು ಭಾವಿಸಿ, ಜಮೀನಿನ ಅಭಿವೃದ್ಧಿಗೆ, ಅದರ ಹೊಸ ಮಾಲಕರು ಮುಂದಾಗಬಹುದಾಗಿದೆ.

ಮಾತ್ರವಲ್ಲ, ಯಾವುದೇ ಕಾರಣಕ್ಕೆ ಏಳು ವರ್ಷಗಳ ನಂತರವೂ ಅಭಿವೃದ್ಧಿ ಪಡಿಸಲಾಗದಿದ್ದಲ್ಲಿ, ಅದನ್ನು ಬೇರೊಬ್ಬರಿಗೆ ಮಾರಾಟ ಮಾಡಿಕೊಳ್ಳಲು ಅನುಮತಿ ನೀಡುತ್ತದೆ.

ಒಟ್ಟಾರೆ, ಈ ತಿದ್ದುಪಡಿಗಳು ಹಣವುಳ್ಳ ಯಾವುದೇ ವ್ಯಕ್ತಿ ಅಥವಾ ಬಂಡವಾಳದಾರ, ಕೃಷಿ ಜಮೀನುಗಳನ್ನು ಕೃಷಿಯೇತರ ಉದ್ದೇಶಗಳ ಹೆಸರಿನಲ್ಲಿ ಒಟ್ಟು 594 ಎಕರೆ ವರೆಗೆ ನೇರವಾಗಿ ರೈತರಿಂದ ಖರೀದಿಸಿ, ಅಭಿವೃದ್ಧಿಪಡಿಸ ಬಹುದು. ಇಲ್ಲವೇ, ಏಳು ವರ್ಷಗಳ ನಂತರ ಏರಿದ ಭೂ ಬೆಲೆಗೆ ಮಾರಾಟ ಮಾಡಿಕೊಂಡು ಲಾಭ ಮಾಡಬಹುದು.

ಇದರಲ್ಲಿ, ಕಡ್ಡಾಯವಾಗಿ ಅವರು ಅಭಿವೃದ್ಧಿಪಡಿಸಲೇ ಬೇಕೆಂಬ ಯಾವುದೇ ಕಡ್ಡಾಯ ನಿಬಂಧನೆಗಳಿಲ್ಲ. ಹೀಗಾಗಿ, ಇದು ಒಂದೆಡೆ, ದೊಡ್ಡ ಭೂಮಾಲಕ ಹಾಗೂ ಬಂಡವಾಳದಾರರಿಗೆ, ಕಪ್ಪುಹಣ ಹೊಂದಿದ ಖದೀಮರಿಗೆ, ಹೆಚ್ಚೆಚ್ಚು ಭೂಮಿಯನ್ನು ತಮ್ಮ ಕೈಯೊಳಗೆ ಕೇಂದ್ರೀಕರಿಸಿಕೊಳ್ಳಲು ಹಾಗೂ ಕಪ್ಪು ಹಣವನ್ನು ಬಿಳಿಯಾಗಿಸಿಕೊಳ್ಳಲು ಖಂಡಿತಾ ನೆರವಾಗುತ್ತದೆ. ಇನ್ನೊಂದೆಡೆ, ದೊಡ್ಡ ಬಂಡವಾಳದಾರರು ಹಾಗೂ ಕಾರ್ಪೋರೇಟ್ ಕಂಪನಿಗಳು, ಭೂ ಸ್ವಾಧೀನ ಕಾಯ್ದೆ - 2013 ರಿಂದ ತಪ್ಪಿಸಿಕೊಂಡು, ಅವರ ಕೈಗಾರಿಕೆಗಳ ನಿರ್ಮಾಣದ ಘನ ಉದ್ದೇಶಕ್ಕಾಗಿ, ಭೂಮಿ ಮಾರಾಟ ಮಾಡಿದ ರೈತರನ್ನು ವಂಚಿಸಲು ನೆರವಾಗುತ್ತದೆ.

ಕೃಷಿಯೇತರ ಉದ್ದೇಶಗಳಿಗಾಗಿ ಜಮೀನುಗಳನ್ನು ಪಡೆಯಲು 'ಭೂಸ್ವಾಧೀನ ಕಾಯ್ದೆ-2013' ಇರುವಾಗ, ಮತ್ತೊಂದು ಇಂತಹ ತಿದ್ದುಪಡಿ ಕಾಯ್ದೆಯ ಔಚಿತ್ಯವೇನು? ಭೂಸ್ವಾಧೀನ ಕಾಯ್ದೆಯಂತೆ ಭೂಮಿಯನ್ನು ಪಡೆದಲ್ಲಿ, ಸರಕಾರದ ಮಧ್ಯಸ್ಥಿಕೆಯಲ್ಲಿ ಕಾಯ್ದೆಯ ನಿಯಮಾವಳಿಗಳಂತೆ ರೈತರಿಗೆ ಸ್ವಲ್ಪವಾದರೂ ಉತ್ತಮ ಬೆಲೆ ನೀಡಲೇ ಬೇಕಾಗುತ್ತದೆ, ಅದೇ ರೀತಿ, ಭೂಮಿ ಕಳೆದುಕೊಂಡ ಕುಟುಂಬಗಳ ಪುನರ್ವಸತಿಗೆ ಕ್ರಮ ವಹಿಸಬೇಕು ಹಾಗೂ ಕಾಲ ಮಿತಿಯೊಳಗೆ ಕೈಗಾರಿಕೆ ನಿರ್ಮಿಸಿ ಉದ್ಯೋಗ ಒದಗಿಸಬೇಕಾಗುತ್ತದೆ.

ಈಗಿನ ಕಾಯ್ದೆಯಡಿಯಾದರೇ ಅಂತಹ ಯಾವುದೇ ನಿಯಂತ್ರಣಗಳಿಲ್ಲದೆ, ರೈತರಿಂದ ಬಲವಂತವಾಗಿಯೂ, ಕಡಿಮೆ ಬೆಲೆಗೆ ಜಮೀನು ಪಡೆಯಲು ಸಾಧ್ಯವಾಗುತ್ತದೆ. ಮತ್ತು ಅವರು, ಇತರೇ ನೆರವುಗಳನ್ನು ಭೂ ಸಂತ್ರಸ್ತರಿಗೆ ನೀಡಬೇಕಾಗಿಲ್ಲ.

ಒಟ್ಟಾರೆ, ಇದೆಲ್ಲವೂ ಫಲವತ್ತಾದ ಕೃಷಿ ಜಮೀನುಗಳನ್ನು ಸಂಕಷ್ಟದಲ್ಲಿರುವ ರೈತರ ಕೈಗಳಿಂದ ವೇಗವಾಗಿ ಕೃಷಿಯೇತರ ಉದ್ದೇಶದ ಹೆಸರಿನಲ್ಲಿ ಕಿತ್ತುಕೊಂಡು, ಕಪ್ಪುಹಣ ಬಿಳಿಯಾಗಿಸಲು ಮತ್ತು ವ್ಯಾಪಕವಾಗಿ ಭೂಮಿಯನ್ನು ಕೇಂದ್ರೀಕರಿಸಿಕೊಳ್ಳಲು ಬಿಡುವ ದುರುದ್ದೇಶದ ಕಡು ದುರ್ವಾಸನೆಯನ್ನೇ ರಾಚುತ್ತಿದೆ. ಇದು, ರೈತರನ್ನು ವಂಚಿಸಲು ದಾರಿ ಮಾಡಿಕೊಡುವುದಲ್ಲದೇ, ಕೃಷಿಭೂಮಿಗಳನ್ನು ಪೂರ್ವಾಪರ ಯೋಜಿಸದೇ ನಿರಂತರ ಕಡಿತಗೊಳಿಸುವ ಹಾಗೂ ಆ ಮೂಲಕ ದೇಶದ ಮತ್ತು ರಾಜ್ಯದ ಆಹಾರದ ಭದ್ರತೆ ಮತ್ತು ಕಚ್ಚಾ ಮಾಲು ಒದಗಿಸುವ ಕೈಗಾರಿಕಾ ಭದ್ರತೆಗಳಿಗೆ ತೀವ್ರ ಧಕ್ಕೆ ಯನ್ನುಂಟುಮಾಡುವ ವಿವೇಚನಾ ರಹಿತ ನಡೆಯಾಗಿದೆ. ಬೆಳೆಯುತ್ತಿರುವ ಜನಸಂಖ್ಯೆಗನುಗುಣವಾಗಿ, ಆಹಾರ ಧಾನ್ಯಗಳನ್ನು ಹೆಚ್ಚಿಸುವ ಅಗತ್ಯವಿರುವಾಗ ಮತ್ತು ವಿಸ್ತರಣೆಗೊಳ್ಳಲಿರುವ ಕೃಷಿ-ಆಧಾರಿತ ಕೈಗಾರಿಕೆಗಳಿಗೆ ಕಚ್ಚಾಮಾಲು ಒದಗಿಸಬೇಕಾದ ಕರ್ತವ್ಯ ಸರಕಾರಗಳ ಹೆಗಲ ಮೇಲಿರುವಾಗ, ಅವುಗಳ ರೈತ-ವಿರೋಧಿ ನಿಲುಮೆಗಳಿಂದಾಗಿಯೆ ಉಂಟಾಗಿರುವ ರೈತರ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಂಡು ಮತ್ತು ಅವರನ್ನು ವಂಚಿಸಿ, ಫಲವತ್ತಾದ ಕೃಷಿ ಜಮೀನುಗಳನ್ನು ಹೀಗೆ ಕಬಳಿಸಲು ಅವಕಾಶ ನೀಡುವುದನ್ನು ಜವಾಬ್ದಾರಿಯುತ ನಡೆಯೆಂದು ಹೇಗೆ ಹೇಳಲು ಸಾಧ್ಯ?

ಕೃಷಿಕ ಸಮುದಾಯದ ಉದ್ಯೋಗ ಭದ್ರತೆಗೆ ಕೊಡಲಿಯೇಟು

ಇನ್ನು, ಈಗ ಕರ್ನಾಟಕ ಸರಕಾರ, ಮೂಲಕಾಯಿದೆ ಕರ್ನಾಟಕ ಭೂಸುಧಾರಣಾ ಕಾಯ್ದೆ-1961 ಕ್ಕೆ



ಕೃಪೆ: ಪಿ. ಮಹಮ್ಮದ್, ವಾ.ಭಾ.

ತಿದ್ದುಪಡಿ ಮಾಡಲು ಉದ್ದೇಶಿಸಿರುವ ಕಲಂಗಳು, 5, 63, 79(ಎ), (ಬಿ), (ಸಿ) ಮತ್ತು 80 ಗಳಾಗಿವೆ. ಇವುಗಳು ಏನು ಹೇಳುತ್ತವೆ.

ಕಲಂ 63, ರೈತ ಕುಟುಂಬಗಳು ಹೊಂದಲಿರುವ ಗರಿಷ್ಠ ಜಮೀನುಗಳ ಕುರಿತ, ಭೂಮಿತಿ ಕಾಯ್ದೆಯಾಗಿದೆ. ಇಲ್ಲಿಯವರೆಗೆ, ಗಂಡ, ಹೆಂಡತಿ ಹಾಗೂ ಇಬ್ಬರು ಚಿಕ್ಕ ಮಕ್ಕಳು ಇರುವ ಕುಟುಂಬ ಒಂದು ಘಟಕವೆಂದು ಪರಿಗಣಿಸಿ, ಮಳೆ ಆಧಾರಿತ ಜಮೀನಾದರೆ ಗರಿಷ್ಠ 10 ಯುನಿಟ್ ಅಂದರೆ 54 ಎಕರೆ ಮಳೆ ಆಧಾರಿತ ಜಮೀನುಗಳನ್ನು ಹೊಂದಲು ಅವಕಾಶ ನೀಡಿತ್ತು. ಒಂದು ವೇಳೆ ಆ ಕುಟುಂಬವು, ಪ್ರಾಯದ ಮಕ್ಕಳನ್ನು ಹೊಂದಿದ್ದರೆ, ಅವರುಗಳನ್ನು ಪ್ರತ್ಯೇಕ ಘಟಕಗಳಾಗಿ ಪರಿಗಣಿಸಿ, ಹೆಚ್ಚುವರಿಯಾಗಿ, ತಲಾ ಎರಡು ಯುನಿಟ್ ಜಮೀನು ಹೊಂದಲು ಅವಕಾಶ ನೀಡಿತ್ತಲ್ಲದೆ, ಐದಕ್ಕಿಂತ ಹೆಚ್ಚಿನ ಕುಟುಂಬದ ಸದಸ್ಯರನ್ನು ಹೊಂದಿದ್ದರೆ, ಗರಿಷ್ಠ 20 ಯುನಿಟ್ ಅಂದರೆ, 110 ಎಕರೆ ಮಳೆ ಆಧಾರಿತ ಜಮೀನು ಹೊಂದಲು ಅವಕಾಶ ನೀಡಿತ್ತು.

ಈಗ ಈ ಕಲಂಗೆ ತಿದ್ದುಪಡಿ ಮಾಡಿ ಇಂತಹ ಕುಟುಂಬ ಮಳೆ ಆಧಾರಿತ ಜಮೀನನ್ನು ಗರಿಷ್ಠ 40 ಯುನಿಟ್ ಅಂದರೆ 220 ಎಕರೆ ವರೆಗೆ ಹೊಂದಲು ಅವಕಾಶ ಮಾಡಿಕೊಡುತ್ತದೆ.

ಇನ್ನು ಕಲಂ 5, ಮೂಲ ಕಾಯ್ದೆಯಂತೆ, ಗೇಣಿ ಪದ್ಧತಿಯನ್ನು ನಿಷೇಧಿಸುತ್ತದೆ.

ದೇಶ ಮತ್ತು ಕರ್ನಾಟಕದಲ್ಲಿ ಉಳುವವನನ್ನು ಭೂ ಒಡೆಯನನ್ನಾಗಿಸುವ ನಿಜ ಉದ್ದೇಶ ಸರಕಾರಗಳಿಗೆ ಇರದಿದ್ದುದರಿಂದ ಹಳೆಯ ಜಮೀನುದಾರರ ಕೈನಲ್ಲಿಯೇ ಬಹುತೇಕ ಜಮೀನುಗಳು ಉಳಿಯುವಂತೆ ಮತ್ತು ಉಳುವವರಲ್ಲಿ ಬಹುತೇಕರನ್ನು ಒಕ್ಕಲೆಬ್ಬಿಸಲ್ಪಟ್ಟು ಕೃಷಿ ಕೂಲಿಕಾರರ ಪಡೆ ಸೇರುವಂತೆ ಕ್ರಮವಹಿಸಿರುವುದು ಈಗ ಇತಿಹಾಸ. ಅದೇ ರೀತಿ, ಈ ಹೊಸ ಭೂಮಾಲಕರಿಗೆ ಉಳುವುದು ತಿಳಿಯದಾದ್ದರಿಂದ ಉಳುಮೆಯ ಅನುಭವವಿರುವ ಹೊಸ ಕೃಷಿಕೂಲಿಕಾರರನ್ನು ಇಟ್ಟುಕೊಂಡು ವ್ಯವಸಾಯದಲ್ಲಿ ತೊಡಗುವವನನ್ನು ರೈತನೆಂದು 'ಕರ್ನಾಟಕ ಭೂ ಸುಧಾರಣಾ ಕಾಯ್ದೆ-1961' ಹೊಸ ವ್ಯಾಖ್ಯಾನ ನೀಡಿತು ಮತ್ತು ಗೇಣಿಯನ್ನು ನಿಷೇಧಿಸಿತ್ತು. ಆದಾಗಲೂ, ಹಲವೆಡೆ ಹೊಸ ಭೂಮಾಲಕರಾಗಿ ಬದಲಾಗದ ಹಳೆಯ ಜಮೀನುದಾರರು, ಗೇಣಿ ಪದ್ಧತಿಯ ನಿಷೇಧದ ದುರುಪಯೋಗ ಪಡೆದು, ಈ ಅನುಭವಿ ಮಾಜಿ ಉಳುಮೆದಾರರ ಮೂಲಕ ಅಕ್ರಮ ಗೇಣಿ ಉಳುಮೆಯನ್ನು ಮುಂದುವರೆಸಿದ್ದರು. ಗೇಣಿ ಪದ್ಧತಿಯನ್ನು ಅದಾಗಲೇ ನಿಷೇಧಿಸಿದ್ದರಿಂದ, ಗೇಣಿದಾರರ ಸಂರಕ್ಷಣೆಗೆ ಕಾಯ್ದೆಯಲ್ಲಿ ಅವಕಾಶಗಳಿಲ್ಲದಿದ್ದರಿಂದ ಜಮೀನುದಾರರು ಸುರಕ್ಷಿತವಾಗಿದ್ದರು.

ಈ ಹೊಸ ಬಡ ಗೇಣಿದಾರರನ್ನು ಸಂರಕ್ಷಿಸಲು ನಡೆಸಲಾಗುತ್ತಿರುವ ಹೋರಾಟ ಇಲ್ಲಿಯವರೆಗೆ ಸಫಲವಾಗಲಿಲ್ಲ. ಬದಲಿಗೆ, ಕಲಂ 5 ಕ್ಕೆ, 1995 ರಲ್ಲಿ ತಿದ್ದುಪಡಿ ಮಾಡಿ, ಮೀನುಗಾರಿಕೆಗಾಗಿ ಕೆಲವೆಡೆ ಗರಿಷ್ಠ 40 ಯುನಿಟ್ ಅಂದರೆ 200 ಎಕರೆವರೆಗಿನ ಜಮೀನುಗಳನ್ನು ಗೇಣಿಗೆ ಅಥವಾ ಗುತ್ತಿಗೆಗೆ ಪಡೆಯಲು ಅನುಕೂಲ ಮಾಡಿ ಕೊಡಲಾಯಿತು. ಇದು ಸಾಮಾನ್ಯ ಗೇಣಿದಾರರಿಗಾಗಿ ಮಾಡಿದ ತಿದ್ದುಪಡಿಯಾಗಿರಲಿಲ್ಲ. ಬದಲಿಗೆ, ಭೂಮಾಲಕ ಬಂಡವಾಳದಾರರಿಗಾಗಿ ಮಾಡಿದ ತಿದ್ದುಪಡಿಯಾಗಿತ್ತು. ಇದೀಗ ಸದರಿ ಕಲಂ ನ್ನು ಪೂರ್ಣವಾಗಿ ತಗೆದು ಹಾಕಲು ಕ್ರಮವಹಿಸಲಾಗಿದೆ. ಅಂದರೆ, ಇನ್ನು ಮುಂದೆ ಯಾರು ಬೇಕಾದರೂ, ಎಷ್ಟು ಎಕರೆ ಬೇಕಾದರೂ ಜಮೀನುಗಳನ್ನು ಗುತ್ತಿಗೆಗೆ ಪಡೆದು ಗುತ್ತಿಗೆ ಬೇಸಾಯದಲ್ಲಿ ತೊಡಗಲು ಅವಕಾಶ ಮಾಡಿಕೊಡಲಿದೆ.

ಇನ್ನು ಕಲಂ 79 ಎ, ಬಿ, ಸಿ ಹಾಗೂ 80 ಇವುಗಳು ಕೃಷಿಕರು, ಕೂಲಿಕಾರರು, ಗೇಣಿದಾರರು ಮಾತ್ರವೇ ಕೃಷಿ ಜಮೀನುಗಳನ್ನು ಹೊಂದಲು ನಿರ್ಬಂಧಿಸುತ್ತವೆ. ಕೃಷಿಗೆ ಸಂಬಂಧಿಸದ ಕುಟುಂಬಗಳ ಯಾರೇ ವ್ಯಕ್ತಿಗಳು, ಕೃಷಿ ಭೂಮಿ ಹೊಂದಲು ಇದುವರೆಗೆ ಅವಕಾಶ ನೀಡುತ್ತಿರಲಿಲ್ಲ. ಮಾತ್ರವಲ್ಲ, ಒಂದುವೇಳೆ ಅಕ್ರಮವಾಗಿ ಹೊಂದಿದ್ದರೆ ದಂಡಿಸಲು ಮತ್ತು ವಾಪಾಸು ಪಡೆಯಲು ಹೇಳುತ್ತಿದ್ದ ಈ ಕಲಂಗಳು, ಕೃಷಿಕ ಸಮುದಾಯದ ಉದ್ಯೋಗ ಭದ್ರತೆಯನ್ನು, ಉದ್ಯೋಗದ ಮೂಲಗಳಾದ ಜಮೀನುಗಳ ಭದ್ರತೆಯನ್ನು ಕೇವಲ ಕೃಷಿಕ ಸಮುದಾಯಕ್ಕೆ ನೀಡುತ್ತಿದ್ದವು.

ಈ ನಡುವೆ ಕೃಷಿಕ ಕುಟುಂಬಗಳ ಜನರೇ, ಕೃಷಿಯೇತರ ಆದಾಯ 2 ಲಕ್ಷ ರೂ ಮೇಲೆ ಹೊಂದಿದ್ದರೆ, ಅಂತಹವರಿಗೂ ಕೃಷಿ ಭೂಮಿ ಹೊಂದಲು ಅವಕಾಶ ಕೊಡುತ್ತಿರಲಿಲ್ಲ. ಆದರೆ, ಸಿದ್ದರಾಮಯ್ಯನವರ ಸರಕಾರ 25 ಲಕ್ಷ ರೂಗಳವರೆಗಿನ ವಾರ್ಷಿಕ ಆದಾಯ ಹೊಂದಿರುವ ಯಾರೇ ಆದರೂ ಕೃಷಿ ಭೂಮಿ ಹೊಂದಬಹುದೆಂದು, ಕೃಷಿಕರಲ್ಲದ ಶ್ರೀಮಂತರು, ಕಪ್ಪಹಣದ ಖದೀಮರು, ಕೃಷಿ ಭೂಮಿ ಹೊಂದಲು ಅವಕಾಶ ನೀಡುವ ತಿದ್ದುಪಡಿ ಮಾಡಿ ಕೃಷಿಕ ಸಮುದಾಯದ ಉದ್ಯೋಗ ಭದ್ರತೆಗೆ ಮೊದಲ ಕೊಡಲಿ ಏಟು ಹಾಕಿದರು. ಇದೀಗ ಯಡಿಯೂರಪ್ಪನವರ ಬಿಜೆಪಿ ಸರಕಾರ, ಈ ಕಲಂಗಳನ್ನೆ ಕಿತ್ತೆಸೆದು ಎಷ್ಟೇ ಆದಾಯ ಹೊಂದಿದ ಯಾರು ಬೇಕಾದರೂ ಜಮೀನುಗಳನ್ನು ಹೊಂದಲು ಅವಕಾಶ ಮಾಡಿಕೊಡುವ ಮೂಲಕ, ಕೃಷಿಕ ಸಮುದಾಯದ ಆಧಾರವಾದ ಉದ್ಯೋಗದ ಭದ್ರತೆಯ ಬುಡಕ್ಕೆ ಬೆಂಕಿ ಹಾಕಿದ್ದಾರೆ.

ಯುವಕರು ಕೃಷಿಯಲ್ಲಿ ತೊಡಗಲು ಈಗ ಇರುವ ಅವಕಾಶ ಬಳಸುತ್ತಿಲ್ಲ ಯಾಕೆ?

ಈಗ ನಮ್ಮ ಕಂದಾಯ ಮಂತ್ರಿಗಳು ಹೇಳುವ ಮಾತಿನ ಸತ್ಯತೆ ಏನೆಂದು ಗಮನಿಸೋಣಾ! ಅವರ ಮತ್ತು ಅವರ ಸರಕಾರದ ಪ್ರಕಾರ ಕಾರ್ಪೋರೇಟ್ ಕಂಪನಿಗಳಿಗೆ ಕೃಷಿ ಜಮೀನುಗಳನ್ನು ವರ್ಗಾಯಿಸುವ ಉದ್ದೇಶಗಳಿಂದಲ್ಲ, ಬದಲಿಗೆ, ಬಂಡವಾಳ ತೊಡಗಿಸಬಲ್ಲ ವಿದ್ಯಾವಂತ ಯುವಜನರನ್ನು ಕೃಷಿಯೆಡೆಗೆ ಆಕರ್ಷಿಸುವುದು ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಮುಖ್ಯ ಉದ್ದೇಶದಿಂದ ಈ ತಿದ್ದುಪಡಿಗಳು ಎಂದರು. ಇಲ್ಲಿ ಒಂದಂಶ ನಾವೆಲ್ಲಾ ಗಮನಿಸಬೇಕಿದೆ.

ಈ ತಿದ್ದುಪಡಿ ಬರುವ ಮುಂಚೆಯೇ, ಕೃಷಿಯಲ್ಲಿ ತೊಡಗಲು ಇವೇ ಕಲಂಗಳಂತೆ, ಕನಿಷ್ಠ ವೆಂದರೂ 40 ಯೂನಿಟ್ ಜಮೀನು ಅಂದರೆ, 200 ಎಕರೆ ಹೊಂದಲು ಅವಕಾಶವಿತ್ತು. ಮಾತ್ರವಲ್ಲ, ಕಲಂ 109 ರಡಿ, ಹೂ-ಹಣ್ಣು ಬೇಸಾಯದಡಿ ಇನ್ನು 10 ಯೂನಿಟ್ ಅಂದರೆ 54 ಎಕರೆ ಜಮೀನು ಹೊಂದಲು ಅವಕಾಶಗಳಿತ್ತು ಅಲ್ಲದೆ ಕಲಂ 5 ರಡಿ, 40 ಯುನಿಟ್ ಗೂ ಹೆಚ್ಚು ಜಮೀನುಗಳನ್ನು ಮೀನುಗಾರಿಕೆ ಅಥವಾ ಅಕ್ವಾ ಕಲ್ಚರ್ ಹೆಸರಲ್ಲಿ ಪಡೆಯಲು ಅವಕಾಶವಿತ್ತು. ಇದೆಲ್ಲಾ ಸೇರಿದರೇ, ಒಟ್ಟು ಸುಮಾರು 500 ಎಕರೆ ಜಮೀನು ಹೊಂದಲು ಅವಕಾಶ ನೀಡಲಾಗಿತ್ತು. ಆದಾಗಲೂ ನೀವು ಹೇಳುವ ಆ ಯುವಜನರು ಯಾಕೆ ದೊಡ್ಡ ಪ್ರಮಾಣದಲ್ಲಿ ಬರಲಿಲ್ಲ ಮತ್ತು ತಮ್ಮನ್ನು ಕೃಷಿಯಲ್ಲಿ ತೊಡಗಿಸಿಕೊಳ್ಳಲಿಲ್ಲ?

ಈಗಲೂ ಇರುವ ಆ ಅವಕಾಶವನ್ನು ಅವರು ಬಳಸಿಕೊಳ್ಳ ಬಹುದಲ್ವಾ? ಹಾಗಿದ್ದರೆ, ಮತ್ಯಾಕೆ ಈ ತಿದ್ದಪಡಿಗಳು?

ಈಗ ನೋಡಿ, ನಿಮ್ಮ ತಿದ್ದುಪಡಿಗಳಂತೆ, ಯಾರು ಬೇಕಾದರೂ, ಒಂದೆಡೆ ಕಲಂ 63 ರಂತೆ ಗರಿಷ್ಠ 40 ಯೂನಿಟ್, ಇನ್ನೊಂದೆಡೆ ಕಲಂ 109 ರಂತೆ, 590 ಎಕರೆ ಮತ್ತು ಕಲಂ 5 ನ್ನು ಕೈ ಬಿಟ್ಟಿದ್ದರಿಂದ ಎಷ್ಟು ಎಕರೆ ಬೇಕಾದರೂ ಗುತ್ತಿಗೆಗೆ ಪಡೆಯಬಹುದು. ಅಂದರೆ, ಸುಮಾರು 750 ಎಕರೆ ಜಮೀನುಗಳು ಮತ್ತು ಎಷ್ಟು ಬೇಕಾದರೂ ಗುತ್ತಿಗೆ ಬೇಸಾಯದ ಜಮೀನು ಪಡೆಯಲು ಅನುಮತಿ ನೀಡಿದ್ದೀರಿ ! ನಿಮ್ಮದೇ ಪಕ್ಷದ ಕೇಂದ್ರ ಸರಕಾರ ಅದಾಗಲೇ



ಕಾರ್ಪೋರೇಟ್ ಕಂಪನಿಗಳು ಮುಂಗಡ ವ್ಯಾಪಾರದ ಬೇಸಾಯದಲ್ಲಿ ತೊಡಗಲು ಮತ್ತು ಬೀಳು ಭೂಮಿ ಅಭಿವೃದ್ಧಿ ಹೆಸರಿನಲ್ಲಿ ಗುತ್ತಿಗೆ ಬೇಸಾಯದಲ್ಲಿ ತೊಡಗಲು ಕಾಯ್ದೆಗಳನ್ನು ಮಾಡಿಲ್ಲವೇ?

ಅದಕ್ಕೆ ನೆರವಾಗಲೂ ತಾನೇ ಇಲ್ಲಿ ತಾವು ಈ ಸರ್ಕಸ್ಸು ನಡೆಸಿರುವುದು! ನಿಮ್ಮದೇ ಕೇಂದ್ರ ಸರಕಾರ, ಧೈರ್ಯವಾಗಿ ಕಾರ್ಪೋರೇಟ್ ಕಂಪನಿಗಳ ಸೇವೆಗಾಗಿಯೇ ತಾನು ಕಾರ್ಯ ನಿರ್ವಹಿಸುತ್ತಿದ್ದೇನೆ ಎಂದು ಹೇಳುವಾಗ ತಾವೇಕೆ ನಾಚುವಿರಿ? ಅದಾಗಲೇ ಅವರು ರೈತ ಪದದ ವ್ಯಾಖ್ಯಾನವನ್ನು ಮತ್ತೊಮ್ಮೆ ಬದಲಿಸಿಯಾಗಿದೆ. ಇನ್ನು ತಾವಷ್ಟೇ ಕ್ರಮವಹಿಸಬೇಕಾಗಿದೆ. ಅದಾಗಲೇ, ಕಾರ್ಪೋರೇಟ್ ಕಂಪನಿಗಳ ಆಶ್ರಯದಲ್ಲಿ ಮತ್ತು ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುವ ಹತ್ತಾರು ಸಾವಿರ ಎಕರೆ ಜಮೀನು ಹೊಂದಿದ ರೈತ ಉತ್ಪಾದಕರ ಸಂಘಗಳು ಮತ್ತು ಸಂಸ್ಥೆಗಳನ್ನು ರೈತನೆಂದು ವ್ಯಾಖ್ಯಾನಿಸಲಾಗಿದೆ. ಕಾರ್ಪೋರೇಟ್ ಕಂಪನಿಗಳ ಹತ್ತಿರ, ಆಧುನಿಕ ಕೃಷಿಯ ಉನ್ನತ ತಂತ್ರಜ್ಞಾನ, ಯಂತ್ರೋಪಕರಣ, ಬಂಡವಾಳ ಇದ್ದು, ಅವರು ವಿದೇಶಕ್ಕಾಗಿ ಬೆಳೆಯಲಿದ್ದಾರೆಂದು, ಅವರಿಂದ, ದೇಶಕ್ಕೆ ಭಾರೀ ವಿದೇಶಿ ವಿನಿಮಯ ಲಭ್ಯವಾಗಲಿದೆ ಮತ್ತು ಆಂತರಿಕ ಉತ್ಪಾದನೆಯಲ್ಲಿ ಭಾರಿ ಹೆಚ್ಚಳ ಸಾಧಿಸಿ, ಆ ಮೂಲಕ ಅಭಿವೃದ್ಧಿ ಮಾಡುವವೆಂದು ಘೋಷಿಸುತ್ತಾ ಹರ್ಷಾತಿರೇಕದಲ್ಲಿರುವಾಗ ನೀವೇಕೆ ಅದನ್ನು ಮರೆ ಮಾಚುವಿರಿ ಮಹರಾಯರೇ ?

ಕರ್ನಾಟಕದ ಕೆಲ ಬಂಡವಾಳದಾರರಿಗೆ, ಅವರ ಕಪ್ಪು ಹಣ ಬಿಳಿಮಾಡಲು ಜಮೀನುಗಳು ಬೇಕೆ ಹೊರತು ಉತ್ಪಾದನೆಯಲ್ಲಿ ತೊಡಗುವುದಕ್ಕಲ್ಲ? ಅವರ ಬಳಿ ಆದುನಿಕ ಕೃಷಿ ತಂತ್ರಜ್ಞಾನ ಮತ್ತು ಯಂತ್ರೋಪಕರಣ ಮತ್ತು ಬಂಡವಾಳ ವೆಲ್ಲಿಯದು! ನೀವೇಕೆ ಸುಮ್ಮನೆ ಸುಳ್ಳು ಹೇಳಿ ಅಪಹಾಸ್ಯಕ್ಕೀಡಾಗುವಿರಿ ! ನಿಜವನ್ನು ಒಪ್ಪಿಕೊಳ್ಳಿರಿ.

'ಉಳುವವನೇ' ಅಲ್ಲ, 'ಉಳ್ಳವನೇ' ಭೂಒಡೆಯ!

ಉಳುವವನೇ ಭೂ ಒಡೆಯನಾಗಬೇಕೆಂಬ ಘೋಷಣೆ ಮತ್ತು ಅದರ ಚಳುವಳಿ ಸ್ವಾತಂತ್ರ ಸಂಗ್ರಾಮದ ಪ್ರಮುಖ ಭಾಗವಾಗಿತ್ತು. ಜಮೀಂದಾರಿ, ಜಹಗಿರ್ದಾರಿ ಹಾಗೂ ಬ್ರಿಟಿಷ್ ಕಂಪನಿಗಳ ಪರವಾದ ಬಿಟೀಷರ ಭೂಸುಧಾರಣಾ ನೀತಿಯ ದೌರ್ಜನ್ಯದ ವಿರುದ್ಧ ಇದು ನಿರ್ದೇಶಿತವಾಗಿತ್ತು. ಹತ್ತಾರು ಸಾವಿರ ಜನರ ಬಲಿದಾನ, ಕೋಟ್ಯಾಂತರ ಆಸ್ತಿ,ಪಾಸ್ತಿ,, ಮಾನ ಹಾಗೂ ಅಂಗಾಂಗ ಹಾನಿಗಳ ಈ ಹೋರಾಟದ ಭಾಗವಾಗಿಯೇ ಸ್ವಾತಂತ್ರ್ಯ ನಂತರ, ನಮ್ಮ ದೇಶ ಹಾಗೂ ರಾಜ್ಯಗಳಲ್ಲಿ ಉಳುವವನನ್ನ ಒಡೆಯನನ್ನಾಗಿಸುವ ಘೋಷಣೆಯಡಿಯಲ್ಲಿಯೇ ಭೂ ಸುಧಾರಣಾ ಕಾಯ್ದೆಗಳನ್ನು ರೂಪಿಸಲಾಯಿತು. ಆದರೇ ಸ್ವಾತಂತ್ರ್ಯ ನಂತರ ಅಧಿಕಾರದ ಚುಕ್ಕಾಣಿ ಹಿಡಿದ ದೇಶದ ಹಾಗೂ ರಾಜ್ಯಗಳ ಆಳರಸರು ಬಹುತೇಕ ಒಂದೆಡೆ ಘೋಷಣೆಯನ್ನು ಜಾರಿಗೆ ತರುವುದಾಗಿ ಹೇಳುತ್ತಾ, ಇನ್ನೊಂದೆಡೆ ಕಾಯ್ದೆಯಲ್ಲಿ ಭೂಮಾಲಕರು ತಮ್ಮ ಜಮೀನುಗಳ ಬಹುಭಾಗವನ್ನು ಅವರ ಬಳಿಯೇ ಉಳಿಸಿಕೊಳ್ಳಲು ಅವಕಾಶ ನೀಡುವ ಪಾರು ಗುಂಡಿಗಳನ್ನು ತೋಡಿದ್ದರಿಂದ, ಹಾಗೂ ಉಳುಮೆ ಮಾಡುತ್ತಿರುವ ಗೇಣಿದಾರರನ್ನು ಒಕ್ಕಲೆಬ್ಬಿಸದಂತೆ ತಡೆಯಲು ಅಗತ್ಯ ಕ್ರಮವಹಿಸದೇ ಹೋದುದರಿಂದ, ಬಹುತೇಕ ನಿಜ ಉಳುವವರು ಜಮೀನುಗಳಿಂದ ಒಕ್ಕಲೆಬ್ಬಿಸಲ್ಪಟ್ಟು ಕೃಷಿಕೂಲಿಕಾರರ ಪಡೆಯಲ್ಲಿ ಸೇರಿಸಲ್ಪಟ್ಟರು ಮತ್ತು ಭೂಮಾಲಕರ ಕೈನಲ್ಲಿಯೇ ಬಹುತೇಕ ಜಮೀನು ಉಳಿಯುವಂತಾಯಿತು. ಇವರ ರಕ್ಷಣೆಗಾಗಿಯೇ ಗೇಣಿ ಪದ್ಧತಿಯನ್ನು ನಿಷೇಧಿಸಲಾಗಿತ್ತು. ಉಳುವವನನ್ನು ವಂಚಿಸಿದ ಆಳರಸರ ದುಷ್ಟತನದಿಂದಲೇ ಈ ದಿನ ದೇಶ ಹಾಗೂ ರಾಜ್ಯ ಗಂಭೀರವಾದ ಆರ್ಥಿಕ ಬಿಕ್ಕಟ್ಟಿಗೆ ಸಿಲುಕುವಂತಾಗಿದೆ. ದೇಶದ ಬಡತನ, ನಿರುದ್ಯೋಗ, ಲಿಂಗ ಹಾಗೂ ಜಾತಿ ತಾರತಮ್ಯ, ಮುಂತಾದ ಮೂಲಭೂತ ಸಮಸ್ಯೆಗಳು ಹಾಗೆಯೇ ಉಳಿದು ಬೆಳೆಯುವಂತಾಗಿದೆ.

ಉಳುವವನನ್ನು ಭೂ ಒಡೆಯನನ್ನಾಗಿಸುವ ನಿಜ ಉದ್ದೇಶ ಸಾಕಾರಗೊಂಡಿದ್ದರೇ, ರಾಜ್ಯ ಹಾಗೂ ದೇಶ, ಕೇರಳ ಹಾಗೂ ಪಶ್ಚಿಮ ಬಂಗಾಳದ ರೀತಿಯ ಸಾಮಾಜಿಕ, ಆರ್ಥಿಕ ಅಭಿವೃದ್ದಿಯನ್ನು ಸಾಧಿಸುತ್ತಿತ್ತು.

ಇದು, ಒಂದು ಕಡೆ ಗ್ರಾಮೀಣ ಪಟ್ಟಭದ್ರ ಭೂಮಾಲಕರ ದೌರ್ಜನ್ಯದಿಂದ ನಿಜ ಉಳುಮೆದಾರರು ಬಿಡುಗಡೆ ಗೊಂಡು, ಸ್ವಾತಂತ್ರ್ಯ, ಸ್ವಾವಲಂಬಿಯಾಗಿ ಬದುಕಲು ಮತ್ತು ಅವರ ತಲಾ ಆದಾಯದಲ್ಲಿ ಹೆಚ್ಚಳ ಹೊಂದಲು ಮತ್ತು ಆ ಮೂಲಕ ಅದು ರಾಜ್ಯದ ಸಮಗ್ರ ಅಭಿವೃದ್ದಿಗೆ ಕಾರಣವಾಗುತ್ತಿತ್ತು.

ಆದರೇ, ಅದು ರಾಜ್ಯದಾದ್ಯಂತ ಬಹುತೇಕ ಜಾರಿಯಾಗಲಿಲ್ಲ. ಆದಾಗಲೂ, ಭೂಮಿತಿಯನ್ನು ನಿರ್ಧರಿಸಿ ಮತ್ತು ರೈತರು, ಕೂಲಿಕಾರರು ಮತ್ತು ವ್ಯವಸಾಯದಲ್ಲಿ ತೊಡಗದವರು ಭೂಮಿ ಪಡೆಯುವುದನ್ನು ನಿಷೇಧಿಸಿ, ಆ ಮಟ್ಟಿಗೆ ಕರ್ನಾಟಕ ಭೂ ಸುಧಾರಣಾ ಕಾಯ್ದೆ-1961 ರೈತರ ಉದ್ಯೋಗ ಭದ್ರತೆಗೆ ಕ್ರಮವಹಿಸಿತ್ತು. ಇದರ ಭಾಗವಾಗಿಯೇ ರಾಜ್ಯ ಮತ್ತು ದೇಶ ಆಹಾರದ ಸ್ವಾವಲಂಬನೆ ಸಾಧಿಸಿತ್ತು. ಮಾತ್ರವಲ್ಲಾ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ಮಾಲು ಒದಗಿಸಿ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಬೆಳವಣಿಗೆಗೆ ನೆರವಾಗಿತ್ತು. ಇದು ದಲಿತರು, ಮಹಿಳೆಯರು, ಹಿಂದುಳಿದ ಹಾಗೂ ಮುಂದುವರೆದ ಜಾತಿಗಳ ಮತ್ತು ಅಲ್ಪಸಂಖ್ಯಾತ ಸಮುದಾಯಗಳ, ಗ್ರಾಮೀಣ ಹಾಗೂ ಅರೆನಗರಗಳ ಬಡವರಿಗೆ ಕೃಷಿಯಲ್ಲಿ ತೊಡಗಲು ಮತ್ತು ಯಾವಾಗಲಾದರೂ ಕೃಷಿ ಭೂಮಿಯನ್ನು ಹೊಂದ ಬಹುದೆಂಬ ಆಶಯವನ್ನು ಉಳಿಸಿತ್ತು.

ಇದೀಗ ಸರಕಾರಗಳ ಈಚೆಗಿನ ಮತ್ತು ಈಗಿನ ತಿದ್ದುಪಡಿಗಳು ಈ ಎಲ್ಲ ಪ್ರಗತಿಪರ ಅಂಶಗಳನ್ನು ನಾಶಪಡಿಸುತ್ತಾ ಒಟ್ಟಾರೇ ಕರ್ನಾಟಕ ಭೂ ಸುಧಾರಣಾ ಕಾಯ್ದೆ-1961 ನ್ನು ಬುಡಮೇಲು ಮಾಡಿವೆ.

‘ಬಾಯ್ಕಾಟ್ ಚೀನಾ ಗೂಡ್ಸ್’ ಆಂದೋಲನದ ಮರ್ಮವೇನು?........

ಪುಟ 6 ರಿಂದ

ನೋಡಬಹುದು.

* ಭಾರತದ ಜನರ ಬಳಕೆ, ಕೈಗಾರಿಕೆ ಮತ್ತು ರಫ್ತಿಗೆ ಸಹ ಚೀನಾದಿಂದ ಆಮದಿನ ಮೇಲೆ ಅವಲಂಬಿತವಾಗಿದೆ. 8 ಉತ್ಪನ್ನಗಳ ಕ್ಷೇತ್ರಗಳಲ್ಲಿ (ವಾಹನ ಬಿಡಿಭಾಗ, ಔಷಧಿ, ಟಿವಿ ಪರದೆಗಳು, ಕೀಟನಾಶಕಗಳು ಇತ್ಯಾದಿ) ಭಾರತದ ಆಮದಿನ ಪ್ರಮಾಣ ಶೇ> 50 ಕ್ಕಿಂತ ಹೆಚ್ಚಿದೆ. 14 ಉತ್ಪನ್ನಗಳ ಕ್ಷೇತ್ರಗಳಲ್ಲಿ ಶೇ. 40ಕ್ಕಿಂತ ಹೆಚ್ಚಿದೆ. ಪ್ರತಿ ಕ್ಷೇತ್ರದಲ್ಲಿನ ಆಮದಿನ ಪ್ರಮಾಣದ ವಿವರಗಳಿಗೆ ಚಾರ್ಟ್–3ನ್ನು ನೋಡಬಹುದು.

* ಓಲಾ, ಪೇಟಿಎಂ, ಫ್ಲಿಪ್ ಕಾರ್ಟ್ ಮುಂತಾದ 100 ಕೋಟಿ ಡಾಲರ್ ಮಾರುಕಟ್ಟೆ ಮೌಲ್ಯ ಹೊಂದಿರುವ ಹಲವು ಸಫಲ ನವೋದ್ಯಮಗಳಲ್ಲಿ ಚೀನಾದ ಹೂಡಿಕೆ ಸಾಕಷ್ಟಿದೆ. ಇಂತಹ ಪ್ರಮುಖ ಕಂಪನಿಗಳಲ್ಲಿ ಚಿನಾದ ಹೂಡಿಕೆಗಳಿಗೆ ವಿವರಗಳಿಗೆ ಚಾರ್ಟ್–4ನ್ನು ನೋಡಬಹುದು.


ಸ್ವಾವಲಂಬನೆಯನ್ನು ಸಾಧಿಸುವುದು ಹೇಗೆ?

ನಾವು ಹೋಲ್ ಸೇಲಾಗಿ ಎಲ್ಲ ಚೀನೀ ಕಂಪೆನಿಗಳನ್ನು ಬ್ಯಾನ್ ಮಾಡಿದ್ವಿ ಅಂತನೇ ಇಟ್ಕೊಳ್ಳೋಣ. ಆದರೆ ಇವತ್ತಿನ ಕಾರ್ಪೊರೇಟ್ ಜಗತ್ತಿನಲ್ಲಿ ಚೀನಾವನ್ನು ಹೊರಗಿಡುವುದು ಅಸಾಧ್ಯ. ಚೀನಾದ ಎಷ್ಟೋ ಸಂಸ್ಥೆಗಳು ಚೀನಾದ ಹೊರಗೆ ತಮ್ಮ ಮುಖ್ಯ ಕಚೇರಿಗಳನ್ನು ಇಟ್ಟುಕೊಂಡಿವೆ. ಸಿಂಗಪುರ, ಇಂಡೋನೇಷಿಯಾದಂಥ ದೇಶಗಳಲ್ಲಿ ಚೀನೀಯರು ತಮ್ಮ ಸಂಸ್ಥೆಗಳನ್ನು ಆರಂಭಿಸಿ, ಜಗತ್ತಿನಾದ್ಯಂತ ವ್ಯವಹಾರ ನಡೆಸುತ್ತಾರೆ. ಹೆಸರಿಗೆ ಅವು ಆಯಾ ದೇಶದ ಸಂಸ್ಥೆಗಳು, ಆದರೆ ನಡೆಸೋರು ಚೀನೀಯರು. ಸಿಂಗಪುರದ ಎರಡನೇ ಅತಿದೊಡ್ಡ ಸಂಸ್ಥೆ ಓವರ್ ಸೀಸ್ ಚೈನೀ ಬ್ಯಾಂಕ್. ಈ ಔಅಃಅಯ ಯೂನಿಟ್ ಆಗಿರುವ ಸಿಂಗಾಪುರ್ ಬ್ಯಾಂಕ್ ಭಾರತದ ಎಡೆಲ್ವೀಸ್ ಸಂಸ್ಥೆಯ ಜತೆ ವ್ಯವಹಾರ ನಡೆಸುತ್ತಿದೆ. ಎಡಲ್ ವೀಸ್ ಸಂಸ್ಥೆಯ ಎನ್.ಆರ್.ಐ ಗ್ರಾಹಕರಿಗೆ ಜಗತ್ತಿನಾದ್ಯಂತ ಬಂಡವಾಳ ಕೊಡಿಸುವ ಕೆಲಸವನ್ನು OCBC ಮಾಡುತ್ತದೆ. ಅದೇ ರೀತಿ ಬ್ಯಾಂಕ್ ಆಫ್ ಸಿಂಗಾಪುರದ ಗ್ರಾಹಕರಿಗೆ ಎಡೆಲ್ವೀಸ್ ಸೇವೆ ನೀಡುತ್ತದೆ. OCBC ಭಾರತದಲ್ಲಿ ಒಂದು ಸಣ್ಣ ಹೆಜ್ಜೆಯನ್ನು ಇಟ್ಟಿದೆ. ಅದು ಎಲ್ಲಿಗೆ ಹೋಗಿ ನಿಲ್ಲುತ್ತದೋ ಗೊತ್ತಿಲ್ಲ. ಅಧಿಕೃತವಾಗಿ ಇದು ಸಿಂಗಾಪುರದ ಸಂಸ್ಥೆ. ಆದರೆ ಇದನ್ನು ನಡೆಸುವವರು ಚೀನೀಯರು. ಇದನ್ನು ಹೇಗೆ ಬ್ಯಾನ್ ಮಾಡುವುದು?

ಏನೇ ಕಿತ್ತಾಟಗಳು ಇದ್ದರೂ ಅಮೆರಿಕದ ನೂರಾರು ಮಲ್ಟಿನ್ಯಾಷನಲ್ ಗಳು ಚೀನಾದಲ್ಲಿ ತಮ್ಮ ಅಂಗಡಿ ತೆರೆದು ಕುಳಿತಿವೆ. ಅಮೆರಿಕದ ಪ್ರತಿಷ್ಠಿತ ಆಪಲ್ ಫೋನ್ ಗಳು ಚೀನಾದಲ್ಲೂ ತಯಾರಾಗುತ್ತವೆ. ಅವೂ ಕೂಡ ಭಾರತದ ಮಾರುಕಟ್ಟೆಯೊಳಗೆ ಓಡುತ್ತವೆ. ಕಳೆದ ವರ್ಷವಷ್ಟೆ ದಕ್ಷಿಣ ಕೊರಿಯಾದ ಸ್ಯಾಮ್ಸಂಗ್ ಕಂಪೆನಿ ಚೀನಾದಲ್ಲಿದ್ದ ತನ್ನ ಸ್ಮಾರ್ಟ್ ಫೋನ್ ತಯಾರಿಕಾ ಘಟಕವನ್ನು ಮುಚ್ಚಿತು. ಅಲ್ಲಿಯವರೆಗೆ ಮೇಡ್ ಇನ್ ಚೈನಾ ಮೊಹರು ಇದ್ದ ಸ್ಯಾಮ್ ಸಂಗ್ ಸ್ಮಾರ್ಟ್ ಫೋನ್ ಗಳು ಇಂಡಿಯಾದಲ್ಲೂ ಓಡಾಡಿದ್ದವು. ಇದನ್ನೆಲ್ಲ ಹೇಗೆ ತಡೆಯಲು ಸಾಧ್ಯ?

ಭಾರತ (ಮಾತ್ರವಲ್ಲ ಇಡೀ ಜಗತ್ತೇ) ಅತಿಹೆಚ್ಚು ಚೀನಾಗೆ ಅವಲಂಬಿತವಾಗಿರುವುದು ಯಾಕೆಂದರೆ ಅದು ಸಸ್ತಾ ಮಾಲುಗಳನ್ನು ಕೊಡುತ್ತದೆ. ಕೊಡುವ ಉತ್ಪಾದನಾ ಸಾಮರ್ಥ್ಯವನ್ನು ಮತ್ತು ಅದಕ್ಕೆ ಬೇಕಾದ ವಿಜ್ಞಾನ–ತಂತ್ರಜ್ಞಾನವನ್ನು ಬೆಳೆಸಿಕೊಂಡಿದೆ. ಎಲ್ಲಾ ಕ್ಷೇತ್ರಗಳನ್ನು ಆಪಲ್ ಫೋನ್ ನಲ್ಲಿರುವ ಫೀಚರ್ ಗಳನ್ನೇ ಅರ್ಧ ಬೆಲೆಗೆ ಕ್ಸಿಯೋಮಿ ತಯಾರಿಸಿ ಮಾರುಕಟ್ಟೆಗೆ ಬಿಡುತ್ತದೆ. ಸೋನಿ ಅಥವಾ ಸ್ಯಾಮ್ ಸಂಗ್ ಸ್ಮಾರ್ಟ್ ಟೀವಿಗಳಿ ಗೆ ಮೀ ಟಿವಿಯನ್ನು ಹೋಲಿಸಿ ನೋಡಿ. ಸ್ಯಾಮ್ ಸಂಗ್, ಸೋನಿ ಕೊಡುವ ಎಲ್ಲ ಸೌಲಭ್ಯಗಳನ್ನು ಕೊಟ್ಟೂ ಅರ್ಧಕ್ಕರ್ಧ ಬೆಲೆ ನಿಗದಿಪಡಿಸುತ್ತದೆ. ಈ ಕಾರಣಕ್ಕೇ ಇವತ್ತು ರೆಡ್ ಮೀ, ಓಪ್ಪೋ, ವಿವೋ ಸ್ಮಾರ್ಟ್ ಫೋನ್ ಗಳು, ಮಿ ಸ್ಮಾರ್ಟ್ ಟೀವಿಗಳು ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿರುವುದು. ಈಗ ಹಲವು ಕ್ಷೇತ್ರಗಳಲ್ಲಿ (ಉದಾ: 5ಜಿ ಮೊಬೈಲ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ) ನಿರ್ಣಾಯಕ ಅಗ್ರಸ್ಥಾನ ಪಡೆದಿದೆ. ಅಮೆರಿಕ–ಯುರೋಪುಗಳ ಏಕಸ್ವಾಮ್ಯವನ್ನು ಹಲವು ಕ್ಷೇತ್ರಗಳಲ್ಲಿ ಮುರಿದಿದೆ. ಇದು ದೃಢವಾದ ದೇಶಪರ ಜನಪರ ಸಾಮ್ರಾಜ್ಯಶಾಹಿ–ವಿರೋಧಿ ಧೋರಣೆ ಮತ್ತು ಜಾಗತಿಕ ಪರಿಸ್ಥಿತಿಯ ಅರಿವು ಇರುವ ವಾಸ್ತವತೆ ಆಧಾರಿತವಾದ ಹಲವು ದಶಕಗಳ ದೀರ್ಘವಾದ ನಿರಂತರ ಸಮಗ್ರ ಸ್ವಾವಲಂಬನೆಯ ನೀತಿ–ಆಧಾರಿತ ಯೋಜನೆಗಳಿಂದಾಗಿ ಸಾಧ್ಯವಾಗಿರುವುದು.

HIGH DEPENDENCE The chart depicts the imported products for which India depends on China the most. For instance, 76.3% of all antibiotics imported by India are from China



ಮೋದಿ ಸರಕಾರ, ಚಳುವಳಿಗಾರರ ‘ಆತ್ಮ ನಿರ್ಭರ್’ ಪ್ರಾಮಾಣಿಕವೇ?

‘ಆತ್ಮ ನಿರ್ಭರ್’ ಅಂದರೆ ಏನು ಅಂತ ಮೋದಿ ಸರಕಾರವಾಗಲಿ, ಈಗ ‘ಬಾಯ್ಕಾಟ್ ಚೀನಾ ಗೂಡ್ಸ್’ ಚಳುವಳಿಗಾರರಾಗಲಿ ವ್ಯಾಖ್ಯಾನ ಮಾಡೇ ಇಲ್ಲ. ಅದು ಸ್ವಾವಲಂಬನೆ ಎಂದಿಟ್ಟುಕೊಂಡರೆ, ಅದನ್ನು ಬರಿಯ ಚೀನಾದ ವಸ್ತುಗಳನ್ನು ಬಾಯ್ಕಾಟ್ ಮಾಡುವುದರಿಂದ ಅಥವಾ ಘೋಷಣೆಗಳ ಬೆದರಿಕೆಗಳಿಂದ ಸಾಧಿಸಲಾಗುವುದಿಲ್ಲ. ಇಂತಹ ‘ಚಳುವಳಿಗಾರರು’ ತಯಾರಿಸಿದ ಚೀನಾ ಮೂಲದ ಆಪ್ ಗಳನ್ನು ತೆಗೆದು ಹಾಕುವ ‘ಮಿತ್ರೋಂ’ ಮತ್ತು ‘ರಿಮೂವ್ ಚೀನಾ ಆಪ್ಸ್’ಗಳನ್ನು, ಅದು ತನ್ನ ನಿಯಮಾವಳಿಗಳನ್ನು ಉಲ್ಲಂಘಿಸಿದೆ ಎಂದು ‘ಗೂಗಲ್ ಪ್ಲೇ ಸ್ಟೋರ್’ ಕಿತ್ತು ಹಾಕಿತು, ಅದಕ್ಕೆ ಈ ಚಳುವಳಿಗಾರರು ಪ್ರತಿಭಟನೆಯನ್ನೂ ಮಾಡಲಿಲ್ಲ ಎಂಬುದು ಇಂತಹ ಚಳುವಳಿಗಳ ಮಿತಿಯನ್ನು ಸೂಚಿಸುತ್ತದೆ.

TOP PARTNER Imports from China accounted for over 14% of India's total imports in FY20 (until Feb.), the highest share among all the nations. Exports to China accounted for over 5% of India's exports, the third highest

Top 3 imports		Top 3 exports	
China	14.09%	U.S.	16.93%
U.S.	7.58%	UAE	9.32%
UAE	6.39%	China	5.33%

ಅಮೆರಿಕ, ಯುರೋಪಿನ ಪ್ರಬಲ ದೇಶಗಳ ಮೇಲೆ ಸಹ ಹಲವು ಕ್ಷೇತ್ರಗಳಲ್ಲಿ ಭಾರತ ವಿಪರೀತವಾಗಿ ಅವಲಂಬಿತವಾಗಿದ್ದೇವೆ. ಆ ಕ್ಷೇತ್ರಗಳಲ್ಲೂ ವಸ್ತು–ಸೇವೆಗಳ ಬಾಯ್ಕಾಟ್ ಪರಿಹಾರವಲ್ಲ. ಸ್ವಾವಲಂಬನೆ ಸಾಧಿಸಲು ವಾಸ್ತವತೆ ಆಧಾರಿತವಾದ ದೀರ್ಘವಾದ ನಿರಂತರ ಸಮಗ್ರ ಸ್ವಾವಲಂಬನೆಯ ನೀತಿ–ಆಧಾರಿತ ಯೋಜನೆಗಳು ಮತ್ತು ಅದನ್ನು ಜಾರಿ ಮಾಡಲು ಬೇಕಾದ ರಾಜಕೀಯ ಇಚ್ಛೆ ಬೇಕು. ಭಾರತ 1980ರ ದಶಕದ ವರೆಗೆ ಅಷ್ಟೇನೂ ದೃಢವಲ್ಲದಿದ್ದರೂ ಸ್ವಾವಲಂಬನೆಯ ಸ್ಥೂಲ ನೀತಿ–ಯೋಜನೆಗಳನ್ನಾದರೂ ಅನುಸರಿಸಿತ್ತು. ಅದರಿಂದಾಗಿ 1980ರ ವರೆಗೆ ಟೆಲಿಕಾಂ, ಕಬ್ಬಿಣ–ಉಕ್ಕು ಮುಂತಾದ ಹಲವು ಕೈಗಾರಿಕಾ ಕ್ಷೇತ್ರಗಳಲ್ಲಿ ಸ್ವಾವಲಂಬನೆಯಲ್ಲೂ ಒಟ್ಟು ಉತ್ಪಾದನೆಯಲ್ಲೂ ಚೀನಾಕ್ಕಿಂತ ಮುಂದಿತ್ತು.


1990ರ ಜಾಗತೀಕರಣ, ಖಾಸಗೀಕರಣ, ಉದಾರಿಕರಣದ ನೀತಿಗಳನ್ನು ಹಣಕಾಸು ಬಂಡವಾಳದ ತ್ರಿಮೂರ್ತಿಗಳ ಕೈ ತಿರುಚುವಿಕೆಯಿಂದ (ವಿಶ್ವಬ್ಯಾಂಕ್, ಐ.ಎಂ.ಎಫ್, ಡಬ್ಲ್ಯೂ.ಟಿ.ಒ) ನಮ್ಮ ದೇಶದ ಆಳುವವರು ಒಪ್ಪಿಕೊಂಡ ಮೇಲೆ ಸ್ವಾವಲಂಬನೆಗೆ ತಿಲಾಂಜಲಿ ಕೊಡಲಾಗಿದೆ. ಬಿಜೆಪಿ ಮತ್ತು ಸಂಘ ಪರಿವಾರ (ಅದರ ಕೆಲವು ಸಂಘಟನೆಗಳ ಆಗೊಮ್ಮೆ ಈಗೊಮ್ಮೆ ನಡೆಸಿದ ‘ಪ್ರಹಸನ’ಗಳನ್ನು ಬಿಟ್ಟರೆ) ಎಂದೂ ಈ ನೀತಿಗಳನ್ನು ದೃಢವಾಗಿ ಸಮಗ್ರವಾಗಿ ನಿರಂತರವಾಗಿ ವಿರೋಧಿಸಿದ್ದಿಲ್ಲ. 1980ರ ವರೆಗೆ ಈ ಸ್ವಾವಲಂಬನೆ ನೀತಿಗಳ ಆಧಾರ ಸ್ತಂಭಗಳಾಗಿದ್ದ ಸಾರ್ವಜನಿಕ ವಲಯದಲ್ಲಿ ಹೂಡಿಕೆಗೆ ಆದ್ಯತೆ, ಮತ್ತು ವಿದೇಶಿ/ಖಾಸಗಿ ಬಂಡವಾಳದ ಮೇಲೆ ನಿರ್ಬಂಧಗಳನ್ನು ಬಲವಾಗಿ ವಿರೋಧಿಸುತ್ತಿದ್ದವು. 1990 ರಿಂದೀಚೆಗೆ ಸಹ ವಿರೋಧ ಪಕ್ಷದಲ್ಲಿ ಆಗೊಮ್ಮೆ ಈಗೊಮ್ಮೆ ಅವಕಾಶವಾದಿಯಾಗಿ ವಿರೋಧಿಸಿದ್ದು ಬಿಟ್ಟರೆ, ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಾಗಲೆಲ್ಲ ಜಾಗತೀಕರಣ, ಖಾಸಗೀಕರಣ, ಉದಾರಿಕರಣದ ನೀತಿಗಳನ್ನು ಕಾಂಗ್ರೆಸ್ಸಿಗಿಂತ ಇನ್ನಷ್ಟು ಉಗ್ರವಾಗಿ ಜಾರಿ ಮಾಡಿವೆ. 2014ರ ನಂತರವಂತೂ ಈ ನೀತಿಗಳನ್ನು ವೇಗವಾಗಿ ಜಾರಿ ಮಾಡುತ್ತಿವೆ. ಕೊರೊನಾ–ಲಾಕ್ ಡೌನ್ ಅವಧಿಯಲ್ಲಂತೂ ದಶಕಗಳ ಕಾಲ ಜನವಿರೋಧದಿಂದಾಗಿ ತಡೆ ಹಿಡಿದಿದ್ದ ಹಲವು ಕ್ರಮಗಳನ್ನು ತರಾತುರಿಯಲ್ಲಿ ಸುಗ್ರೀವಾಜ್ಞೆ ಮೂಲಕ ಜಾರಿ ಮಾಡುತ್ತಿದೆ.

ಜಾಗತೀಕರಣ, ಖಾಸಗೀಕರಣ, ಉದಾರಿಕರಣದ ವಿರುದ್ಧ ದೊಡ್ಡ ಪ್ರಮಾಣದ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿದ ಪ್ರಗತಿಪರರು, ಎಡಪಂಥೀಯರು ವಿಶೇಷವಾಗಿ ಕಮ್ಯುನಿಸ್ಟರನ್ನು ಹೀಗಳೆಯುತ್ತಾ ಚೀನಾ ವಿರೋಧಿ ಘೋಷಣೆ ಕೂಗುತ್ತಿದ್ದಾರೆ. ಈಗ ಬಾಯ್ ಕಾಟ್ ಚೀನಾ ನಡೀತಾ ಇದೆಯಲ್ಲ, ಅದು ಯಶಸ್ವಿಯಾಗಬೇಕು ಅಂದರೆ ಬರೀ ಚೀನಾ ಹೆಡ್ ಕ್ವಾರ್ಟರ್ಸ್ ಆಗಿರುವ ಕಂಪೆನಿಗಳನ್ನು ಬಹಿಷ್ಕರಿಸಿದರೆ ಆಗೋದಿಲ್ಲ. ಮೇಕ್ ಇನ್ ಇಂಡಿಯಾದಡಿ ಇಂಡಿಯಾದಲ್ಲೇ ಇರುವ ಚೀನಾ ಸೇರಿದಂತೆ ಎಲ್ಲಾ ಕಂಪನಿಗಳನ್ನು ಬಹಿಷ್ಕರಿಸಬೇಕಾಗುತ್ತದೆ. ಮೋದಿ ಸರ್ಕಾರ FDIಸರಳೀಕರಣಗೊಳಿಸಿದ ನಂತರ ಭಾರತದ ಯಾವ ಯಾವ ಸ್ಟಾರ್ಟ್ ಅಪ್ ಗಳಲ್ಲಿ ವಿದೇಶಿ ಸಂಸ್ಥೆಗಳು ಬಂಡವಾಳ ಹೂಡಿವೆಯೋ ಅವೆಲ್ಲವನ್ನೂ ಬಹಿಷ್ಕರಿಸಬೇಕಾಗುತ್ತದೆ. ಅಮೆರಿಕ, ಜರ್ಮನಿ, ಜಪಾನ್, ಕೊರಿಯಾ ಯಾವುದೇ ದೇಶದ ಮಲ್ಟಿನ್ಯಾಷನಲ್ ಆಗಿರಲಿ, ಅದರಲ್ಲಿ ಚೀನಾ ಹೂಡಿಕೆ ಇದ್ದರೆ ಅವುಗಳನ್ನು ಬಹಿಷ್ಕರಿಸಬೇಕಾಗುತ್ತದೆ. ಚೀನಾದ ಬ್ಯಾಂಕುಗಳಿಂದ ಸಾಲ ತೆಗೆದುಕೊಂಡ ಸಂಸ್ಥೆಗಳನ್ನೂ ಬಹಿಷ್ಕರಿಸಬೇಕಾಗುತ್ತದೆ.

ಮಾತ್ರವಲ್ಲ, ಇಂಡಿಯಾಗೆ ಬಂದು ಇಂಡಿಯಾದಲ್ಲೇ ತಯಾರಿಸಿ ಎಂದು ರೆಡ್ ಕಾರ್ಪೆಟ್ ಹಾಸಿದವರನ್ನೂ ಬಹಿಷ್ಕರಿಸಬೇಕಾಗುತ್ತದೆ. ಅದೇ ವೇಳೆಗೆ ಆ ವಿದೇಶಿ ಕಂಪನಿಗಳು ನೀಡುತ್ತಿದ್ದ ದರಕ್ಕೆ ಅಷ್ಟೇ ಗುಣಮಟ್ಟದ ಉತ್ಪನ್ನಗಳನ್ನು ನೀಡುವ ವಾಗ್ದಾನವನ್ನೂ ಬಹಿಷ್ಕಾರದ ಹಿಂದೆ ಇರುವವರು ನೀಡಬೇಕಾಗುತ್ತದೆ. ಇದಕ್ಕೆ ಈ ‘ಬಾಯ್ಕಾಟ್ ಚೀನಾ ಗೂಡ್ಸ್’ ಚಳುವಳಿಗಾರರು ಸಿದ್ಧರಿದ್ದಾರಾ? ಇದೆಲ್ಲ ಸಾಧ್ಯವಾ? ಇವೆಲ್ಲವನ್ನು ಮಾಡಬೇಕಾದರೆ ಹಣಕಾಸು ಬಂಡವಾಳದ ತ್ರಿಮೂರ್ತಿಗಳ ಹಲವು ಒಪ್ಪಂದಗಳನ್ನು ಮುರಿಯಬೇಕಾಗುತ್ತದೆ. ಅಥವಾ ಅದರಿಂದ ಹೊರ ಬರಬೇಕಾಗುತ್ತದೆ. ಆ ಒಪ್ಪಂದಗಳು ಅವಕಾಶ ಕೊಡುವ ತುರ್ತು ಪರಿಸ್ಥಿತಿಯಲ್ಲಿ ಸಾರ್ವಜನಿಕ ಹಿತಾಸಕ್ತಿಗಾಗಿ ಕ್ರಮಗಳನ್ನು ಕೂಡಾ ತೆಗೆದುಕೊಳ್ಳುವ 56 ಇಂಚು ಛಾತಿ ಮೋದಿ ಸರಕಾರ ತೋರಿಸಿಲ್ಲ. ಟ್ರಂಪ್ ಟ್ವೀಟ್ ಬೆದರಿಕೆಗೆ ಹೆದರಿ ದಿನ ಬೆಳಗಾಗುವದರ ಒಳಗೆ ಮಂಡಿಯೂರಿದ ಸರಕಾರದಿಂದ ಇಂತಹ ರಾಜಕೀಯ ಇಚ್ಛೆ ನಿರೀಕ್ಷಿಸಬಹುದಾ? ಕೆಲವು ಮೊದಲ ಹಂತದಲ್ಲಿದ್ದ ಚೀನಾ ಹೂಡಿಕೆಯ ಪ್ರಾಜೆಕ್ಟುಗಳನ್ನು ರದ್ದು ಮಾಡುವ ‘ಘೋಷಣೆ’ ಬಿಟ್ಟರೆ ವಾಸ್ತವವಾಗಿ ಯಾವ ಕ್ರಮವನ್ನು ಕೈಗೊಂಡಿಲ್ಲ.

ಈ ಎಲ್ಲಾ ಬಹಿಷ್ಕಾರ, ಆಂದೋಲನಗಳು ಸಂಘ ಪರಿವಾರ ಮತ್ತು ಅದರ ಸರಕಾರದ ವೈಫಲ್ಯಗಳನ್ನು ಮುಚ್ಚಿಕೊಳ್ಳಲು, ಕೇವಲ ರಾಷ್ಟ್ರೀಯ ಭಾವನೆಗಳ ಮೇಲಿನ ನಾಟಕವೇ ಹೊರತು ವಾಸ್ತವ ಅಲ್ಲ. ಈ ಆಂದೋಲನವು ಪರಿಣಾಮಕಾರಿಯೂ ಆಗಲ್ಲ, ಅದು ಭಾರತದ ಹಿತಾಸಕ್ತಿಗೆ ಪೂರಕವೂ ಅಲ್ಲ, ಕಾರ್ಯಸಾಧ್ಯವೂ ಅಲ್ಲ. ಬರಿಯ ನಾಟಕವಷ್ಟೇ.

START-UP STORY Many Indian unicorns (start-ups with valuation > $1 billion) have a Chinese investor. The chart depicts the estimated investment by Chinese companies in select start-ups



ಶತಮಾನೋತ್ಸವ ಲೇಖನ ಮಾಲೆ-32

ಸುಪ್ರಸಿದ್ಧ ತೆಲಂಗಾಣ ಜನರ ಸಶಸ್ತ್ರ ಹೋರಾಟ-2

ತೆಲಂಗಾಣ ಪ್ರದೇಶದಲ್ಲಿ, ನಿಜಾಮ್-ವಿರೋಧಿ ಹೋರಾಟವು ಒಂದು ಜನತಾ ಚಳುವಳಿಯಾಗಿ ಬಹುವ್ಯಾಪಕವಾಗಿ ಬೆಳೆದು ಪಾಳೇಗಾರಿ-ವಿರೋಧಿ ಕಾರ್ಷಿಕ ಬಂಡಾಯವಾಗಿ ವಿಕಾಸಗೊಂಡಿತು. ಭೂಮಿಯಿಂದ ರೈತರ ಒಕ್ಕಲೆಬ್ಬಿಸುವಿಕೆಯನ್ನು ನಿಲ್ಲಿಸಬೇಕೆಂಬ ಬೇಡಿಕೆಯಿಂದ ಪ್ರಾರಂಭವಾದ ಚಳುವಳಿಯು ಉಳುವವನಗೇ ಭೂಮಿ ಎಂಬ ಬೇಡಿಕೆಯವರೆಗೆ ಪ್ರಗತಿ ಹೊಂದಿತು. ನಮ್ಮ ದೇಶದ ರೈತ ಚಳುವಳಿಯ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ 'ಉಳುವವನಗೇ ಭೂಮಿ' ಎಂಬ ಘೋಷಣೆ ನೀಡಲಾಯಿತು. ಕಾಡ್ಗಿಚ್ಚಿನಂತೆ ವ್ಯಾಪಿಸಿದ ಈ ಬೇಡಿಕೆಯು ಚಳುವಳಿಯ ವ್ಯಾಪ್ತಿಯನ್ನು ಹೆಚ್ಚಿಸಿತು. 1946-47ರ ಈ ಹಂತದ ಅವಧಿಯಲ್ಲಿ, ನಿಜಾಮ ಮತ್ತು ಅವರ ಪಾಳೇಗಾರಿ ಅಧಿಕಾರಿಗಳು 'ಹಿಂದೂಗಳ' ವಿರುದ್ಧ 'ಮುಸ್ಲಿಂ' ಜನರನ್ನು ಛೂಬಿಡಲು ಯತ್ನಿಸಿದರು. ಆದರೆ ಕಮ್ಯುನಿಸ್ಟ್ ಪಕ್ಷದ ಪ್ರಯತ್ನಗಳಿಂದಾಗಿ, ಮುಸ್ಲಿಂ ರೈತರು, ಗ್ರಾಮಗಳ ಕುಶಲಕರ್ಮಿಗಳು, ತೆಲಂಗಾಣ ರೈತರ ಹೋರಾಟದ ಜತೆ ನಿಂತರು.



ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ತೆಲಂಗಾಣ ರೈತ ಬಂಡಾಯವು ನಿಜಾಮನ ಆಳ್ವಿಕೆಯ ತಳಪಾಯವನ್ನೇ ಅಲುಗಾಡಿಸಿತು. ತನ್ನ ರಾಜ್ಯದ ಮೇಲೆ ತನ್ನ ಅಧಿಪತ್ಯವನ್ನು ಮರುಸ್ಥಾಪಿಸುವ ಸಲುವಾಗಿ, ನಿಜಾಮನು ಭಾರಿ ಪ್ರಮಾಣದ ಭಯೋತ್ಪಾದನೆಯಲ್ಲಿ ತೊಡಗಿದನು. ಸ್ವತಂತ್ರ ಭಾರತದ ಹೊಸ ಸರ್ಕಾರವು ನಿಜಾಮನೊಂದಿಗೆ ನಿಲುಗಡೆ ಒಪ್ಪಂದ ಮಾಡಿಕೊಂಡಿತು ಮತ್ತು ನಿಜಾಮನ ಸರ್ಕಾರಕ್ಕೆ ಮದ್ದು ಗುಂಡುಗಳನ್ನು ಪೂರೈಸಿತು. ಸಶಸ್ತ್ರ ಗಲಭೆಕೋರರಾದ 'ರಜಾಕರ'ರನ್ನು ಸಂಘಟಿಸಲಾಯಿತು ಮತ್ತು ಸರ್ಕಾರದ ಬೆಂಬಲದೊಂದಿಗೆ ಹಳ್ಳಿಗರ ಮೇಲೆ ಹರಿಬಿಡಲಾಯಿತು. ಲೂಟಿ, ದೊಂಬಿ, ಕಿರುಕುಳ, ಕೊಲೆ ಮತ್ತು ಅತ್ಯಾಚಾರಗಳು ವ್ಯಾಪಕವಾದವು. ಈ ಭೀಕರ ದಬ್ಬಾಳಿಕೆಯ ವಿರುದ್ಧ, ಜನತೆ ತಮ್ಮಲ್ಲಿದ್ದ ಏನೆಲ್ಲಾ ಆಯುಧಗಳಿದ್ದವೋ ಅವುಗಳನ್ನೆಲ್ಲಾ ಬಳಸಿ ತಮ್ಮ ರಕ್ಷಣೆ ಮಾಡಿಕೊಂಡರು ಮತ್ತು ಹಿಮ್ಮೆಟ್ಟಿಸಿದರು. ಜನರ ರಕ್ಷಣೆಗಾಗಿ, ಕಮ್ಯುನಿಸ್ಟ್ ಪಕ್ಷವು ಸಶಸ್ತ್ರ ಗೆರಿಲ್ಲಾ ಪಡೆಗಳನ್ನು ಸಂಘಟಿಸಿ ಕ್ರಮಬದ್ಧವಾದ ತರಬೇತಿ ನೀಡಿತು.

1947ರ ಮೊದಲ ನಾಲ್ಕು ತಿಂಗಳ ಅವಧಿಯಲ್ಲಿ, ಹರಿದುಹಂಚಿಹೋಗಿದ್ದ ಘಟಕಗಳನ್ನು ಮತ್ತೆ ಒಗ್ಗೂಡಿಸಲು ಪಕ್ಷವು ತೀವ್ರ ಗಮನ ನೀಡಿತು. ಈ ಹಿನ್ನೆಲೆಯಲ್ಲಿ, ಸ್ವತಂತ್ರ ಭಾರತವನ್ನು ಸೇರಲು ನಿಜಾಮನ ನಿರಾಕರಣೆಯು, ವ್ಯಾಪಕ ಜನಾಕ್ರೋಶಕ್ಕೆ ಕಾರಣವಾಯಿತು ಮತ್ತು 'ವಿಶಾಲಾಂಧ್ರದಲ್ಲಿ ಜನತಾ ಆಳ್ವಿಕೆ' ಎಂಬ ಪಕ್ಷದ ಘೋಷಣೆಯು ಜನಜನಿತವಾಯಿತು. ನಿಜಾಮನ ದಾಳಿಗೊಳಗಾಗಿದ್ದ ಕಾರ್ಯಕರ್ತರು ಮತ್ತು ಜನರಿಗೆ ಆಂಧ್ರ ಘಟಕವು ಸೂರು ಮತ್ತು ಸಹಾಯ ನೀಡುವುದರೊಂದಿಗೆ ಆಂಧ್ರದ ಕರಾವಳಿ ಜಿಲ್ಲೆಗಳು ತೆಲಂಗಾಣ ಚಳುವಳಿಯ ಹಿತ್ತಲಾದವು. ಆಂಧ್ರ ಪ್ರದೇಶದಲ್ಲಿದ್ದ ಕಾಂಗ್ರೆಸ್ ಸರ್ಕಾರವು, ಆ ಪ್ರದೇಶದಲ್ಲಿ ಮತ್ತು ತೆಲಂಗಾಣದಲ್ಲಿ ರೈತರ ಹೋರಾಟಕ್ಕೆ ಬೆಂಬಲ ನೀಡಿದ್ದಕ್ಕಾಗಿ, 1947ರ ಮೊದಲಾರ್ಧದಲ್ಲಿ ಪಕ್ಷದ ಮೇಲೆ ದಾಳಿ ಮಾಡಿತು. ಸ್ವಾತಂತ್ರ್ಯ ಬಂದಮೇಲೆ ದೊರೆತಿದ್ದ ಅಲ್ಪಕಾಲದ ನ್ಯಾಯಬದ್ಧತೆಯ ನಂತರ, ಪಕ್ಷವು ಮತ್ತೆ ನಿಷೇಧಕ್ಕೊಳಗಾಯಿತು.

ತೆಲಂಗಾಣ ಪ್ರದೇಶದಲ್ಲಿ, ನಿಜಾಮ್-ವಿರೋಧಿ ಹೋರಾಟವು ಒಂದು ಜನತಾ ಚಳುವಳಿಯಾಗಿ ಬಹುವ್ಯಾಪಕವಾಗಿ ಬೆಳೆದು ಪಾಳೇಗಾರಿ-ವಿರೋಧಿ ಕಾರ್ಷಿಕ ಬಂಡಾಯವಾಗಿ ವಿಕಾಸಗೊಂಡಿತು. ಭೂಮಿಯಿಂದ ರೈತರ ಒಕ್ಕಲೆಬ್ಬಿಸುವಿಕೆಯನ್ನು ನಿಲ್ಲಿಸಬೇಕೆಂಬ ಬೇಡಿಕೆಯಿಂದ ಪ್ರಾರಂಭವಾದ ಚಳುವಳಿಯು ಉಳುವವನಗೇ ಭೂಮಿ ಎಂಬ ಬೇಡಿಕೆಯವರೆಗೆ ಪ್ರಗತಿ ಹೊಂದಿತು. ನಮ್ಮ ದೇಶದ ರೈತ ಚಳುವಳಿಯ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ 'ಉಳುವವನಗೇ ಭೂಮಿ' ಎಂಬ ಘೋಷಣೆ ನೀಡಲಾಯಿತು. ಕಾಡ್ಗಿಚ್ಚಿನಂತೆ ವ್ಯಾಪಿಸಿದ ಈ ಬೇಡಿಕೆಯು ಚಳುವಳಿಯ ವ್ಯಾಪ್ತಿಯನ್ನು ಹೆಚ್ಚಿಸಿತು.

ಈ ಹೋರಾಟವನ್ನು ಮುಂದುವರಿಸಲು, 10,000 ಸದಸ್ಯರ ಗ್ರಾಮ ಪಡೆಗಳನ್ನು ಮತ್ತು 2,000ಕ್ಕೂ ಹೆಚ್ಚಿನ ಸದಸ್ಯರ ವ್ಯವಸ್ಥಿತ ಗೆರಿಲ್ಲಾ ದಳಗಳನ್ನು ಪಕ್ಷವು ರಚಿಸಿತು. ವಿವಿಧ ಜಿಲ್ಲಾ ಹಾಗೂ ತಾಲೂಕು ಪಡೆಗಳ ನಡುವೆ ಪರಸ್ಪರ ಸಹಾಯಕ್ಕಾಗಿ ಪಕ್ಷವು ಸಮನ್ವಯವನ್ನು ಸಂಘಟಿಸಿತು. ಗ್ರಾಮ ದಳಗಳು, ಗ್ರಾಮ ಧ್ವಂಸ ದಳಗಳು ಮತ್ತು ನಿಯಮಿತ ಗೆರಿಲ್ಲಾ ದಳಗಳೆಂದು ಎಲ್ಲಾ ಗೆರಿಲ್ಲಾ ಪಡೆಗಳನ್ನು ಸಂರಚಿಸಲಾಯಿತು.

ಗೆರಿಲ್ಲಾ ದಳಗಳ ರಚನೆಯಾದ ನಂತರ, ರಾಜಕೀಯ ಮತ್ತು ಮಿಲಿಟರಿ ಎಂದು ಎರಡು ಶಾಖೆಗಳಾಗಿ ಪಕ್ಷದ ಕೆಲಸವನ್ನು ವಿಭಜಿಸಿ, ಎರಡರ ನಡುವೆ ಸಮನ್ವಯ ಸಾಧಿಸಲಾಯಿತು. ವ್ಯವಸ್ಥಿತ ಗೆರಿಲ್ಲಾ ದಳಗಳ ರಚನೆಯಾದ ಮೇಲೆ ಸಶಸ್ತ್ರ ಪ್ರತಿರೋಧ ಚಳುವಳಿಯಲ್ಲಿ ಬದಲಾವಣೆ ಕಂಡುಬಂತು. ಗೆರಿಲ್ಲಾಗಳು ಹೊಂಚು ಹಾಕಿ ದಾಳಿ ಮಾಡುತ್ತಾ ಶತೃ ಪಡೆಗಳ ವಿರುದ್ಧ ಹೋರಾಡುತ್ತಿದ್ದವು ಅಥವಾ ಶತೃ ಪಾಳೆಯದ ಮೇಲೆ ದಾಳಿಮಾಡಿ ಧ್ವಂಸ ಮಾಡುತ್ತಿದ್ದರು. ಈ ಪ್ರತಿರೋಧದ ದಾಳಿಯಲ್ಲಿ ಅವರು ಚತುರರಾದರು. ಈ ಹಿಂದಿನ ಅವಧಿಯಲ್ಲಿ ರಜಾಕಾರರ ವಿರುದ್ಧ ದಾಳಿಗಳಲ್ಲಿ ಕ್ರಿಯಾಶೀಲ ಪಾತ್ರವಹಿಸುತ್ತಿದ್ದ ತರಬೇತಿಯಿಲ್ಲದ ಯುವಕರ ನಡುವಿನಿಂದ ಸಮರ್ಥ ಯುವಕರನ್ನು ವ್ಯವಸ್ಥಿತ ಗೆರಿಲ್ಲಾ ದಳಗಳಿಗೆ ನೇಮಕ ಮಾಡಲಾಗುತ್ತಿತ್ತು. ನಾಡಬಂದೂಕುಗಳನ್ನು ಹೊಂದಿದ್ದ ಈ ದಳಗಳು ಜನರ ಸಶಸ್ತ್ರ ಪಡೆಗಳ ಕೇಂದ್ರವಾಗಿದ್ದವು ಮತ್ತು ಆ ಮೂಲಕ ಹಳ್ಳಿ ಹಳ್ಳಿಗಳಲ್ಲಿ ಸರ್ಕಾರಿ ಯಂತ್ರಗಳನ್ನು ಹೊಡೆದುರುಳಿಸಲು ಜನರಲ್ಲಿ ಶಕ್ತಿ ತುಂಬಿದವು.

ಈ ಹಂತದಲ್ಲಿ, ರಜಾಕಾರರನ್ನು, ಜಮೀನ್ದಾರರನ್ನು ಮತ್ತು ಅವರ ಸಶಸ್ತ್ರ ಕೈಗೊಂಬೆಗಳನ್ನು ಹಳ್ಳಿಗಳಿಂದ ಹೊಡೆದೋಡಿಸುವ ಆ ಹೋರಾಟದಲ್ಲಿ ಸರಿಸುಮಾರು 200 ಹೋರಾಟಗಾರರು ಮತ್ತು ಮುಖಂಡರು ತಮ್ಮ ಜೀವ ತೆತ್ತರು. ವೆಟ್ಟಿ ಪದ್ಧತಿ, ಅನೈತಿಕ ವಸೂಲಿ, ಒಕ್ಕಲೆಬ್ಬಿಸುವುದು, ದುಬಾರಿ ಸಾಲ, ಭ್ರಷ್ಟ ಅಧಿಕಾರಿಗಳ ಕಿರುಕುಳ ಮತ್ತು ಹಳ್ಳಿಗಳ ಪೀಡಕರುಗಳು ಮುಂತಾದ ಪಿಡುಗುಗಳಿಂದ ಹಳ್ಳಿಗಳನ್ನು ಮುಕ್ತಗೊಳಿಸಲಾಯಿತು: ಕೃಷಿಕೂಲಿಕಾರರಿಗೆ ನ್ಯಾಯವಾದ ಕೂಲಿಯನ್ನು ಖಾತ್ರಿಪಡಿಸಲಾಯಿತು ಮತ್ತು ಧಾನ್ಯ ವಿತರಿಸಲಾಯಿತು. ಉಳುತ್ತಿದ್ದ ಗೇಣಿದಾರರಿಗೇ ಭೂಮಿಯ ಹಕ್ಕು ಪತ್ರ ಮಾಡಿಕೊಡಲಾಯಿತು. ತಮ್ಮ ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ದಿನಕ್ಕೆ ಎರಡು ಹೊತ್ತು ಊಟ ಸಿಗುವಂತಾಯಿತು ಎಂದು ಜನರು ಹೇಳುವಂತಾಯಿತು. 3,000 ಹಳ್ಳಿಗಳಲ್ಲಿ ಗ್ರಾಮ ಸ್ವಯಮಾಡಳಿತ ಸ್ಥಾಪಿಸಲಾಯಿತು. ಜನರ ಸಮಿತಿಗಳು ಶಿಕ್ಷಣ, ಆರೋಗ್ಯ ಮತ್ತಿತರ ಗ್ರಾಮ ಸೇವೆಗಳನ್ನು ಸಂಘಟಿಸಿದವು.

ಹೆಚ್ಚುವರಿ ಜಮೀನು, ಅನೈತಿಕವಾಗಿ ವಶಪಡಿಸಿಕೊಂಡಿದ್ದ ಜಮೀನು, ಗೇಣಿ ಭೂಮಿಗಳು, ಖರಾಬು ಜಮೀನು ಮತ್ತು ಅರಣ್ಯ ಹಾಗೂ ಗೋಮಾಳ ಜಮೀನು, ಹೀಗೆ ಒಟ್ಟು ಹತ್ತು ಲಕ್ಷ ಎಕರೆ ಜಮೀನುಗಳನ್ನು ಸಂಪೂರ್ಣ ಹಕ್ಕುಪತ್ರಗಳೊಂದಿಗೆ ಭೂಹೀನರಿಗೆ, ಬಡವರಿಗೆ ಮತ್ತು ಮಧ್ಯಮ ರೈತರಿಗೆ ವಿತರಿಸಲಾಯಿತು. ಭೂಮಿಯೊಂದಿಗೆ, ಜಮೀನ್ದಾರರಿಗೆ ಸೇರಿದ್ದ ಕೃಷಿ ಸಲಕರಣೆಗಳು, ಹತ್ತಾರು ಸಾವಿರ ಜಾನುವಾರುಗಳು, ಮೇಕೆ ಮತ್ತು ಕುರಿಗಳನ್ನು ರೈತರಿಗೆ ಉಚಿತವಾಗಿ ಹಂಚಲಾಯಿತು. ಜಮೀನ್ದಾರರು, ದೇಶಮುಖರು ಮತ್ತು ಬಡ್ಡಿಸಾಹುಕಾರರ ಸಾಲಗಳನ್ನು ರದ್ದುಪಡಿಸಲಾಯಿತು.

ತೆಲಂಗಾಣದಲ್ಲಿ ಚಳುವಳಿ ಬೆಳೆದಂತೆಲ್ಲಾ, ಜಮೀನುಗಳಿಗೆ ಹೆಚ್ಚೆಚ್ಚು ಬೇಡಿಕೆಗಳು ಬರುತ್ತಿದ್ದಂತೆ, ಪಕ್ಷವು ನಿರ್ಧರಿಸಿದ್ದ ಭೂಮಿತಿಯನ್ನು ಆರಂಭದಲ್ಲಿ 500 ಎಕರೆಯಿಂದ 200 ಎಕರೆಗೆ ಮತ್ತು ಅಂತಿಮವಾಗಿ 1948ರ ಮಧ್ಯಭಾಗದಲ್ಲಿ, 100 ಎಕರೆ ಒಣ ಹಾಗೂ 10 ಎಕರೆ ಕೃಷಿ ಭೂಮಿಗೆ ಇಳಿಸಬೇಕಾಯಿತು. ಮೊದಲು ಕೃಷಿ ಕೂಲಿಕಾರರಿಗೆ, ನಂತರದಲ್ಲಿ ಬಡ ಹಾಗೂ ಮಧ್ಯಮ ರೈತರಿಗೆ ವಿತರಿಸಲಾಯಿತು.

ಭೂಮಿ ವಿತರಣೆ ಮತ್ತು ಹೆಚ್ಚಿನ ಕೂಲಿಗಳಿಂದಾಗಿ ಕೃಷಿ ಕೂಲಿಕಾರರ ರಾಜಕೀಯ ಪ್ರಜ್ಞೆ ಮತ್ತು ಜೀವನ ವಿಧಾನದಲ್ಲಿ ಗಣನೀಯ ಬದಲಾವಣೆ ಬಂತು.

ಭೂ ವಿತರಣೆ ಮತ್ತು ಅವುಗಳಿಂದ ಮೇಲೆದ್ದು ಬಂದ ಸಮಸ್ಯೆಗಳನ್ನು ನಿಭಾಯಿಸುವ ಕೆಲಸವನ್ನು ಗ್ರಾಮ ಸ್ವಯಮಾಡಳಿತ ಸಮಿತಿಗಳು ಮಾಡುತ್ತಿದ್ದವು. ಅವು ಹೋರಾಟ ಮತ್ತು ಅಧಿಕಾರ ಎರಡೂ ಅಂಗಗಳನ್ನು ಮೇಳೈಸಿಕೊಂಡ ಸಮಿತಿಗಳಾಗಿದ್ದವು. ಹಳ್ಳಿಯ ವಯಸ್ಕರಿಂದ ಚುನಾಯಿತರಾದ ಈ ಸಮಿತಿಗಳು ಗ್ರಾಮದ ಆಡಳಿತವನ್ನು ನಿರ್ವಹಿಸುತ್ತಿದ್ದವು. ಇವುಗಳನ್ನು 'ಗ್ರಾಮ ರಾಜ್ಯಂ' ಸಮಿತಿಗಳು ಎಂದು ಕರೆಯಲಾಗುತ್ತಿತ್ತು.

ಪುರುಷರು, ಮಹಿಳೆಯರು ಮತ್ತು ಗ್ರಾಮ ಪಡೆಗಳ ಮುಖಂಡರು ಐದು ಅಥವಾ ಏಳು ಸದಸ್ಯರಿರುವ ಈ ಸಮಿತಿಗಳಿಗೆ ಚುನಾಯಿಸಲ್ಪಡುತ್ತಿದ್ದರು. ಜನರ ಈ ಎಲ್ಲಾ ಸಮಸ್ಯೆಗಳನ್ನು ಈ ಹಿಂದೆ ಇದ್ದ ಭ್ರಷ್ಟಾಚಾರ, ಲಂಚ ಹಾಗೂ ಕೀಳು ವಿಧಾನಗಳು ಯಾವುದೂ ಇಲ್ಲದೆ, ಪರಿಹರಿಸಲಾಗುತ್ತಿತ್ತು. ಈ ಕೆಲಸಗಳಲ್ಲಿ, ಸಮಿತಿ ಸದಸ್ಯರೊಂದಿಗೆ ಹಲವಾರು ಸಾಮಾನ್ಯ ಜನರೂ ಪಾಲ್ಗೊಳ್ಳುತ್ತಿದ್ದರು. ಎಲ್ಲಾ ಸಮಸ್ಯೆಗಳನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ಪರಿಹರಿಸಲಾಗುತ್ತಿತ್ತು. ಗ್ರಾಮ ರಾಜ್ಯಂ ಸಮಿತಿಗಳು ಪ್ರತಿಗಾಮಿಗಳಿಗೆ ಎಚ್ಚರಿಕೆ ನೀಡುತ್ತಿದ್ದವು, ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗುತ್ತಿತ್ತು, ಅವರ ಅಪರಾಧದ ಸ್ವಭಾವವನ್ನು ಅನುಸರಿಸಿ ಅವರಿಗೆ ದಂಡ ವಿಧಿಸಲಾಗುತ್ತಿತ್ತು ಅಥವಾ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತಿತ್ತು. ಪೋಲಿಸರ ಜತೆ ಓಡಾಡುತ್ತಾ ಜನರ ಮೇಲೆ ದಾಳಿ ಮಾಡುವವರಿಗೆ ಶಿಕ್ಷೆ ವಿಧಿಸಲಾಗುತ್ತಿತ್ತು.

ಈ ಗ್ರಾಮ ರಾಜ್ಯಂ ಅಡಿಯಲ್ಲಿ, ಜನರು ಇನ್ನೂ ಹಲವಾರು ಸೌಲಭ್ಯಗಳನ್ನು ಪಡೆಯುತ್ತಿದ್ದರು:

- ತೆರಿಗೆ ವಸೂಲು ಮಾಡುವ ಸರ್ಕಾರಿ ಏಜಂಟರುಗಳು ಇರುತ್ತಿರಲಿಲ್ಲ ಮತ್ತು ಹಣ ಜನರ ಬಳಿಯೇ ಉಳಿಯುತ್ತಿತ್ತು;
- ನೀರಾ ದೊರೆಯುತ್ತಿದ್ದ ತಾಳೆ ಮರ ಹಾಗೂ ಖರ್ಜೂರದ ಮರಗಳನ್ನು ಕಡಿಯುವ ಕಾರ್ಯಕ್ರಮದಿಂದಾಗಿ ಮುಠ್ಠೇದಾರರಲ್ಲಿ ಬೆಳೆಯುತ್ತಿದ್ದ ವಿರೋಧ ಮತ್ತು ಅತೃಪ್ತಿಯನ್ನು ಪಕ್ಷ ಅರ್ಥಮಾಡಿಕೊಂಡಿತು. ಆದ್ದರಿಂದ ಆ ಕಾರ್ಯಕ್ರಮ ಕೈಬಿಡಲಾಯಿತು. ಇದಕ್ಕೆ ಮಿಗಿಲಾಗಿ, ನೀರಾ ಇಳಿಸಲು, ಒಳ್ಳೆಯ ನೀರಾವನ್ನು ಕಡಿಮೆ ಬೆಲೆಗೆ ಜನರಿಗೆ ಪೂರೈಸಲು ಮತ್ತು ಸರ್ಕಾರಕ್ಕೆ ತೆರಿಗೆ ಕೊಡದಿರುವಂತೆ ಅವರಿಗೆ ಹೇಳಲಾಯಿತು;
- ಕೃಷಿ ಉತ್ತಮಪಡಿಸಲು ನೀರಾವರಿ ಕಾಲುವೆಗಳನ್ನು ಮತ್ತು ಸಣ್ಣ ಕೆರೆಗಳನ್ನು ತೋಡುವ ಕಾರ್ಯಕ್ರಮ ಜಾರಿಮಾಡಲಾಯಿತು;
- ವೈದ್ಯಕೀಯ ಸೌಲಭ್ಯ, ಆರೋಗ್ಯ ಸೇವೆ, ಮತ್ತು ಕನಿಷ್ಠ ನೈರ್ಮಲ್ಯ ಕಾಪಾಡಲು ಜನರಿಗೆ ತರಬೇತಿ ನೀಡುವುದನ್ನು ವ್ಯಾಪಕವಾಗಿ ಕೈಗೊಳ್ಳಲಾಯಿತು; ಕಾಲರಾ ಸಾಂಕ್ರಾಮಿಕ ರೋಗ ಹೆಚ್ಚು ಕಾಡುತ್ತಿದ್ದ ಹಳ್ಳಿಗಳಲ್ಲಿ ಸರಿಯಾದ ಸಹಾಯ, ಚುಚ್ಚುಮದ್ದು ಇತ್ಯಾದಿಗಳನ್ನು ನೀಡಿ ರಕ್ಷಿಸಲಾಯಿತು. ರೋಗಗಳನ್ನು ತಡೆಯಲು ಹಲವಾರು ಹಳ್ಳಿಗಳಿಗೆ ವ್ಯಾಪಕವಾಗಿ ಔಷಧಿಗಳನ್ನು ಪೂರೈಸಲಾಯಿತು;
- ಹೋರಾಟದ ಸಮಯದಲ್ಲಿ ಮನೆಗಳು ಸುಟ್ಟಹೋದ ರೈತರಿಗೆ ಮನೆ ಕಟ್ಟಿಕೊಳ್ಳಲು ಮರ, ತಾಳೆ ಎಲೆ, ಹುಲ್ಲು ಮುಂತಾದವುಗಳನ್ನು ಜಮೀನ್ದಾರರ ತಾಳೆ ತೋಪುಗಳು ಮತ್ತು ಸರ್ಕಾರಿ ಅರಣ್ಯಗಳಿಂದ ತೆಗೆದುಕೊಂಡು ಪೂರೈಸಲಾಯಿತು;

ತೆಲಂಗಾಣ ಹೋರಾಟಗಳಲ್ಲಿ ಪುರುಷರ ಜತೆಯಲ್ಲಿ ಸಮಾನವಾಗಿ ಮಹಿಳೆಯರೂ ಭಾಗವಹಿಸಿದ್ದರು ಮತ್ತು ಅದರಿಂದಾಗಿ, ಸಮಾಜದಲ್ಲಿ ಬೇರು ಬಿಟ್ಟಿದ್ದ 'ಮಹಿಳೆಯರು ಪುರುಷರಿಗಿಂತ ಕೀಳು'ಎಂಬ ಹಳೆಯ ಪದ್ಧತಿಗಳ ವಿರುದ್ಧ ಪ್ರಚಾರ ಮಾಡುವುದು ಗ್ರಾಮ ರಾಜ್ಯಂ ಸಮಿತಿಗಳಿಗೆ ಮತ್ತು ಪಕ್ಷಕ್ಕೆ ಸುಲಭವಾಯಿತು. ಪುರುಷರು ಮತ್ತು ಮಹಿಳೆಯರಿಗೆ ಸಮಾನ ಹಕ್ಕುಗಳಿವೆ ಎಂದು ಘೋಷಿಸಲಾಯಿತು ಮತ್ತು ಪ್ರಚಾರ ಮಾಡಲಾಯಿತು. ಈ ತತ್ವಗಳ ಪ್ರೇರಣೆಯಿಂದ, ಪಕ್ಷವು ತಮ್ಮ ಬಾಳಸಂಗಾತಿಗಳನ್ನು ಆರಿಸಿಕೊಳ್ಳುವ ಮತ್ತು ಎಲ್ಲಾ ಪ್ರಯತ್ನ ಮಾಡಿದ ಮೇಲೂ

ಪುಟ 14 ನೋಡಿ





ಮಾನವ ಹಕ್ಕುಗಳ ಹೋರಾಟಗಾರರೊಂದಿಗೆ ಅಮಾನವೀಯ ವರ್ತನೆ

– ಗೃಹಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ

ಭೀಮಾ ಕೊರೆಗಾಂವ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಬಂಧಿಸಿರುವ ಮಾನವ ಹಕ್ಕುಗಳ ಕಾರ್ಯಕರ್ತರೊಂದಿಗೆ ಅಮಾನವೀಯವಾಗಿ ವರ್ತಿಸಲಾಗುತ್ತಿದೆ. ಇದು ಅತ್ಯಂತ ದುರದೃಷ್ಟಕರ ಸಂಗತಿ ಎಂದು ಈ ಕುರಿತು ಕೇಂದ್ರ ಗೃಹಮಂತ್ರಿಗಳಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರೂ, ಮಾಜಿ ರಾಜ್ಯಸಭಾ ಸದಸ್ಯರೂ ಅಗಿರುವ ಬೃಂದಾ ಕಾರಟ್ ಜೂನ್21ರಂದು ಒಂದು ಪತ್ರ ಬರೆದಿದ್ದಾರೆ.

ಗೌತಮ್ ನವ್ಲಖರವರ ಜಾಮೀನು ಅರ್ಜಿ ಬಗ್ಗೆ ದಿಲ್ಲಿ ಹೈಕೋರ್ಟ್ ವಿಚಾರಣೆ ನಡೆಸುತ್ತಿದ್ದಾಗಲೇ, ಇದ್ದಕಿದ್ದಂತೆ ಅವರನ್ನು ಎನ್.ಐ.ಎ. ತಂಡ ಮುಂಬೈಗೆ ಸಾಗಿಸಿತು. ಅಲ್ಲಿ ಕ್ವಾರಂಟೈನ್ ಎಂದು ಒಂದು ಕಿಕ್ಕಿರಿದ, ಅನಾರೋಗ್ಯಕರ ಪರಿಸ್ಥಿತಿಯಿರುವ ಜಾಗದಲ್ಲಿ ಕ್ವಾರಂಟೈನ್ ಅವಧಿ ಮುಗಿದ ಮೇಲೂ ಇಡಲಾಗಿದೆ,

81 ವರ್ಷದ ವರವರ ರಾವ್ ಅವರ ಆರೊಗ್ಯ ಸ್ಥಿತಿ ಬಿಗಡಾಯಿಸುತ್ತಿದ್ದರೂ ಜಾಮೀನು ನಿರಾಕರಿಸಲಾಗುತ್ತಿದೆ.

ಇವರೆಲ್ಲರ ಜೀವಗಳಿಗೆ ನಿಜವಾದ ಅಪಾಯವಿದ್ದರೂ ಮಹಾಮಾರಿಯ ಅವಧಿಗೆ ತಾತ್ಕಾಲಿಕ ಜಾಮೀನನ್ನಾದರೂ ಕೊಡಬೇಕು ಎಂಬ ಬಗ್ಗೆ ಅರ್ಜಿಯನ್ನು ಎನ್..ಐ.ಎ. ಆಕ್ಷೇಪಗಳನ್ನು ಎತ್ತಿದ್ದರಿಂದ ನಿರಾಕರಿಸಲಾಗಿದೆ. ಜಾಮೀನು ನಿರಾಕರಿಸಲು ಯಾವುದೇ ತರ್ಕಬದ್ಧ ಕಾರಣಗಳಿಲ್ಲ. ಏಕೆಂದರೆ ಅವರುಗಳು ತನಿಖೆಗೆ ಯಾವಾಗ ಬೇಕಾದರೂ ಲಭ್ಯವಿರುತ್ತಾರೆ. ಬಡವರು ಮತ್ತು ಅಂಚಿಗೆ ತಳ್ಳಲ್ಪಟ್ಟವರ ಸೇವೆಯಲ್ಲಿ ತೊಡಗಿರುವವರ ಮೇಲೆ ಸೇಡು ತೀರಿಸಿಕೊಳ್ಳುವ ರಾಜಕೀಯ ಕ್ರಿಯೆಗಳು ಯಾವ ಸರಕಾರಕ್ಕೂ ಶೋಭೆ ತರುವಂತದ್ದಲ್ಲ ಎಂದಿರುವ ಬೃಂದಾ ಕಾರಟ್ ಮಹಾಮಾರಿಯ ಅವಧಿಯಲ್ಲಾದರೂ ಎನ್.ಐ.ಎ. ಅವರ ಜಾಮೀನು ಅರ್ಜಿಯನ್ನು ವಿರೋಧಿಸಬಾರದು ಎಂದು ಹೇಳಿದ್ದಾರೆ. ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಶೀ ಅಮಿತ್ ಷಾ ಜೀ,

ನಮಸ್ಕಾರ. ನಾನು ಭೀಮಾ ಕೊರೆಗಾಂವ್ ಪ್ರಕರಣದಲ್ಲಿ ಬಂಧಿಸಿರುವ ರಾಜಕೀಯ ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರೊಂದಿಗೆ ಅಮಾನವೀಯ ವರ್ತನೆಯತ್ತ ನಮ್ಮ ಗಮನ ಸೆಳೆಯಲು ಬರೆಯುತ್ತಿದ್ದೇನೆ. ತನಿಖೆಯನ್ನು ನಮ್ಮ ಆದೇಶದ ಅಡಿಯಲ್ಲಿರುವ ಎನ್.ಐ.ಎ. ನಡೆಸುತ್ತಿರುವುದರಿಂದಾಗಿ ನಮಗೆ ಬರೆಯುತ್ತಿದ್ದೇನೆ. ಹನ್ನೊಂದು ಬಂಧಿತರಲ್ಲಿ ಒಂಭತ್ತು ಮಂದಿ ಎರಡು ವರ್ಷಗಳಿಂದ ಜೈಲುವಾಸ ಅನುಭವಿಸುತ್ತಿದ್ದಾರೆ. ಇದು ತನಿಖೆ ನಡೆಸಲು ಬೇಕಾಗುವ ಸಮಯಕ್ಕಿಂತ ಹೆಚ್ಚೇ ಆಗಿದೆ. ಆದರೂ ಎನ್.ಐ.ಎ. ಸತತವಾಗಿ ಅವರ ಜಾಮೀನು ಅರ್ಜಿಗಳನ್ನು ವಿರೋಧಿಸುತ್ತ ಬಂದಿದೆ. ಆರೋಪಿಗಳಲ್ಲಿ ಹಲವರ ಆರೋಗ್ಯ ಸೂಕ್ಷ್ಮ ಸ್ಥಿತಿಯಲ್ಲಿದೆ. ಸುಧಾ ಭಾರದ್ವಾಜ್, ಶೋಮಾ ಸೆನ್, ಸುರೇಂದ್ರ ಗಾಡ್ಲಿಂಗ್, ಮಹೇಶ ರಾವುತ್, ಅರುಣ್ ಫೆರೇರ, ಸುಧೀರ್ ಧವಳೆ, ರೋನಾ ವಿಲ್ಸನ್, ವೆರ್ನೊನ್ ಗೊನ್ಸಾಲ್ವೆಸ್, ವರವರ ರಾವ್, ಗೌತಮ್ ನವ್ಲಖ ಮತ್ತು ಆನಂದ ತೇಲ್ತುಂಬ್ಡೆ ಈ ಪ್ರಕರಣದಲ್ಲಿ ಬಂಧಿತ ಆರೋಪಿಗಳು. ಈ ಕೊವಿಡ್ ಮಹಾಮಾರಿಯ ಕಾಲದಲ್ಲಿ ಅವರು ವೈರಸ್ ಸೋಂಕಿಗೊಳಗಾಗುವ ನಜವಾದ ಅಪಾಯವಿದೆ. ಮತ್ತು ಅವರು ಸಹ–ಕಾಯಿಲೆಗಳಿಂದ ನರಳುತ್ತಿರುವುದರಿಂದ ಅಪಾಯದ ಸಂಭವ ಹೆಚ್ಚಿದೆ.

ತೀರಾ ಇತ್ತಿಚಿನ ಉದಾಹರಣೆಯೆಂದರೆ ಶ್ರೀ ಗೌತಮ್ ನವ್ಲಖರವರೊಂದಿಗೆ ನಡೆದಿರುವ ಅಮಾನವೀಯ ವರ್ತನೆ. ದಿಲ್ಲಿ ಹೈಕೋರ್ಟಿನ ಎದುರು ಅವರ ಜಾಮೀನು ಅರ್ಜಿ ವಿಚಾರಣೆಯಲ್ಲಿದ್ದಾಗಲೇ, ಎನ್.ಐ.ಎ. ತಂಡ ಅವರನ್ನು ಮುಂಬೈಗೆ ಒಯ್ದಿತು. ಅವರನ್ನು ಕ್ವಾರಂಟೈನ್ ಸೌಲಭ್ಯ ಎಂದು ಜೈಲಿನ ಬಳಿಯಿರುವ ಒಂದು ಶಾಲೆಗೆ ಕಳಿಸಲಾಯಿತು. ಅಲ್ಲಿ 350 ಮಂದಿಯನ್ನು ಇರಿಸಲಾಗಿದೆ.. ಇರುವುದು ಕೇವಲ ಮೂರು ಸ್ನಾನದ ಕೋಣೆಗಳು, ಬಕೆಟ್‌ಗಳು ಅಥವ ಮಗ್‌ಗಳು ಇಲ್ಲ. ಅವರೊಂದಿಗೆ ಒಂದು ಸಣ್ಣ ತರಗತಿ ಕೋಣೆಯಲ್ಲಿ 34 ಮಂದಿಯಿದ್ದಾರೆ. ಅದು ಕಿಕ್ಕಿರಿದಿದ್ದು ಅತ್ಯಂತ ಅನಾರೋಗ್ಯಕರ ಸ್ಥಿತಿಯಲ್ಲಿದೆ. ಅವರಿಗೆ ಗಂಭೀರ ಜೀರ್ಣಸಂಬಂಧಿ ಸಮಸ್ಯೆಗಳು, ರಕ್ತದೊತ್ತಡ ಮತ್ತು ಹೈಪರ್ ಟೆನ್ಶನ್‌ನಿಂದ ಅಪಾಯದ ಸಂಭವ ಹೆಚ್ಚಿದೆ. ಅವರ ಕ್ವಾರಂಟೈನ್ ಅವಧಿ ಮುಗಿದಿದ್ದರೂ, ಶಿಕ್ಷೆಯ ಕ್ರಮವಾಗಿ ಅಲ್ಲೇ ಇರಿಸಲಾಗಿದೆ. ಒಬ್ಬ ರಾಜಕೀಯ ಬಂಧಿಯೊಡನೆ ಈ ರೀತಿಯಲ್ಲಿ ವರ್ತಿಸುತ್ತಿರುವುದು ಆಘಾತಕಾರಿ. ಅವರನ್ನು ಇರಿಸಲಾಗಿರುವ ಪರಿಸ್ಥಿತಿಗಳ ಬಗ್ಗೆ ನೋಡಿ ಅವರ ಜಾಮೀನು ಅರ್ಜಿ ಇತ್ಯರ್ಥವಾಗುವ ವರೆಗೆ ಹೆಚ್ಚು ಆರೋಗ್ಯಕರವಾದ ಸ್ಥಳಕ್ಕೆ ವರ್ಗಾಯಿಸಬೇಕು ಎಂದು ನಮ್ಮನ್ನು ಆಗ್ರಹಿಸುತ್ತೇನೆ.

ಇನ್ನೊಂದು ಆಘಾತಕಾರಿ ಉದಾಹರಣೆಯೆಂದರೆ ಶ್ರೀ ವರವರ ರಾವ್ ಅವರದ್ದು. ಅವರ ವಯಸ್ಸು 81. ಆರೋಗ್ಯ ಸ್ಥಿತಿ ಅತ್ಯಂತ ಸೂಕ್ಷ್ಮವಾಗಿದೆ. .ಆದರೂ ಅವರಿಗೆ ಜಾಮೀನು ನರಾಕರಿಸಲಾಗಿದೆ, ಮಾತ್ರವಲ್ಲ, ಅವರ ಆರೋಗ್ಯ ಆತಂಕಕಾರಿಯಾಗಿ ಹದಗೆಡುತ್ತಿದ್ದರೂ, ಸುಸಜ್ಜಿತ ಜೆ.ಜೆ. ಆಸ್ಪತ್ರೆಯಿಂದ ಅವರನ್ನು ಮೂರೇ ದಿನಗಳಲ್ಲಿ ಡಿಸ್ಚಾರ್ಜ್ ಮಾಡಿ ಮತ್ತೆ ಜೈಲಿಗೆ ಕಳಿಸಲಾಗಿದೆ. ಇದು ಅವರಿಗೆ ಬದುಕುವ ಹಕ್ಕನ್ನು ನರಾಕರಿಸುವುದಲ್ಲದೆ ಬೇರೇನೂ ಅಲ್ಲ. ಶ್ರೀಮತಿ ಸುಧಾ ಭಾರದ್ವಾಜ್‌ಗೆ 60 ವರ್ಷ, ಅವರು ಮಧುಮೇಹ, , ಹೈಪರ್ ಟೆನ್ಶನ್, ಅಸ್ತಮಾದಿಂದ ನರಳುತ್ತಿದ್ದಾರೆ, ಕ್ಷಯರೋಗದ ಇತಿಹಾಸವೂ ಇದೆ. 62 ವರ್ಷಗಳ ಶೋಮಾ ಸೆನ್ ಹೆಚ್ಚು ರಕ್ತದೊತ್ತಡ, ತೀವ್ರ ಅರ್ಥರೈಟಿಸ್, ಮತ್ತು ಗ್ಲಾಕೊಮದಿಂದ ನರಳುತ್ತಿದ್ದು, ಅನ್ಯಾಯವಾಗಿ ಜಾಮೀನು ನರಾಕರಿಸಲಾಗಿದೆ. ಇವರೆಲ್ಲರ ಜೀವಗಳಿಗೆ ನಿಜವಾದ ಅಪಾಯವಿದ್ದರೂ ಮಹಾಮಾರಿಯ ಅವಧಿಗೆ ತಾತ್ಕಾಲಿಕ ಜಾಮೀನನ್ನಾದರೂ ಕೊಡಬೇಕು ಎಂಬ ಬಗ್ಗೆ ಅರ್ಜಿಯನ್ನು ಎನ್..ಐ.ಎ. ಆಕ್ಷೇಪಗಳನ್ನು ಎತ್ತಿದ್ದರಿಂದ ನರಾಕರಿಸಲಾಗಿದೆ. ಜಾಮೀನು ನರಾಕರಿಸಲು ಯಾವುದೇ ತರ್ಕಬದ್ಧ ಕಾರಣಗಳಿಲ್ಲ. ಏಕೆಂದರೆ ಅವರುಗಳು ತನಿಖೆಗೆ ಯಾವಾಗ ಬೇಕಾದರೂ ಲಭ್ಯವಿರುತ್ತಾರೆ. ಮಹಾಮಾರಿಯ ಅವಧಿಯಲ್ಲಾದರೂ ಎನ್.ಐ.ಎ. ಅವರ ಜಾಮೀನು ಅರ್ಜಿಯನ್ನು ವಿರೋಧಿಸಬಾರದು.

ಸುಪ್ರಿಂ ಕೋರ್ಟ್ ಕೂಡ ಮಹಾಮಾರಿಯ ಸಮಯದಲ್ಲಿ ಜೈಲುಗಳಲ್ಲಿ ವಿಚಾರಣಾಧೀನ ಕೈದಿಗಳಿಗೆ ಅಪಾಯಕಾರಿಯಾದ ಸ್ಥಿತಿ ಇದೆ ಎಂಬುದನ್ನು ಗಮನಸಿ "ಜೈಲುಗಳಲ್ಲಿ ಜನನಿಬಿಡತೆಯನ್ನು ಕಡಿಮೆ ಮಾಡಿ" ಎಂದು ಸೂಚನೆಗಳನ್ನು ಕೊಟ್ಟಿದೆ. ಇಂತಹ ಸಮಯದಲ್ಲೂ ತಮ್ಮ ಆರೋಗ್ಯ ಪರಿಸ್ಥಿತಿಗಳಿಂದಾಗಿ ಅತ್ಯಂತ ಅಪಾಯದ ಸ್ಥಿತಿಯಲ್ಲಿರುವವರಿಗೆ ಜಾಮೀನನ್ನು ನರಾಕರಿಸುತ್ತಿರುವುದು, ಮತ್ತು ಗೌತಮ್ ನವ್ಲಖರವರ ಆರೋಗ್ಯ ಮತ್ತಷ್ಟು ಹದಗೆಡುವಂತೆ ಮಾಡುವ ಪರಿಸ್ಥಿತಿಯಲ್ಲಿ ಇಟ್ಟಿರುವುದು ಅತ್ಯಂತ ದುರದೃಷ್ಟಕರ.

ಬಡವರು ಮತ್ತು ಅಂಚಿಗೆ ತಳ್ಳಲ್ಪಟ್ಟವರ ಸೇವೆ ಮಾಡಿರುವವರ ವಿರುದ್ಧ ಸೇಡು ತೀರಿಸಿಕೊಳ್ಳುವ ರಾಜಕೀಯ ಕ್ರಿಯೆಗಳು ಯಾವುದೇ ಸರಕಾರಕ್ಕೆ ಕೀರ್ತಿ ತರುವಂತದ್ದಲ್ಲ. ಮುಂಬೈ ಜೈಲುವಾಸಿಗಳು ಮತ್ತು ಪೋಲೀಸ್ ಸಿಬ್ಬಂದಿಯ ನಡುವೆ ಕೊವಿಡ್ ಸೋಂಕಿನ ಸಂಖ್ಯೆ ಹೆಚ್ಚುತ್ತಿರುವಾಗ ಇದು ಇನ್ನಷ್ಟು ಆತಂಕಕಾರಿ.

ನೀವು ಇಲ್ಲಿ ಎತ್ತಿರುವ ವಿಷಯಗಳನ್ನು ಪರಿಶೀಲಿಸುತ್ತೀರಿ ಮತ್ತು ಸೂಕ್ತ ಕ್ರಮ ಕೈಗೊಳ್ಳುತ್ತೀರಿ ಎಂದು ಆಶಿಸುತ್ತೇನೆ.

ನಿಮ್ಮ ವಿಶ್ವಾಸಿ
ಬೃಂದಾ ಕಾರಟ್
ಸದಸ್ಯರು, ಸಿಪಿಐ(ಎಂ) ಪೊಲಿಟ್‌ಬ್ಯುರೊ
ಮಾಜಿ ಸದಸ್ಯರು, ರಾಜ್ಯ ಸಭೆ

ಎಪ್ರಿಲ್ ಮತ್ತು ಜೂನ್ ನಡುವೆ ಸಂಭವಿಸಿದ್ದೇನು –ಸರ್ವಪಕ್ಷ ಸಭೆಯಿಂದ ತಿಳಿಯಲಿಲ್ಲ: ಯೆಚುರಿ

ಜೂನ್ 19 ರಂದು ಪ್ರಧಾನ ಮಂತ್ರಿಗಳು ಭಾರತ–ಚೀನಾ ಗಡಿಯಲ್ಲಿನ ಇತ್ತೀಚಿನ ಘರ್ಷಣೆಗಳ ಬಗ್ಗೆ ಸರ್ವಪಕ್ಷ ವಿಡಿಯೋ ಸಭೆಯನ್ನು ಕರೆದಿದ್ದರು. ಇದರಲ್ಲಿ ಭಾಗವಹಿಸಿದ್ದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಪಕ್ಷದ ನಲುವನ್ನು ಕುರಿತಂತೆ ಈ ಅಂಶಗಳನ್ನು ಪ್ರಸ್ತುತ ಪಡಿಸಿದರು:

1. ಭಾರತ–ಚೀನಾ ವಾಸ್ತವಿಕ ಹತೋಟಿ ರೇಖೆಗುಂಟ ಲಡಾಖ್ ನ ಗಲ್ವಾನ್ ಕಣಿವೆಯಲ್ಲಿ ನಡೆದ ಇತ್ತೀಚಿನ ಘರ್ಷಣೆಯಲ್ಲಿ ನಮ್ಮ ಸೇನಾಧಿಕಾರಿಗಳು ಮತ್ತು ಸೈನಕರ ಸಾವಿಗೆ ಸಿಪಿಐ(ಎಂ) ಆಳವಾದ ಸಂತಾಪವನ್ನು ವ್ಯಕ್ತಪಡಿಸುತ್ತದೆ.

2. ನಮ್ಮ ವಿದೇಶಾಂಗ ವ್ಯವಹಾರಗಳ ಮಂತ್ರಿಗಳು ಮತ್ತು ಚೀನಾದ ವಿದೇಶ ಮಂತ್ರಿಗಳ ನಡುವಿನ ಮಾತುಕತೆಗಳಲ್ಲಿ ನಮ್ಮ ಅಧಿಕೃತ ಹೇಳಿಕೆ ಹೀಗನ್ನುತ್ತದೆ: "ಚರ್ಚೆಯನ್ನು ಕೊನೆಗೊಳಿಸುತ್ತ ಒಟ್ಟಾರೆ ಪರಿಸ್ಥಿತಿಯನ್ನು ಒಂದು ಜವಾಬ್ದಾರಿಯುತ ರೀತಿಯಲ್ಲಿ ನಭಾಯಿಸಲಾಗುವುದು, ಮತ್ತು ಎರಡೂ ಕಡೆಯವರು ಜೂನ್6 ರ ಘರ್ಷಣೆಯಿರದಂತೆ ಮಾಡುವ ತಿಳುವಳಿಕೆಯನ್ನು ಜಾರಿಗೊಳಿಸುತ್ತವೆ ಎಂದು ಒಪ್ಪಲಾಗಿದೆ. ಯಾವುದೇ ಕಡೆಯವರು ವಿಷಯಗಳನ್ನು ಉಲ್ಬಣಗೊಳಿಸುವ ಯಾವುದೇ ಕ್ರಿಯೆಯನ್ನು ಕೈಗೊಳ್ಳುವುದಿಲ್ಲ, ಬದಲಿಗೆ, ದ್ವಿಪಕ್ಷೀಯ ಒಪ್ಪಂದಗಳು ಮತ್ತು ನಯಮಗಳ ಪ್ರಕಾರ ಶಾಂತಿ ಮತ್ತು ಪ್ರಶಾಂತತೆಯನ್ನು ಖಾತ್ರಿಪಡಿಸುತ್ತವೆ."

3. ಭಾರತ ಸರಕಾರ ಈ ನಲುವನ್ನು ತಳೆದಿರುವುದರಿಂದ, ಸಿಪಿಐ(ಎಂ) ಇದಕ್ಕೆ ಬೆಂಬಲ ಸೂಚಿಸುತ್ತದೆ.

4. ಇದನ್ನನುಸರಿಸಿ, ಭಾರತ ಸರಕಾರ ಉನ್ನತ ಮಟ್ಟದ ಮಾತುಕತೆಗಳನ್ನು ಆರಂಭಿಸಬೇಕು, ಈ ಮೂಲಕ ಗಡಿಯಲ್ಲಿ ಶಾಂತಿ ಮತ್ತು ಪ್ರಶಾಂತತೆಯನ್ನು ಕಾಯ್ದುಕೊಳ್ಳಲು ವಾಸ್ತವಿಕ ಹತೋಟಿ ರೇಖೆಯನ್ನು ಸ್ಪಷ್ಟವಾಗಿ ಗುರುತಿಸುವುದೂ ಸೇರಿದಂತೆ ಕ್ರಮಗಳನ್ನು ಕೈಗೊಳ್ಳುವಂತಾಗಬೇಕು.

ಸಿಪಿಐ(ಎಂ)ನ ನಲುವನ್ನು ಕುರಿತಂತೆ ಈ ಅಂಶಗಳನ್ನು ಪ್ರಸ್ತುತ ಪಡಿಸಿದ್ದಲ್ಲದೆ ಕಾಂ. ಸೀತಾರಾಮ್ ಹೇಳಿದ ಇನ್ನು ಕೆಲವು ಅಂಶಗಳು ಹೀಗಿವೆ:

1. ಈ ಸನ್ನಿವೇಶದಲ್ಲಿ ದೇಶ ಮತ್ತು ಜನತೆ ಒಗ್ಗಟ್ಟಿನಿಂದಿರಬೇಕು. ಸರಕಾರ ವಿಭಜನಕಾರಿ ಭಾವನಾತ್ಮಕ ಉದ್ರೇಕಗಳು, ಸುಳ್ಳು ಸುದ್ದಿ ಮುಂತಾದವುಗಳನ್ನು ಕಟ್ಟುನಿಟ್ಟಾಗಿ ತಡೆಯುವದನ್ನು ಖಾತ್ರಿಪಡಿಸಬೇಕು.

2. ಎಪ್ರಿಲ್‌ನಿಂದ ಜೂನ್ ವರೆಗಿನ, 45 ವರ್ಷಗಳ ನಂತರ ಜೀವಗಳನ್ನು ಬಲಿ ತೆಗೆದುಕೊಂಡ ಈ ಘರ್ಷಣೆಗೆ ಕಾರಣವಾದ ಬೆಳವಣಿಗೆಗಳ ಬಗ್ಗೆ ತಿಳಿಸಲಾಗುವುದು ಎಂದು ನಾವು ಆಶಿಸಿದ್ದೆವು. ಇದು ಸಂಭವಿಸಲಿಲ್ಲ.

3. ನಮ್ಮ ಸೈನಕರ ಜೀವಗಳನ್ನು ಉಳಿಸಬಹುದಿತ್ತೇ. ಲೋಪಗಳು, ಗೂಢಚರ್ಯೆ ವಿಫಲತೆ ಇತ್ಯಾದಿ ಪ್ರಶ್ನೆಗಳನ್ನು ಎತ್ತಲಾಗಿದೆ. ಕಾರ್ಗಿಲ್ ನಂತರ ವಾಜಪೇಯಿ ಸರಕಾರ ಲೋಪಗಳನ್ನು ಪರೀಕ್ಷಿಸಲು ಮತ್ತು ಸಶಸ್ತ್ರ ಪಡೆಗಳನ್ನು ಆಧುನೀಕರಿಸುವ ಬಗ್ಗೆ ಕ್ರಮಗಳನ್ನು ಸೂಚಿಸಲು ಕೆ.ಸುಬ್ರಮಣ್ಯಂ ಸಮಿತಿಯನ್ನು ನೇಮಿಸಿತ್ತು. ಇಂತಹ ಯಾವುದಾದರೂ ಯೋಚನೆ ಇದೆಯೇ?

4. ಭಾರತ ಜಗತ್ತಿಗೆ 'ಪಂಚಶೀಲ' ಕೊಟ್ಟಿದೆ ಮತ್ತು ಒಂದು ಸ್ವತಂತ್ರ ವಿದೇಶಾಂಗ ಧೋರಣೆಯನ್ನು ಅನುಸರಿಸಿದೆ. ಇದಕ್ಕೆ ಕಟ್ಟುನಿಟ್ಟಾಗಿ ಬದ್ಧರಾಗಬೇಕು.

ಅಂತರಂಗ ಶೋಧನೆಯ ಪ್ರಮುಖ ಅಂಶವೆಂದರೆ ನಮ್ಮ ಸೈನಕರ ಅಮೂಲ್ಯ ಜೀವಗಳನ್ನು ಉಳಿಸಲು ನಾವು ಏನು ಮಾಡಬಹುದಿತ್ತು ಎಂಬುದು. ಎಪ್ರಿಲ್ ಮತ್ತು ಜೂನ್ 2020ರ ನಡುವೆ ಏನು ಸಂಭವಿಸಿತು ಎಂಬುದನ್ನು ತಿಳಿಸಲಾಗುವುದು ಎಂದು ನಾವು ನರೀಕ್ಷಿಸಿದ್ದೆವು. ಸರ್ವಪಕ್ಷ ಸಭೆಯಲ್ಲಿ ಇದು ಕಾಣಬರಲಿಲ್ಲ.

ನಮ್ಮ ಪ್ರದೇಶದೊಳಕ್ಕೆ ಯಾರೂ ಅತಿಕ್ರಮಿಸಿಲ್ಲ, ಯಾವುದೇ ನೆಲೆಯನ್ನು ವಶಪಡಿಸಿಕೊಂಡಿಲ್ಲ ಎಂದು ಪ್ರಧಾನ ಮಂತ್ರಿ ಮೋದಿ ಸರ್ವಪಕ್ಷ ಸಭೆಯಲ್ಲಿ ಹೇಳಿರುವುದಾಗಿ ವರದಿಯಾಗಿದೆ.

"ಹಾಗಿದ್ದರೆ ಘರ್ಷಣೆಯಿಲ್ಲ? ನಮ್ಮ ವೀರ ಸೈನಕರು ಹುತಾತ್ಮರಾಗಿದ್ದೇಕೆ? ಈ ಸರ್ವಪಕ್ಷ ಸಭೆ ಏಕೆ?" ಎಂದು ಸೀತಾರಾಮ್ ಯೆಚುರಿ ಟಿಪ್ಪಣಿ ಮಾಡಿದ್ದಾರೆ.




ಕೇರಳದ ಆರೋಗ್ಯ ಮಂತ್ರಿಗೆ ವಿಶ್ವಸಂಸ್ಥೆಯ ಗೌರವ

ಕೇರಳದ ಆರೋಗ್ಯ ಮಂತ್ರಿ ಕೆ.ಕೆ.ಶೈಲಜಾರವರನ್ನು ಜೂನ್ 24ರಂದು ವಿಶ್ವ ಸಂಸ್ಥೆ ಗೌರವಿಸಿದೆ. ಅವರನ್ನು ವಿಶ್ವಸಂಸ್ಥೆ ಸಾರ್ವಜನಿಕ ಸೇವಾ ದಿನದಂದು ಕೊರೊನ ವೈರಸ್ ವಿರುದ್ಧ ಕೇರಳದ ಹೋರಾಟದ ಬಗ್ಗೆ ಮಾತಾಡಲು ಆಹ್ವಾನಿಸಲಾಯಿತು. ಪರಿಣಿತರ ಪ್ರಕಾರ ಆರಂಭದಲ್ಲಿ ವೈರಸ್ ಹಾವಳಿ ಭುಗಿಲೆದ್ದಾಗ ತೀವ್ರ ತಪಾಸಣೆ, ಸಂಪರ್ಕ ಪತ್ತೆ ಮತ್ತು ಕ್ವಾರಂಟೈನ್ ಈ ಮಾರಣಾಂತಿಕ ವೈರಸ್‌ನ ಹರಡಿಕೆಯನ್ನು ನಿಧಾನಗೊಳಿಸಲು ನೆರವಾಯಿತು. ಈಗ ಮಹಾರಾಷ್ಟ್ರ ಮುಂತಾದ ರಾಜ್ಯಗಳು ಶೈಲಜಾರವರ ಸಲಹೆ ಪಡೆಯುತ್ತಿವೆ. ಕೇರಳದ ಆರೋಗ್ಯ ಮಂತ್ರಿಯಾಗಿ ಶೈಲಜಾ ಟೀಚರ್ ಈ ಅವಧಿಯಾದ್ಯಂತ ವಿಡಿಯೋ ಕರೆಗಳ ಮೂಲಕ ಆರೋಗ್ಯ ಕಾರ್ಯಕರ್ತರೊಂದಿಗೆ ನೇರ ಸಂಪರ್ಕ ದಲ್ಲಿರುತ್ತಿದ್ದರು.

ವಿಶ್ವಸಂಸ್ಥೆ ಪ್ರತಿ ವರ್ಷ ಜೂನ್ 23 ರಂದು ಜಗತ್ತಿನಾದ್ಯಂತ ಸಾರ್ವಜನಿಕ ಸೇವೆಯಲ್ಲಿ ತೊಡಗಿರುವವರನ್ನು ಗೌರವಿಸಲು ವಿಶ್ವ ಸಾರ್ವಜನಿಕ ಸೇವಾ ದಿನಾಚರಣೆ ನಡೆಸುತ್ತದೆ.



ಅರ್ಥವ್ಯವಸ್ಥೆ ಪಾತಾಳಕ್ಕೆ ಷೇರುಮಾರುಕಟ್ಟೆ ಆಕಾಶಕ್ಕೆ



ಷೇರು ಮಾರುಕಟ್ಟೆಯು ಅರ್ಥವ್ಯವಸ್ಥೆಯ ಕೈಗನ್ನಡಿ ಎಂಬುದಾಗಿ ಹೇಳುತ್ತಿದ್ದ ಮಾತು ಕೇವಲ ಬುರುಡೆ ಎಂಬುದು ಕೊನೆಗೂ ಬಯಲಾಗಿದೆ. ಹಣ–ಸಂಬಂಧಿತ ನೀತಿಯು ಈಗ ಅರ್ಥವ್ಯವಸ್ಥೆಯ ಸಂಕಷ್ಟಗಳಿಂದಾಗಿ ಹಣಕಾಸು ಮಾರುಕಟ್ಟೆಗಳಲ್ಲಿ ಯಾವುದೇ ಕುಸಿತ ಉಂಟಾಗದಂತೆ ನೋಡಿಕೊಳ್ಳುತ್ತದೆ. ಮೇಲಾಗಿ, ವಿತ್ತೀಯ ನೀತಿಯ ಬಳಕೆಯನ್ನು ತಳ್ಳಿಹಾಕಿರುವ ಕಾರಣದಿಂದಾಗಿ, ನವ ಉದಾರವಾದಿ ಆಳ್ವಿಕೆಯೊಳಗೆ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಏಕೈಕ ಮಾರ್ಗವೆಂದರೆ, ಷೇರು ಮಾರುಕಟ್ಟೆ ಬೀಳದಂತೆ ನೋಡಿಕೊಳ್ಳುವುದು. ಆದರೆ ಹಣ–ಸಂಬಂಧಿತ ನೀತಿಯು ಕಾರ್ಪೊರೇಟ್–ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ರಕ್ಷಿಸಲು ಮಾತ್ರ ಸೀಮಿತಗೊಂಡಿರುವುದನ್ನು ಭಾರೀ ನಿರುದ್ಯೋಗ ಮತ್ತು ತೀವ್ರ ಸಂಕಷ್ಟಗಳಿಂದ ನರಳುತ್ತಿರುವ ದುಡಿಯುವ ಜನರು ಪ್ರತಿಭಟಿಸುತ್ತಾರೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ. ನಾಗರಾಜ್

ಅಮೇರಿಕಾದಲ್ಲಿ ವಿಚಿತ್ರಗಳು ನಡೆಯುತ್ತಿವೆ. ಕರೋನಾ ಸೋಂಕಿನಂದ ಸಾಯುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಲೇ ಇದೆ. ನಾಲ್ಕು ಕೋಟಿಗೂ ಹೆಚ್ಚು ಜನರು ನಿರುದ್ಯೋಗ ಭತ್ಯೆ ಕೋರಿ ಅರ್ಜಿ ಹಾಕಿದ್ದಾರೆ. ಇದು, ಅಲ್ಲಿ ಅರ್ಥ ವ್ಯವಸ್ಥೆಯು ಕುಸಿದಿದೆ ಎಂಬುದರ ಪ್ರತೀಕ. ಅಲ್ಲಿ ತಾಂಡವವಾಡುತ್ತಿರುವ ಜನಾಂಗೀಯ ದ್ವೇಷದ ವಿರುದ್ಧ ಸಾವಿರಾರು ಮಂದಿ ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಚೀನಾ–ಅಮೇರಿಕಾ ಸಂಬಂಧಗಳು ಹಳಸಿವೆ. ತತ್ವಜ್ಞಾನಿ ಕಾರ್ನೆಲ್ ವೆಸ್ಟ್ ಹೇಳುವಂತೆ, ಅಮೆರಿಕವು ಒಂದು "ವಿಫಲವಾದ ಸಾಮಾಜಿಕ ಪ್ರಯೋಗ" ಎಂಬುದನ್ನು ಎಲ್ಲ ಕುರುಹುಗಳೂ ಸ್ಪಷ್ಟಪಡಿಸುತ್ತವೆ.ಇಷ್ಟೆಲ್ಲಾ ಆದರೂ, ಅಲ್ಲಿನ ಷೇರು ಮಾರುಕಟ್ಟೆ ಮಾತ್ರ ಮೇಲೆ ಮೇಲೆ ಹೋಗುತ್ತಲೇ ಇದೆ. ನ್ಯೂಯಾರ್ಕ್‌ನಲ್ಲಿರುವ ವಿಶ್ವದ ಅತಿ ದೊಡ್ಡ ಷೇರು ಮಾರುಕಟ್ಟೆ (ನಾಸ್ಡಾಕ್) ಸೂಚ್ಯಂಕವು ಮಾರ್ಚ್ 23ರ ನಂತರ ಶೇ.40ಕ್ಕಿಂತ ಹೆಚ್ಚಿನ ಏರಿಕೆ ಕಂಡಿದೆ ಮತ್ತು ಈಗ ಅದು "ಸಾರ್ವಕಾಲಿಕ ಗರಿಷ್ಟ ಮಟ್ಟವನ್ನು ಮುಟ್ಟಲು ಕೈ ಅಳತೆ ದೂರದಲ್ಲಿದೆ" ಎಂದು ಒಬ್ಬ ವ್ಯಾಖ್ಯಾನಕಾರರು ಹೇಳುತ್ತಾರೆ.



ಷೇರು ಮಾರುಕಟ್ಟೆಯು ಅರ್ಥವ್ಯವಸ್ಥೆಯ ಕೈಗನ್ನಡಿ ಎಂಬುದಾಗಿ ಹೇಳುತ್ತಿದ್ದ ಮಾತು ಕೇವಲ ಬುರುಡೆ ಎಂಬುದು ಕೊನೆಗೂ ಬಯಲಾಗಿದೆ. ಈ ಅಭಿಪ್ರಾಯವನ್ನು ಕೆಲವರು ವಿರೋಧಿಸುತ್ತಾರೆ. ಷೇರು ಮಾರುಕಟ್ಟೆ ಮತ್ತು ಅರ್ಥ ವ್ಯವಸ್ಥೆಗಳು ಬೇರೆ ಬೇರೆ ದಿಕ್ಕಿನಲ್ಲಿ ಸಾಗುತ್ತಿರುವುದು ಕೇವಲ ಒಂದು ತಾತ್ಕಾಲಿಕ ವಿದ್ಯಮಾನ ಎಂಬುದು ಅವರ ವಾದ. ಅರ್ಥವ್ಯವಸ್ಥೆಯು ಚೇತರಿಸಿಕೊಳ್ಳದಿದ್ದರೆ ಮಾತ್ರ ಳೇರು ಮಾರುಕಟ್ಟೆ "ಗುಳ್ಳೆ" ಒಡೆಯುತ್ತದೆ ಎಂಬ ಅವರ ಅಭಿಪ್ರಾಯವು ನವ ಉದಾರವಾದಿ ಅರ್ಥವ್ಯವಸ್ಥೆಯ ಕೆಲವು ನಿರ್ದಿಷ್ಟ ಲಕ್ಷಣಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಹಣಕಾಸು ಬಂಡವಾಳದ ಯಜಮಾನಿಕೆಯೇ ನವ ಉದಾರವಾದಿ ಅರ್ಥವ್ಯವಸ್ಥೆಯ ಪ್ರಮುಖ ಲಕ್ಷಣ.

ನವ ಉದಾರ ಅರ್ಥವ್ಯವಸ್ಥೆಯಲ್ಲಿ ವಿತ್ತೀಯ ಕೊರತೆಯ (ಫಿಸ್ಕಲ್ ಡೆಫಿಸಿಟ್–ಕೊರತೆ ಬಜೆಟ್) ಮೇಲೆ ಒಂದು ಗರಿಷ್ಟ ಮಿತಿಯನ್ನು ಹೇರಲಾಗಿದೆ. ಬಂಡವಾಳಗಾರರ ಮೇಲೆ ಹಾಕುವ ತೆರಿಗೆಯ ದರವನ್ನು ಅತ್ಯಂತ ಕೆಳಮಟ್ಟದಲ್ಲಿಡಲಾಗಿದೆ. ಕಾರ್ಪೊರೇಟ್‌ಗಳ ಮೇಲೆ ಹಾಕುವ ತೆರಿಗೆಯ ದರವೂ ಸಹ ಹಿಂದಿನ ವರ್ಷಗಳಿಗಿಂತ ಕೆಳಮಟ್ಟದಲ್ಲಿದೆ. ಈ ಎಲ್ಲ ಕಾರಣಗಳಿಂದಾಗಿ, ಆರ್ಥಿಕ ಹಿಂಜರಿತದಿಂದ ಹೊರಬರಲು ವಿತ್ತೀಯ ನೀತಿಯನ್ನು ಒಂದು ಸಾಧನವಾಗಿ ಬಳಸುವುದನ್ನು ತಳ್ಳಿಹಾಕಲಾಗಿದೆ. ಆದ್ದರಿಂದ, ಈ ಹೊಣೆಗಾರಿಕೆಯನ್ನು ಹಣ–ಸಂಬಂಧಿತ(ಮಾನೆಟರಿ) ನೀತಿಯ ಮೂಲಕವೇ ನಿಭಾಯಿಸಬೇಕಾಗುತ್ತದೆ. ಹಾಗಾಗಿ, ಹಣ-ಸಂಬಂಧಿತ ನೀತಿಯು ಹೊಸದೊಂದು ರೀತಿಯಲ್ಲಿ ಕೆಲಸಮಾಡಿ ನಿರೀಕ್ಷಿತ ಫಲಿತಾಂಶ ಕೊಡಬಹುದು ಎಂಬ ನಿರೀಕ್ಷೆ ಇದೆ. ಹಾಗಾಗಿ ಅದನ್ನು ಹೊಸ ಹೊಸ ರೀತಿಯಲ್ಲಿ ಬಳಸುವ ಪ್ರಯತ್ನಗಳು ನಡೆಯುತ್ತಿವೆ.


ಹಣ-ಸಂಬಂಧಿತ ನೀತಿಯ ಬಗ್ಗೆ ಪಠ್ಯಪುಸ್ತಕಗಳು ತಿಳಿಸುವುದೇನೆಂದರೆ, ಅದು, ಅಂತಿಮವಾಗಿ, ಬಡ್ಡಿ ದರಗಳನ್ನು ಇಳಿಸುತ್ತದೆ. ಅಂದರೆ, ಸಂಸ್ಥೆಗಳ ಸಾಲದ ಭಾರ ಕಡಿಮೆಯಾಗುತ್ತದೆ. ಬಡ್ಡಿಯ ಇಳಿಕೆಯಿಂದಾಗಿ, ಲಾಭವೇ ಇಲ್ಲದ ಯೋಜನೆಗಳು ಸ್ವಲ್ಪ ಮಟ್ಟಿಗೆ ಲಾಭದಾಯಕವಾಗುತ್ತವೆ. ಹಾಗಾಗಿ, ಉತ್ಪಾದನೆ, ನಿರ್ಮಾಣ ಮುಂತಾದ ವಲಯಗಳಲ್ಲಿ ಹೂಡಿಕೆಗಳು ಹೆಚ್ಚುತ್ತವೆ. ಅದೇ ರೀತಿಯಲ್ಲಿ, ಸಾಲಗಳು ಅಗ್ಗವಾಗುವುದರಿಂದ ಗೃಹೋಪಯೋಗಿ ವಸ್ತುಗಳ ಬಳಕೆ ಹೆಚ್ಚುತ್ತದೆ. ಆ ಮೂಲಕ ಒಟ್ಟಾರೆ ಬೇಡಿಕೆ ಹೆಚ್ಚುತ್ತದೆ. ಅದರಿಂದಾಗಿ ಉತ್ಪಾದನೆ ಮತ್ತು ಉದ್ಯೋಗಾವಕಾಶಗಳು ಹೆಚ್ಚುತ್ತವೆ.

ಆದರೆ, ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ಹಣ-ಸಂಬಂಧಿತ ನೀತಿಯು ಪಠ್ಯಪುಸ್ತಕಗಳು ಹೇಳುವ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸಮಾಡುವುದಿಲ್ಲ. ಅದಕ್ಕೂ ಹಿಂದೆ, ಸಾಲಗಳು ಸುಲಭವಾಗಿ ದೊರೆಯುತ್ತಿದ್ದ ಕಾಲದಲ್ಲಿಯೂ ಸಹ ಬೇಡಿಕೆಯು ಸ್ವಲ್ಪ ಮಟ್ಟಿಗೆ ಮಾತ್ರವೇ ಹೆಚ್ಚುತ್ತಿತ್ತು. ಹಾಗಾಗಿ, ಕಡಿಮೆ ಬಡ್ಡಿ ಮತ್ತು ಸುಲಭವಾಗಿ ದೊರೆಯುವ ಸಾಲಗಳ ಮೂಲಕವೇ ಆರ್ಥಿಕ ಹಿಂಜರಿತದಿಂದ ಹೊರಬರುವುದು ಸಾಧ್ಯವಿಲ್ಲ. ಏಕೆಂದರೆ, ಹೂಡಿಕೆಯು ಮಾರುಕಟ್ಟೆಯ ನಿರೀಕ್ಷಿತ ಬೆಳವಣಿಗೆಯನ್ನು ಅವಲಂಬಿಸುತ್ತದೆ. ಹಾಗಾಗಿ, ಸಾಲಗಳು ಸುಲಭವಾಗಿ ಲಭ್ಯವಾಗುವ ಕಾರಣದಿಂದ ಆರ್ಥಿಕ ಹಿಂಜರಿತದ ಪರಿಸ್ಥಿತಿಯನ್ನು ಹಿಮ್ಮೆಟ್ಟಿಸಲಾಗದು. ನಿರುದ್ಯೋಗ ವ್ಯಾಪಕವಾಗಿರುವ ಸನ್ನಿವೇಶದಲ್ಲಿ, ಕಡಿಮೆ ಬಡ್ಡಿಯ ಸಾಲಗಳ ಮೂಲಕವೂ ಗ್ರಾಹಕ ವೆಚ್ಚಗಳು ಹೆಚ್ಚುವುದಿಲ್ಲ. ಏಕೆಂದರೆ, ತಮ್ಮ ಭವಿಷ್ಯದ ಆದಾಯಗಳ ಬಗ್ಗೆ ಜನರಲ್ಲಿ ಅನಿಶ್ಚಿತತೆ–ಆತಂಕ ಇರುತ್ತದೆ.

ಆದ್ದರಿಂದ, ಹಣಕಾಸು ನೀತಿಯ ಬಗ್ಗೆ ಪಠ್ಯ–ಪುಸ್ತಕಗಳು ಕೊಡುವ ವಿವರಣೆಯಲ್ಲಿ ಸತ್ವವಿಲ್ಲ. ಅದು ಪುಸ್ತಕದ ಬದನೆಕಾಯಿ. ತಿನ್ನಲು ಬರುವುದಿಲ್ಲ. ನವ ಉದಾರವಾದಿ ಅರ್ಥವ್ಯವಸ್ಥೆಯಲ್ಲಿ, ಹಣಕಾಸು ನೀತಿಯ ಬಳಕೆಯ ಪರಿಣಾಮಗಳು ಭಿನ್ನ ರೀತಿಯಲ್ಲಿವೆ. ಇತ್ತೀಚಿನ ದಿನಗಳಲ್ಲಿ ಕೇಂದ್ರ ಬ್ಯಾಂಕುಗಳೂ ಸಹ ಹಣ-ಸಂಬಂಧಿತ ನೀತಿಯ ಪರಿಣಾಮವು ವಿಭಿನ್ನವಾಗಿರಬೇಕೆಂದೇ ಬಯಸುತ್ತವೆ. ಹಣ-ಸಂಬಂಧಿತ ನೀತಿಯು ಆಸ್ತಿ ಬೆಲೆ ಗುಳ್ಳೆಗಳನ್ನು ಉತ್ತೇಜಿಸಬೇಕೆಂದು ಕೇಂದ್ರ ಬ್ಯಾಂಕ್‌ಗಳು ಬಯಸುತ್ತವೆ. ಈ ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಹಣ-ಸಂಬಂಧಿತ ನೀತಿಯು, ಪಠ್ಯಪುಸ್ತಕಗಳು ಹೇಳುವ ಹಾಗೆ, ಹಣದ ಹರಿವನ್ನು ನೇರವಾಗಿ ಪ್ರಭಾವಿಸುವುದಿಲ್ಲ. ಆದರೆ ಷೇರುಗಳ ಬೆಲೆಗಳನ್ನು ಪ್ರಭಾವಿಸಿದೆ. ಮತ್ತು, ಸಾಧ್ಯವಾದರೆ, ಆ ಮೂಲಕ ಹಣದ ಹರಿವನ್ನು ಪ್ರಭಾವಿಸುತ್ತದೆ.

ಅಲನ್ ಗ್ರೀನ್‌ಸ್ಪಾನ್ ಅಮೇರಿಕಾದ ಫೆಡರಲ್ ರಿಸರ್ವ್ ಬೋರ್ಡ್‌ನ (ಅಮೇರಿಕಾದ ಕೇಂದ್ರ ಬ್ಯಾಂಕ್) ಅಧ್ಯಕ್ಷರಾಗಿದ್ದಾಗ, "ಡಾಟ್–ಕಾಂ ಗುಳ್ಳೆ" ಸಿಡಿದ ನಂತರ ಬಡ್ಡಿ ದರಗಳನ್ನು ಇಳಿಸಲಾಗಿತ್ತು. ಈ ಕ್ರಮವು ಉದ್ದೇಶ ಪೂರ್ವಕವಾಗಿತ್ತೊ, ಇಲ್ಲವೋ, ಅದು "ಗೃಹ ಆಸ್ತಿ ಗುಳ್ಳೆ" ("ಹೌಸಿಂಗ್ ಬಬಲ್") ಯನ್ನಂತೂ ಎಬ್ಬಿಸಿತ್ತು. ಆ ಮೂಲಕ ಹೊಸದೊಂದು ಆರ್ಥಿಕ ತೇಜಿ (ಆರ್ಥಿಕ ಚಟುವಟಿಕೆಗಳ ಉತ್ಕರ್ಷ) ಆರಂಭವಾಗಿತ್ತು. ಅಂದಿನಿಂದಲೂ ಬಡ್ಡಿ ದರ ಇಳಿಕೆಯ ಕ್ರಮವು ಒಂದು ಅಂಗೀಕೃತ ಮತ್ತು ಅನುಕರಣೀಯ ಮಾದರಿಯೇ ಆಗಿಬಿಟ್ಟಿದೆ. ಈಗಂತೂ ಷೇರು ಮಾರುಕಟ್ಟೆ ಕೆಳಗೆ ಬೀಳದಂತೆ ನೋಡಿಕೊಳ್ಳಲು ಹಣ-ಸಂಬಂಧಿತ ನೀತಿಯನ್ನು ನೇರವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ಬಳಸಲಾಗುತ್ತಿದೆ. ಈಗ ಅದು ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ಉತ್ತೇಜಿಸುವ ಒಂದು ಸಾಧನವೇ ಆಗಿಬಿಟ್ಟಿದೆ. ಹಣ–ಸಂಬಂಧಿತ ನೀತಿಯು ಈಗ ಲಾಭದಾಯಕತೆಯನ್ನು ನೈಜ ಅರ್ಥವ್ಯವಸ್ಥೆಯಿಂದ ಬೇರ್ಪಡಿಸಿದೆ ಮತ್ತು ಅರ್ಥವ್ಯವಸ್ಥೆಯ ಸಂಕಷ್ಟಗಳಿಂದಾಗಿ ಹಣಕಾಸು ಮಾರುಕಟ್ಟೆಗಳಲ್ಲಿ ಯಾವುದೇ ಕುಸಿತ ಉಂಟಾಗದಂತೆ ನೋಡಿಕೊಳ್ಳುತ್ತದೆ. ಮೇಲಾಗಿ, ವಿತ್ತೀಯ ನೀತಿಯ ಬಳಕೆಯನ್ನು ತಳ್ಳಿಹಾಕಿರುವ ಕಾರಣದಿಂದಾಗಿ, ನವ ಉದಾರವಾದಿ ಆಳ್ವಿಕೆಯೊಳಗೆ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಏಕೈಕ ಮಾರ್ಗವೆಂದರೆ, ಷೇರು ಮಾರುಕಟ್ಟೆ ಬೀಳದಂತೆ ನೋಡಿಕೊಳ್ಳುವುದು.

ಇದು ಹಣಕಾಸು ಬಂಡವಾಳದ ಅತ್ಯುನ್ನತ ವಿಜಯದ ಪ್ರತೀಕವಾಗಿದೆ. ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಸಲುವಾಗಿ ಸರ್ಕಾರವು ಯಾವುದೇ ವಿತ್ತೀಯ ಕ್ರಮಗಳ ಮೂಲಕ ಮಧ್ಯಪ್ರವೇಶ ಮಾಡುವುದನ್ನು ಹಣಕಾಸು ಬಂಡವಾಳವು ವಿರೋಧಿಸುತ್ತದೆ. ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ಹಣ-ಸಂಬಂಧಿತ ನೀತಿಯನ್ನೇ ಅವಲಂಬಿಸುವಂತೆ ಹಣಕಾಸು ಬಂಡವಾಳವು ಸರ್ಕಾರದ ಮೇಲೆ ಒತ್ತಾಯ ಹಾಕುತ್ತದೆ. ಇಂತಹ ಒಂದು ಅರ್ಥವ್ಯವಸ್ಥೆಯಲಿ ಹಣ-ಸಂಬಂಧಿತ ನೀತಿಯು ಪರಿಣಾಮಕಾರಿಯಾಗಿ ಕೆಲಸ ಮಾಡಬಹುದಾದ ಒಂದೇ ಒಂದು ವಿಧಾನವೆಂದರೆ, ಆಸ್ತಿ–ಬೆಲೆ ಗುಳ್ಳೆಯನ್ನು ಸೃಷ್ಟಿಸುವುದು. ಹಣಕಾಸು



ಬಂ[illegible]ಕೃಪೆ: ಸತೀಶ್ ಆಚಾರ್ಯ

ರೀತಿಯಲ್ಲೂ ತೃಪ್ತಿಪಡಿಸುವ ಸಲುವಾಗಿಯೇ ಈ ಆಸ್ತಿ–ಬೆಲೆ ಗುಳ್ಳೆಯನ್ನು ಎಬ್ಬಿಸಲಾಗುತ್ತದೆ.

ಆಸ್ತಿ–ಬೆಲೆ ಗುಳ್ಳೆ ಸೃಷ್ಟಿಸುವುದೇ ಈಗ ಅಮೇರಿಕಾದ ಫೆಡರಲ್ ರಿಸರ್ವ್ ಬೋರ್ಡ್(ಫೆಡ್)ನ ಅಧಿಕೃತ ನೀತಿಯಾಗಿದೆ. ಅದು, ಬಡ್ಡಿ ದರಗಳನ್ನು ಸೊನ್ನೆಯ ಮಟ್ಟಕ್ಕೆ ಇಳಿಸಿದೆ. ಕೇವಲ ಸರ್ಕಾರಿ ಬಾಂಡ್‌ಗಳನ್ನು ಮಾತ್ರವಲ್ಲದೆ ಎಲ್ಲಾ ಖಾಸಗಿ ಬಾಂಡ್‌ಗಳನ್ನೂ ಬ್ಯಾಂಕುಗಳಿಂದ ಮಾತ್ರವಲ್ಲದೆ ಮಾರುಕಟ್ಟೆಯಿಂದಲೂ ಖರೀದಿಸುವ (ಮಿತಿಯಿಲ್ಲದೆ ಪರಿಮಾಣಾತ್ಮಕವಾಗಿ ಹಣ ಒದಗಿಸುವುದು) ಇಂಗಿತವನ್ನು ಫೆಡ್ ವ್ಯಕ್ತಪಡಿಸಿದೆ. ಕಾರ್ಪೊರೇಟ್‌ಗಳಿಗೆ ಸಾಲ ಒದಗಿಸುವುದಕ್ಕೂ ಮತ್ತು ಅವುಗಳಿಗೆ ಹಳೆಯ ಸಾಲ ತೀರಿಸುವುದಕ್ಕಾಗಿ ಒಂದು ಹೊಸ ಸಾಲ ಒದಗಿಸುವ ಇಚ್ಛೆಯನ್ನು ಫೆಡ್ ವ್ಯಕ್ತಪಡಿಸಿದೆ. ಷೇರುಗಳ ಬೆಲೆ ಕುಸಿತವನ್ನು ತಡೆಯಲು ಮಾರುಕಟ್ಟೆಯಲ್ಲಿ ತಾನು ಮಧ್ಯಪ್ರವೇಶಿಸುವ ಇಚ್ಛೆಯನ್ನೂ ಅದು ಪ್ರಕಟಿಸಿದೆ. ಅಂದರೆ, ಷೇರು ಮಾರುಕಟ್ಟೆಯ ತೇಜಿಯ (ಬೂಮ್) ಪರಿಸ್ಥಿತಿಯನ್ನು ಸದಾ ಕಾಲ ಉಳಿಸಿಕೊಳ್ಳಲು ಫೆಡ್ ಈಗ ತೊಡಗಿದೆ. ಒಂದು ನಿರ್ದಿಷ್ಟ ಮಟ್ಟಕ್ಕಿಂತ ಕೆಳಗೆ ಇಳಿಯುವುದಿಲ್ಲ ಎಂಬ ಖಾತರಿ ಇರುವ ಷೇರುಗಳನ್ನು ಖರೀದಿಸಲು ಯಾರಿಗಾದರೂ ಶೂನ್ಯ ಮಟ್ಟದ ಬಡ್ಡಿಯಲ್ಲಿ ಸಾಲ ಪಡೆಯುವುದು ಸಾಧ್ಯವಾದರೆ, ಅಂತಹ ವ್ಯಕ್ತಿಯು ಅದನ್ನು ಯಾಕೆ ಮಾಡಬಾರದು? ಷೇರುಗಳ ಬೆಲೆಗಳಿಗೂ ಮತ್ತು ಅರ್ಥವ್ಯವಸ್ಥೆಗೂ ಇರುವ ಸಂಬಂಧವನ್ನು, ಫೆಡ್‌ನ ನೀತಿಯು ಸಂಪೂರ್ಣವಾಗಿ ಕತ್ತರಿಸಿ ಹಾಕುತ್ತದೆ. ಅಂದರೆ, ನೈಜ ಅರ್ಥವ್ಯವಸ್ಥೆ ಕುಸಿದು ಬಿದ್ದರೂ ಸಹ ಳೇರು ಬೆಲೆಗಳು ಕುಸಿಯುವುದಿಲ್ಲ. ಏಕೆಂದರೆ, ಷೇರು ಬೆಲೆಗಳು ಒಂದು ಮಟ್ಟಕ್ಕಿಂತ ಕೆಳಗೆ ಇಳಿಯದಂತೆ ಫೆಡ್ ನೋಡಿಕೊಳ್ಳುತ್ತದೆ.

ಇಂತಹ ನೀತಿ–ನಿಲುವೆಯಲ್ಲಿ ಹಲವಾರು ತೊಡಕುಗಳಿವೆ. ಮೊದಲನೆಯದಾಗಿ, ಪ್ರಸಕ್ತ ಸನ್ನಿವೇಶದಲ್ಲಿ, ಷೇರು ಮಾರುಕಟ್ಟೆಯಲ್ಲಿ ಒಂದು ತೇಜಿಯನ್ನು ಉತ್ತೇಜಿಸುವ ಮೂಲಕ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ಆಗುವುದಿಲ್ಲ. ನಾವು ನೋಡಿರುವ ಹಾಗೆ, ಒಟ್ಟಾರೆ ಬೇಡಿಕೆಯ ಕೊರತೆಯಿಂದಾಗಿಯೇ ಬಂಡವಾಳ ಹೂಡಿಕೆಯು ಕುಂಟುತ್ತಾ ಸಾಗಿದೆ. ಇಂತಹ ಸನ್ನಿವೇಶದಲ್ಲಿ, ಅಗ್ಗದ, ಬಹುತೇಕ ಬಿಟ್ಟಿಯಾಗಿ, ದೊರೆಯುವ ಹಣದಿಂದಲೂ ಕಂಪನಿಗಳು ತಮ್ಮ ಹಾಲಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಮುಂದಾಗುವುದಿಲ್ಲ. ಅಷ್ಟೇ ಅಲ್ಲದೆ, ಹಳೇ ಸಾಲ ತೀರಿಸುವ ಸಲುವಾಗಿಯೇ ಇನ್ನೊಂದು ಹೊಸ ಸಾಲ ಮಾಡಿ ತಮ್ಮ ಒಟ್ಟು ಸಾಲವನ್ನು ಹೆಚ್ಚಿಸಿಕೊಂಡಿರುವ ಕಂಪೆನಗಳು, ಹೂಡಿಕೆಯ ಉದ್ದೇಶಕ್ಕಾಗಿ ಮತ್ತೊಂದು ಸಾಲ ಮಾಡಲು ಹೋಗುವುದಿಲ್ಲ.

ಅದೇ ರೀತಿಯಲ್ಲಿ, ಈಗಾಗಲೇ ಸಾಲದ ಸುಳಿಗೆ ಸಿಲುಕಿದ ಕುಟುಂಬಗಳು ಇನ್ನೂ ಹೆಚ್ಚು ಸಾಲ ಮಾಡಿ ಅದನ್ನು ತಮ್ಮ ಉಪಭೋಗಕ್ಕಾಗಿ ಖರ್ಚು ಮಾಡುವ ಸಾಧ್ಯತೆಗಳೂ ಕಡಿಮೆಯೇ. ಷೇರುಗಳ ಬೆಲೆಗಳನ್ನು ಉನ್ನತ ಮಟ್ಟದಲ್ಲಿಯೇ ಇರುವಂತೆ ನೋಡಿಕೊಂಡಿರುವ ಕಾರಣದಿಂದಾಗಿ, ಬಳಕೆಯು ಉನ್ನತ ಮಟ್ಟದಲ್ಲಿಯೇ ಉಳಿಯುವಂತೆ ನೋಡಿಕೊಳ್ಳಬಹುದಲ್ಲೇ. ಇನ್ನೂ ಹೆಚ್ಚಿನ ಪ್ರಮಾಣದ ಬಳಕೆ ಆಗುವುದು ಕಷ್ಟ. ಆದ್ದರಿಂದ, ಷೇರುಗಳ ಬೆಲೆಗಳು ಉನ್ನತ ಮಟ್ಟದಲ್ಲಿರುವುದರ ಹೊರತಾಗಿಯೂ, ನೈಜ ಅರ್ಥವ್ಯವಸ್ಥೆಯು ಸೊರಗುತ್ತಾ ಹೋಗುತ್ತದೆ.

ಇದೇ ವಿಷಯವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಂದು ತೀವ್ರ ನಿರುದ್ಯೋಗದ ಪರಿಸ್ಥಿತಿಯಿಂದ ಹೊರಬರಬೇಕು ಎಂದಾದರೆ, ಅದಕ್ಕೆ

ಪುಟ 14 ನೋಡಿ

ಅರ್ಥವ್ಯವಸ್ಥೆ ಪಾತಾಳಕ್ಕೆ ಷೇರುಮಾರುಕಟ್ಟೆ ಆಕಾಶಕ್ಕೆ

ಪುಟ 13 ರಿಂದ

ನೆರವಾಗುವ ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವಂತಹ ವಿತ್ತೀಯ ನೀತಿಗೆ ಪರ್ಯಾಯವೇ ಇಲ್ಲ. ಕೋವಿಡ್-19ರ ಪರಿಣಾಮವು ಮರೆಯಾದ ನಂತರ, ಸಧ್ಯದ ತೀರಾ ಎಕ್ಕುಟ್ಟಿ ಹೋಗಿರುವ ಪರಿಸ್ಥಿತಿಯಿಂದ ಸ್ವಲ್ಪ ಮಟ್ಟಿನ ಚೇತರಿಕೆ ಸಾಧ್ಯವಿದೆ. ಕೊರೋನಾ ಸೋಂಕಿನಂದಾಗಿ ಸರ್ಕಾರದ ಖರ್ಚುಗಳು ಹೆಚ್ಚಿವೆ (ವಿತ್ತೀಯ ವಿಸ್ತರಣೆಯಾಗಿದೆ), ನಿಜ. ಅರ್ಥವ್ಯವಸ್ಥೆಯ ಪುನಶ್ಚೇತನದ ದೃಷ್ಟಿಯಲ್ಲಿ ಈ ಸಾಂಕ್ರಾಮಿಕವು ಮರೆಯಾದ ನಂತರವೂ ಸರ್ಕಾರದ ಹೆಚ್ಚುವರಿ ಖರ್ಚುಗಳು ಮುಂದುವರಿಯಬೇಕು.

ಎರಡನೆಯದಾಗಿ, ಅರ್ಥವ್ಯವಸ್ಥೆಯ ಪರಿಸ್ಥಿತಿಯು ತೀರಾ ಹದಗೆಟ್ಟಿರುವ ಸಮಯದಲ್ಲಿ, ಹಣ-ಸಂಬಂಧಿತ ನೀತಿಯ ಬಳಕೆಯ ಮೂಲಕ ಷೇರುಗಳ ಬೆಲೆಗಳನ್ನು ಒಂದು ಉನ್ನತ ಮಟ್ಟದಲ್ಲಿ ಉಳಿಯುವಂತೆ ಕಾಯ್ದುಕೊಳ್ಳುವ ಇಂತಹ ನೀತಿ-ನಿಲುಮೆಯು, ಬಂಡವಾಳಶಾಹಿ ಜಗತ್ತಿನಾದ್ಯಂತ ಒಂದು ವಾಡಿಕೆಯಾಗುತ್ತದೆ. ಈ ನೀತಿಯು ಫೆಡ್‌ನ ಒಂದು ಚಮತ್ಕಾರವೇನಲ್ಲ. ಇದು ಹಣಕಾಸು ಬಂಡವಾಳದ ಆಳ್ವಿಕೆಯಲ್ಲಿ ಅಂತರ್ಗತವಾಗಿದೆ. ಹಾಗಾಗಿ, ಷೇರು ಮಾರುಕಟ್ಟೆಯ ಬೆಲೆಗಳಲ್ಲಿ ಯಾವುದೇ ಕುಸಿತವನ್ನು ತಡೆಯಲು ಉಳಿದ ಕೇಂದ್ರ ಬ್ಯಾಂಕುಗಳೂ ಸಹ ಫೆಡ್ ಮಾದರಿಯನ್ನು ಅನುಸರಿಸುತ್ತವೆ. ಭಾರತದಂತಹ ತೃತೀಯ ಜಗತ್ತಿನ ದೇಶಗಳು ಈ ಮಾದರಿಯನ್ನು ಅನುಸರಿಸಬೇಕಾದ ಒತ್ತಡಕ್ಕೆ ಒಳಗಾಗುತ್ತವೆ. ಏಕೆಂದರೆ, ಭಾರತೀಯ ಷೇರು ಮಾರುಕಟ್ಟೆಯಲ್ಲಿ ಯಾವುದೇ ಕುಸಿತವು ಹಣಕಾಸು ಬಂಡವಾಳವು ಹೊರ ಹರಿಯಲು ಕಾರಣವಾಗುತ್ತದೆ. ಅದರಿಂದಾಗಿ ವಿದೇಶ ವ್ಯಾಪಾರದ ಪಾವತಿ ಶೇಷ(ಬ್ಯಾಲನ್ಸ್ ಆಫ್ ಪೇಮೆಂಟ್)ಸಮಸ್ಯೆಯು ಪರಿಹಾರವು ಕಷ್ಟಕರವಾಗುತ್ತದೆ. ಅಂದರೆ, ಭಾರತದಂತಹ ದೇಶಗಳಲ್ಲಿ, ಹಣಕಾಸು ಬಂಡವಾಳದ ಹೊರಹರಿವು ಸಂಭವಿಸಿದಾಗ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶಕ್ಕೆ ಸೀಮಿತಗೊಳಿಸಿಕೊಳ್ಳುವುದರ ಬದಲು, ಕೇಂದ್ರ ಬ್ಯಾಂಕ್‌ನ (ರಿಸರ್ವ್ ಬ್ಯಾಂಕ್) ಕಾರ್ಯ ವ್ಯಾಪ್ತಿಯು ಈಗ ಷೇರು ಮಾರುಕಟ್ಟೆಗೂ ಚಾಚಿಕೊಳ್ಳುತ್ತದೆ.

ಇಂತಹ ನೀತಿ-ನಿಲುಮೆಗಳು ಅಮೇರಿಕಾದಲ್ಲಿ ಅಥವಾ ಭಾರತದಲ್ಲಿ ಬೆಚ್ಚಗೆ ಅಡಗಿಕೊಳ್ಳದಂತೆ ಯಾರು ತಡೆಯುತ್ತಾರೆ? ದುಡಿಯುವ ಜನರ ಪ್ರತಿರೋಧದಿಂದ ಮಾತ್ರ ಅದು ಸಂಭವಿಸದಂತೆ ತಡೆಯಲು ಸಾಧ್ಯ. ಹಣ-ಸಂಬಂಧಿತ ನೀತಿಯು ಕಾರ್ಪೊರೇಟ್-ಹಣಕಾಸು ಬಂಡವಾಳದ ಹಿತಾಸಕ್ತಿಗಳನ್ನು ರಕ್ಷಿಸಲು ಮಾತ್ರ ಸೀಮಿತಗೊಂಡಿರುವುದನ್ನು ಭಾರೀ ನಿರುದ್ಯೋಗ ಮತ್ತು ತೀವ್ರ ಸಂಕಷ್ಟಗಳಿಂದ ನರಳುತ್ತಿರುವ ದುಡಿಯುವ ಜನರು ಪ್ರತಿಭಟಿಸುತ್ತಾರೆ. ಒಟ್ಟಾರೆ ಬೇಡಿಕೆ ಹೆಚ್ಚಿಸುವ ಮತ್ತು ಆ ಮೂಲಕ ಉದ್ಯೋಗ ಒದಗಿಸಿ ತಮ್ಮ ಸಂಕಷ್ಟಗಳನ್ನು ಕಡಿಮೆ ಮಾಡುವಂತೆ ಸರ್ಕಾರದ ಮಧ್ಯಪ್ರವೇಶಕ್ಕಾಗಿ ಅವರು ಒತ್ತಾಯಿಸುತ್ತಾರೆ. ಇಂತಹ ಬೇಡಿಕೆಗಳು ಹೆಚ್ಚು ಹೆಚ್ಚು ಶಕ್ತಿಯುತವೂ ಮತ್ತು ವ್ಯಾಪಕವೂ ಆಗುತ್ತವೆ. ಆಗ, ಸರ್ಕಾರಗಳು ವಿತ್ತೀಯ ನೀತಿಗಳ ಮೂಲಕ, ವಿಶೇಷವಾಗಿ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಹೆಚ್ಚು ಹೆಚ್ಚು ವೆಚ್ಚಗಳ ಮೂಲಕ, ಮಧ್ಯಪ್ರವೇಶಿಸಬೇಕಾಗುತ್ತದೆ.

ಅಮೇರಿಕಾ ಮತ್ತು ಅನೇಕ ದೇಶಗಳಲ್ಲಿ, ಸಮಾನತೆಯ ಬೇಡಿಕೆಯನ್ನು ಮುಂದಿಟ್ಟು ಜನರು ಈಗಾಗಲೇ ಬೀದಿಗಿಳಿದಿದ್ದಾರೆ. ಭಾರತದಲ್ಲಿಯೂ ದುಡಿಯುವ ಜನರು ಸ್ವಲ್ಪವೇ ಸಮಯದಲ್ಲಿ ಬೀದಿಗಿಳಿಯುತ್ತಾರೆ. ಭಾರತದ ಈಗಿನ ಸರ್ಕಾರವು ಜನರನ್ನು ತೊಂದರೆಗೆ ಈಡು ಮಾಡಿ ಕಾರ್ಪೊರೇಟ್-ಆರ್ಥಿಕ ಹಿತಾಸಕ್ತಿಗಳನ್ನು ಸದಾ ಕಾಲವೂ ಆರೈಕೆ ಮಾಡಬಹುದು ಎಂದು ನಂಬಿದ್ದರೆ ಅದು ಭ್ರಾಂತಿಯಲ್ಲೇ ಬದುಕುತ್ತಿದೆ ಎಂದಾಗುತ್ತದೆ.

ತೆಲಂಗಾಣ ಜನರ ಸಶಸ್ತ್ರ ಹೋರಾಟ

ಪುಟ 11 ರಿಂದ

ಪರಸ್ಪರ ಹೊಂದಾಣಿಕೆ ಸಾಧ್ಯವೇ ಇಲ್ಲ ಅಂತಾದಾಗ ವಿಚ್ಛೇದನ ನೀಡುವ ಹಕ್ಕು ಮತ್ತು ಮರುಮದುವೆ ಮಾಡಿಕೊಳ್ಳುವ ಹಕ್ಕುಗಳನ್ನು ಪಕ್ಷ ಬೆಂಬಲಿಸಿತು. ಅದೇ ಸಮಯದಲ್ಲಿ, ಲೈಂಗಿಕ ಸಂಬಂಧಗಳನ್ನು ಅಥವಾ ಪ್ರಮಾದಗಳನ್ನು ಸನಾತನಗಳ ದೃಷ್ಟಿಯಲ್ಲಿ ಅಥವಾ ಅಪಚಾರ ಎಂಬ ದೃಷ್ಟಿಕೋನದಲ್ಲಿ ಪಕ್ಷ ನೋಡುವುದಿಲ್ಲವಾದರೂ ಅರಾಜಕ ಲೈಂಗಿಕ ವರ್ತನೆಗಳನ್ನು ಪಕ್ಷ ಬೆಂಬಲಿಸುವುದಿಲ್ಲ. ಆದರೆ ತೀರ್ಮಾನ ಮಾಡಿ ಜಾರಿಮಾಡುವುದಕ್ಕಿಂತ ಮುಂಚೆ ಸಂಬಂಧಪಟ್ಟವರಿಗೆ ಮತ್ತು ಸಾರ್ವಜನಿಕರಿಗೆ ಕೂಡ, ಈ ತೀರ್ಮಾನವು ಹೇಗೆ ಕಳಂಕರಹಿತವಾದ ಹಾಗೂ ದಿಟ್ಟ ಬದುಕಿಗೆ ಸಹಾಯಕವಾಗುತ್ತದೆ ಎಂದು ವಿವರಿಸಲಾಗುತ್ತಿತ್ತು. ಅದು ಜನ ಚಳುವಳಿ ಮತ್ತು ಸಾಮಾಜಿಕ ಸಂಬಂಧಗಳ ಉತ್ತಮ ಬೆಳವಣಿಗೆಗೆ ನೆರವಾಯಿತು.

ಮದುವೆ, ವಿಚ್ಛೇದನ ಮತ್ತು ಮರು-ಮದುವೆ ಕುರಿತ ಪ್ರಶ್ನೆಗಳನ್ನು ಮತ್ತು ಬದಲಾಗುತ್ತಿರುವ ಆರ್ಥಿಕ ಮಾದರಿಗಳನ್ನು ಮತ್ತು ಸಾಮಾಜಿಕ ಸಂಬಂಧಗಳನ್ನು ಈ ಚಳುವಳಿಯ ಬೆಳವಣಿಗೆಯೊಂದಿಗೆ ಸಾರ್ವಜನಿಕರ ಮುಂದೆ ಇಡಲಾಯಿತು. ಈ ಹೋರಾಟಗಳಲ್ಲಿ ಹಲವಾರು ಯುವತಿಯರು ತಮ್ಮ ಗಂಡಂದಿರನ್ನು ಕಳೆದುಕೊಂಡಿದ್ದರಿಂದ ಅದೊಂದು ಉತ್ಕಟವಾದ ಹಾಗೂ ತಕ್ಷಣದ ಸಮಸ್ಯೆಯಾಗಿ ಉದ್ಭವಿಸಿತು. ಒಂದು ಹೊಸ ನೈತಿಕ ಸಂಹಿತೆಗೆ ಪಕ್ಷವು ಮಹತ್ವ ನೀಡಿತು: ಒಂದು ಸಹಜ ಜೀವನ ನಡೆಸುವ ಸಲುವಾಗಿ ಮತ್ತು ಆ ಮೂಲಕ ಜನ ಚಳುವಳಿಗೆ ನೆರವಾಗುವ ದೃಷ್ಟಿಯಿಂದ ಹೆಣ್ಣುಮಕ್ಕಳು ಮರುಮದುವೆಯಾಗುವುದು ಒಳ್ಳೆಯದು ಮತ್ತು ಅದು ಪಾಪದ ಅಥವಾ ನಂಬಿಕೆದ್ರೋಹದ ವಿಷಯವಲ್ಲ ಎಂಬ ವಿಚಾರವನ್ನು ಮನದಟ್ಟುಮಾಡಲಾಯಿತು.

ಹಳ್ಳಿಗಳಲ್ಲಿ ಜಾತಿ ತಾರತಮ್ಯ ಬಹುವಾಗಿ ಪ್ರಚಲಿತವಾಗಿತ್ತು. ಈ ಹೋರಾಟದ ಅವಧಿಯಲ್ಲಿ, ಜನರು ಯಾವುದೇ ಜಾತಿ ಮತಗಳ ಬೇಧವಿಲ್ಲದೇ ಸಾಮೂಹಿಕವಾಗಿ ಅನಿವಾರ್ಯವಾಗಿ ಒಟ್ಟಿಗೇ ಕೆಲಸ ಮತ್ತು ಹೋರಾಟಗಳನ್ನು ಮಾಡಿದ ಕಾರಣ, ಅಸ್ಪೃಶ್ಯತೆಯ ಪಿಡುಗಿನ ವಿರುದ್ಧದ ಹೋರಾಟ ಸುಲಭವಾಯಿತು. ಗೆರಿಲ್ಲಾ ದಳಗಳಲ್ಲಿ ಸಮಾನತೆ ಮತ್ತು ಪರಸ್ಪರ ಗೌರವವನ್ನು ಚಾಚೂ ತಪ್ಪದೇ ಪಾಲಿಸಿದ್ದರಿಂದ ಅದು ಜನರ ಮನೋಭಾವವನ್ನೇ ಬದಲಾಯಿಸಿತು. ದೇವರು, ದೆವ್ವ ಮುಂತಾದವುಗಳ ಬಗೆಗಿನ ನಂಬಿಕೆಗಳು, ವಿಶೇಷವಾಗಿ ಯುವಜನರಲ್ಲಿ ಬಹಳ ಮಟ್ಟಿಗೆ ಕಡಿಮೆಯಾದವು.

ದೊಡ್ಡ ಪ್ರಮಾಣದಲ್ಲಿ ರಾಜಕೀಯ ಪ್ರಚಾರವನ್ನು ಕೊಂಡೊಯ್ಯಲಾಯಿತು. ಗ್ರಾಮ ರಾಜ್ಯಂ ಸಮಿತಿಯಿಂದ ಹಿಡಿದು ಗ್ರಾಮ ದಳ, ಸಂಘಟಕರು ಮತ್ತು ವ್ಯವಸ್ಥಿತ ಗೆರಿಲ್ಲಾ ದಳಗಳು ಹೀಗೆ ಪ್ರತಿಯೊಬ್ಬರೂ ಎಲ್ಲಾ ಸಮಸ್ಯೆಗಳನ್ನು ಸಾಮೂಹಿಕ ಸಭೆಗಳಲ್ಲಿ ವಿವರಿಸುತ್ತಿದ್ದರು. ಇದರ ಜತೆಯಲ್ಲೇ, ಜನಪ್ರಿಯ ಸಾಂಸ್ಕೃತಿಕ ಸಾಧನಗಳನ್ನೂ ಬಳಸುತ್ತಿದ್ದರು. ಗೆರಿಲ್ಲಾ ದಳಗಳು ಜನರ ಮುಂದೆ ತಮ್ಮ ಮಿಲಿಟರಿ ಜ್ಞಾನವನ್ನು ಪ್ರದರ್ಶಿಸುತ್ತಿದ್ದರು, ಸ್ಥಳೀಯ ಪಡೆಗಳು ಪ್ರತಿದಿನ ಮಿಲಿಟರಿ ತರಬೇತಿಯನ್ನು ಪಡೆಯುತ್ತಿದ್ದರು. ಆನರು ಈ ಎಲ್ಲಾ ಕಾರ್ಯಕ್ರಮಗಳನ್ನು ಅತ್ಯಂತ ಆಸಕ್ತಿಯಿಂದ ಮತ್ತು ಉತ್ಸಾಹದಿಂದ ವೀಕ್ಷಿಸುತ್ತಿದ್ದರು. ಕೆಲವೊಮ್ಮೆ, ಅವರ ಉತ್ಸಾಹ ಅವರು ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡುತ್ತಿತ್ತು.

ಶತೃಗಳ ದಾಳಿಗಳು ತುತ್ತ ತುದಿ ಮುಟ್ಟಿದ್ದಾಗಲೂ, ವಯಸ್ಕರ ಸಾಕ್ಷರತಾ ಕಾರ್ಯಕ್ರಮಗಳು ಮುಂದುವರಿಯುತ್ತಿದ್ದವು. ಗ್ರಾಮ ಸಮಿತಿಗಳು ಮತ್ತು ಗ್ರಾಮ ದಳಗಳು ಕೇವಲ ಕಲಿಯುವುದು ಮಾತ್ರವಲ್ಲ, ಇತರರಿಗೆ ಕಲಿಸುತ್ತಿದ್ದರು ಕೂಡ. ಅನೇಕ ಅನಕ್ಷರಸ್ಥರು ಕೆಲವೇ ಕೆಲವು ತಿಂಗಳುಗಳಲ್ಲಿ ಪತ್ರಿಕೆಗಳನ್ನು ಹಾಗೂ ಪುಸ್ತಕಗಳನ್ನು ಓದಲು ಸಮರ್ಥರಾದರು.

ಮೇಲ್ಸಮಿತಿಗಳು ಹಾಕಿಕೊಟ್ಟ ನಿಯಮಗಳು ಮತ್ತು ನಿರ್ದೇಶನಗಳ ಪ್ರಕಾರ ಗ್ರಾಮ ಸಮಿತಿಗಳು ಈ ಕೆಲಸಗಳನ್ನು ನಿರ್ವಹಿಸುತ್ತಿದ್ದವು.

ಅತ್ಯಂತ ಸ್ಫೂರ್ತಿದಾಯಕವಾದ ಅಂಶವೇನೆಂದರೆ ಗ್ರಾಮ ದಳಗಳ ಶಿಸ್ತು ಮತ್ತು ಶ್ರದ್ಧೆಗಳು ಖಾಯಂ ಪಡೆಗಳಲ್ಲಿನ ಶ್ರೇಷ್ಠ ದರ್ಜೆಯಷ್ಟೇ ಉತ್ತಮವಾಗಿ ಇರುತ್ತಿದ್ದವು ಎಂಬುದೇ ಆಗಿದೆ. ಈ ಗುಣಮಟ್ಟ ಇಲ್ಲದಿರುತ್ತಿದ್ದರೆ., ನಿಜಾಮ-ವಿರೋಧಿ ವಿಮೋಚನಾ ಹಂತದ ಅವಧಿಯಲ್ಲಿ, ಚಳುವಳಿಯು ಅಷ್ಟು ಎತ್ತರಕ್ಕೆ ಹೋಗುತ್ತಿರಲಿಲ್ಲ ಅಥವಾ ಅಷ್ಟು ದೊಡ್ಡ ಸಂಖ್ಯೆಯ ನಷ್ಟವನ್ನು ತಡೆದುಕೊಳ್ಳಲೂ ಆಗುತ್ತಿರಲಿಲ್ಲ. ಅವರು ಜನ ಚಳುವಳಿಯ ಜತೆ ಹೊಂದಿದ್ದ ಅತ್ಯಂತ ಹತ್ತಿರದ ಸಂಬಂಧದಿಂದಾಗಿಯೇ ಆ ರೀತಿಯ ಶಿಸ್ತು ಮತ್ತು ಶ್ರದ್ಧೆಯನ್ನು ತಲುಪಲು ಸಾಧ್ಯವಾಗಿದ್ದು.

1946-47ರ ಈ ಹಂತದ ಅವಧಿಯಲ್ಲಿ, ನಿಜಾಮ ಮತ್ತು ಅವರ ಪಾಳೇಗಾರಿ ಅಧಿಕಾರಿಗಳು 'ಹಿಂದೂಗಳ' ವಿರುದ್ಧ 'ಮುಸ್ಲಿಂ' ಜನರನ್ನು ಛೂಬಿಡಲು ಯತ್ನಿಸಿದರು. ಆದರೆ ಕಮ್ಯುನಿಸ್ಟ್ ಪಕ್ಷದ ಪ್ರಯತ್ನಗಳಿಂದಾಗಿ, ಮುಸ್ಲಿಂ ರೈತರು, ಗ್ರಾಮಗಳ ಕುಶಲಕರ್ಮಿಗಳು, ತೆಲಂಗಾಣ ರೈತರ ಹೋರಾಟದ ಜತೆ ನಿಂತರು.

ಯಾವಾಗ ಭಾರತ ಸರ್ಕಾರವು ತೆಲಂಗಾಣ ಹೋರಾಟವು ಹೆಚ್ಚೆಚ್ಚು ಪ್ರದೇಶಗಳಿಗೆ ವ್ಯಾಪಿಸುತ್ತಿದೆ ಎಂದು ಅರಿತರೋ, ಮಧ್ಯಪ್ರವೇಶ ಮಾಡಲು ತೀರ್ಮಾನಿಸಿತು. ರಜಾಕಾರ ಹಿಂಸೆಯನ್ನು ಹತ್ತಿಕ್ಕಿ, ನಿಜಾಮನನ್ನು ಭಾರತ ಒಕ್ಕೂಟಕ್ಕೆ ಸೇರಿಸುವ ನೆಪದಲ್ಲಿ ಸೇನೆಯನ್ನು ಕಳಿಸಿತು. ಆದರೆ, ಅವರ ಮುಖ್ಯ ಘೋಷಿತ ಉದ್ದೇಶವು 'ಕಮ್ಯುನಿಸ್ಟ್ ಹಿಂಸೆ'ಯನ್ನು ಹತ್ತಿಕ್ಕುವುದೂ ಆಗಿತ್ತು.

ಕಾ॥ ಎನ್.ಎಲ್. ಉಪಾಧ್ಯಾಯ ಸ್ಮರಣೆ

ಪುಟ 16 ರಿಂದ

ನಿಲುವುಳ್ಳ ಕ್ರಾಂತಿಕಾರಿ ನಾಯಕರೆಲ್ಲ ಒಗ್ಗೂಡಿ ರಾಜ್ಯದಲ್ಲಿ ಸಿಪಿಐ(ಎಂ) ಪಕ್ಷ ಕಟ್ಟಿ ಬೆಳೆಸಲು ಮುಂದಾದರು ಎಂದು ಕಾ॥ ವಿಜೆಕೆ ನಾಯರ್ ಹೇಳಿದರು. ಕಾ॥ ಎನ್.ಎಲ್. ಉಪಾಧ್ಯಾಯರವರು 1960 ರಲ್ಲಿ ತಮ್ಮ 48 ನೇ ವಯಸ್ಸಿನಲ್ಲಿ ಮದುವೆಯಾದವರು. ಅವರಿಗೆ ಅಜಯ್ ಮತ್ತು ಸುಜಾತ್ ಎಂಬ ಮಕ್ಕಳು 1989 ರ ಮೇ 26 ರಂದು ನಿಧನರಾದರು.

ಕಾ॥ ಎನ್.ಎಲ್. ಉಪಾಧ್ಯಯರ ಪ್ರಭಾವದಿಂದ ರಾಜ್ಯದ ಹಲವು ನಾಯಕರು ಪಕ್ಷ ಮುನ್ನೆಡೆಸಲು ಕಷ್ಟ ಕಾಲದಲ್ಲಿಯು ಪಕ್ಷದ ಬೆಳವಣಿಗೆಗಾಗಿ ಶ್ರಮಿಸಿದ ನಿಷ್ಕಳಂಕ ನಾಯಕ ಎಲ್ಲರನ್ನು ಪ್ರೀತಿವಾತ್ಸಲ್ಯದಿಂದ ಅವರ ಮನ ಗೆಲ್ಲುತ್ತಿದ್ದ ಅವರ ಕೊಡುಗೆ ರಾಜ್ಯದ ಪಕ್ಷಕ್ಕೆ ಅನನ್ಯವೆಂದು ವಿವರಿಸಿ, ಅವರ ಸ್ಮರಣೆ ಇಂದಿನ ಕಾರ್ಯಕರ್ತರಿಗೆ ಹಾಗೂ ನಾಯಕರಿಗೆ ಸ್ಫೂರ್ತಿದಾಯಕ ಎಂದರು. ಅವರ ಜೀವನ ಕುರಿತು ಮತ್ತಷ್ಟು ವಿವರ ಸಂಗ್ರಹ ಅವರ ಸಮಕಾಲೀನರ ಹಾಗೂ ಮುಖ್ಯವಾಗಿ ಕಾ॥ ವಿಜೆಕೆ ನಾಯರನ್ನು ಸಂದರ್ಶನ ಮಾಡಿ ಅವರ ಆತ್ಮಚರಿತ್ರೆಯನ್ನು ಒಳಗೊಂಡ ಪುಸ್ತಕವೊಂದನ್ನು ಟ್ರಸ್ಟ್ ಪ್ರಕಟಿಸಲಿದೆ ಎಂದು ಅಧ್ಯಕ್ಷರಾದ ಗೋಪಾಲಕೃಷ್ಣ ಅರಳಹಳ್ಳಿ ಪ್ರಕಟಿಸಿದರು.

ವರದಿ: ಎನ್. ರಾಜಣ್ಣ

ಪಿಯು ಪರೀಕ್ಷೆಯನ್ನು ಸುರಕ್ಷಿತವಾಗಿ ನಡೆಸುವಲ್ಲಿನ ಎಡವಟ್ಟುಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಘಟಿಸಬಾರದೆಂದು ಎಸ್‌ಎಫ್‌ಐ ಆಗ್ರಹ

ಹಾವೇರಿ: ಪರೀಕ್ಷೆ ಬರೆಯುವ ಎಲ್ಲಾ ವಿದ್ಯಾರ್ಥಿಗಳಿಗೂ ಸಮರ್ಪಕ ಸಾರಿಗೆ ವ್ಯವಸ್ಥೆ, ಉಚಿತ ಮಾಸ್ಕ್ ವಿತರಣೆ, ಸ್ಯಾನಿಟೈಸರ್ ಸೇರಿದಂತೆ ಸೂಕ್ತ ಪೂರ್ವ ತಯಾರಿ ಸುರಕ್ಷತೆಯ ಕ್ರಮಗಳ ಕುರಿತು ಹಾವೇರಿ ಜಿಲ್ಲಾ ಆಡಳಿತ ಸೇರಿದಂತೆ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ವಿದ್ಯಾರ್ಥಿಗಳ ಸುರಕ್ಷತೆ ಕಾಪಾಡಬೇಕೆಂದು ಆಗ್ರಹಿಸಿ ಎಸ್‌ಎಫ್‌ಐ ಹಾವೇರಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಕೊರೊನಾ ವೈರಸ್ ಭೀತಿ ಹಿನ್ನೆಲೆಯಲ್ಲಿ ಮುಂದೂಡಲ್ಪಟ್ಟಿದ್ದ ದ್ವಿತೀಯ ಪಿಯುಸಿ ಇಂಗ್ಲೀಷ ಪರೀಕ್ಷೆ ಈಗಾಗಲೇ ನಡೆದಿದೆ. ಆದರೆ ಕೋವಿಡ್-19 ಭಯದಿಂದ 27,022 ವಿದ್ಯಾರ್ಥಿಗಳು ಪರೀಕ್ಷೆಗೆ ಗೈರಾಗಿದ್ದಾರೆ. ರಾಜ್ಯದಲ್ಲಿ ಒಟ್ಟು 5,95,997 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದರು. ಆದರೆ 5,68,975 ವಿದ್ಯಾರ್ಥಿಗಳು ಮಾತ್ರ ಪರೀಕ್ಷೆ ಬರೆದಿದ್ದಾರೆ. ಜೊತೆಗೆ ಹೊರ ರಾಜ್ಯದ 1,889 ವಿದ್ಯಾರ್ಥಿಗಳ ಪರೀಕ್ಷೆ ಬರೆದರೆ, 18,529 ವಿದ್ಯಾರ್ಥಿಗಳು ಅಂತರ್ ಜಿಲ್ಲೆಯಲ್ಲಿ ಪರೀಕ್ಷೆ ಬರೆದಿದ್ದಾರೆ ಎಂದು ಪಿಯುಸಿ ಬೋರ್ಡ್ ಅಧಿಕೃತ ಮಾಹಿತಿ ನೀಡಿದೆ.

ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಗೈರು ಹಾಜರಾಗಿದ್ದು ನೋಡಿದರೆ ಸರ್ಕಾರ ಪರೀಕ್ಷೆಯನ್ನು ಬಲವಂತವಾಗಿ ವಿದ್ಯಾರ್ಥಿಗಳ ಮೇಲೆ ಹೇರಿದ್ದು ಸ್ಪಷ್ಟವಾಗುತ್ತದೆ.ಇಷ್ಟೊಂದು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಗೈರುಹಾಜರಗಲು ಕಾರಣ ಕೋವಿಡ್ -19 ಕುರಿತು ಭಯ, ವಲಸೆ ಕಾರ್ಮಿಕರ ಸಮಸ್ಯೆ, ಸೂಕ್ತ ಸಾರಿಗೆ ವ್ಯವಸ್ಥೆ ಕೊರತೆ, ಅಂತರರಾಜ್ಯ ವಿದ್ಯಾರ್ಥಿಗಳಿಗೆ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸುವಲ್ಲಿನ ಕೊರತೆಗಳ ಮಧ್ಯೆ ಪರೀಕ್ಷೆ ನಡೆಸಿದ್ದು ಎಂಬುದನ್ನು ಮರೆಯಬಾರದು.

ಪಿಯು ಇಂಗ್ಲೀಷ್ ಪರೀಕ್ಷೆಯ ನಡೆದ ಹಲವು ಪರೀಕ್ಷಾ ಕೇಂದ್ರಗಳ ವ್ಯವಸ್ಥೆ ಆತಂಕವನ್ನುಂಟು ಮಾಡುವ ರೀತಿ ಇತ್ತು. ಪರೀಕ್ಷಾ ಕೇಂದ್ರದ ಹೊರಗೆ ಭೌತಿಕ ಅಂತರವಿರಲಿಲ್ಲ, ವಿದ್ಯಾರ್ಥಿಗಳು ಗುಂಪುಗೂಡಿ ಉಭಯ ಕುಶಲೋಪರಿ, ಪರೀಕ್ಷೆಯ ವಿಚಾರಗಳನ್ನು ಚರ್ಚಿಸಿಕೊಳ್ಳುತ್ತಿದ್ದರು. ಒಂದು ಪರೀಕ್ಷಾ ಕೊಠಡಿಯಲ್ಲಿ 10 ರಿಂದ 15 ವಿದ್ಯಾರ್ಥಿಗಳು ಮಾತ್ರ ದೈಹಿಕ ಅಂತರದಲ್ಲಿ ಕೂರಿಸುವ ಬದಲು ಮಾಮೂಲಿ ಸಂದರ್ಭದಲ್ಲಿದ್ದಂತೆ ಪ್ರತಿ ಡೆಸ್ಕ್ ಗೆ ಇಬ್ಬರನ್ನು ಕೂರಿಸಿ ಪರೀಕ್ಷೆ ಬರೆಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಸ್ಯಾನಿಟೈಸರ್, ಕೈ ತೊಳೆಯಲು, ನೀರಿನ ಸೌಕರ್ಯಗಳ ಕೊರತೆ ಇತ್ತು, ಕೇವಲ ತೋರಿಕೆಗೆ ಮಾತ್ರ ಎಂಬಂತೆ ಥರ್ಮಲ್ ಸ್ಕ್ರೀನ್ ಮಾಡಿ ಕಳುಹಿಸಲಾಗುತ್ತಿತ್ತು. ವಿದ್ಯಾರ್ಥಿಗಳು ಮೂರು ಗಂಟೆಗಳ ಕಾಲ ಮಾಸ್ಕ್ ಧರಿಸಿ ಪರೀಕ್ಷೆ ಬರೆಯಲು ಪರದಾಡಿದ ಪರಿಸ್ಥಿತಿಯನ್ನು ಅಳಲು ತೋಡಿಕೊಂಡಿದರು. ಈ ಎಲ್ಲ ಎಡವಟ್ಟುಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿ ಒತ್ತಾಯಿಸುತ್ತದೆ.

ಜೂನ್ 25 ರಿಂದ ನಡೆಸಲು ಉದ್ದೇಶಿಸಿರುವ ಎಸ್‌ಎಫ್‌ಐ ಪರೀಕ್ಷೆಯಲ್ಲಿ 8.5 ಲಕ್ಷ ವಿದ್ಯಾರ್ಥಿಗಳಿರುವುದರಿಂದ ಪಿಯು ಪರೀಕ್ಷೆ ನಡೆಸುವಲ್ಲಿನ ಎಡವಟ್ಟುಗಳು ಪುನರ್ ಘಟಿಸುವ ಆತಂಕವನ್ನು ತಳ್ಳಿ ಹಾಕಲು ಸಾಧ್ಯವಿಲ್ಲ. ಆದ್ದರಿಂದ ಸರ್ಕಾರ ಕೋವಿಡ್-19 ವೈರಸ್ ಭಯದದಲ್ಲಿ, ಸೂಕ್ತ ಸುರಕ್ಷತೆಯ ಕ್ರಮಗಳ ಕೊರತೆಯ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ನಡೆಸಲು ಮುಂದಾಗಿರುವುದರಿಂದ ಪರೀಕ್ಷೆಗೂ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಗೈರುಹಾಜರಾಗುವ ಸಾಧ್ಯತೆಗಳಿವೆ.

ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಸೂಕ್ತ ಸಾರಿಗೆ ವ್ಯವಸ್ಥೆ, ಪರೀಕ್ಷಾ ಕೇಂದ್ರಗಳಲ್ಲಿ ಸ್ಯಾನಿಟೈಸರ್, ಕೈ ತೊಳೆಯಲು ನೀರಿನ ಸೌಕರ್ಯ, ಪ್ರತಿ ವಿದ್ಯಾರ್ಥಿಗಳಿಗೂ ಮಾಸ್ಕ್ ವಿತರಣೆ ಸೇರಿದಂತೆ ಸೂಕ್ತ ಪೂರ್ವ ತಯಾರಿ ಸುರಕ್ಷತೆಯ ಕ್ರಮಗಳ ಕುರಿತು ಹಾವೇರಿ ಜಿಲ್ಲಾ ಆಡಳಿತ ಸೇರಿದಂತೆ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ವಿದ್ಯಾರ್ಥಿಗಳ ಸುರಕ್ಷತೆ ಕಾಪಾಡಬೇಕೆಂದು ಎಸ್‌ಎಫ್‌ಐ ಹಾವೇರಿ ಜಿಲ್ಲಾ ಸಮಿತಿ ಆಗ್ರಹಿಸುತ್ತದೆ.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಭೋವಿ, ಎಸ್‌ಎಫ್‌ಐ ಮುಖಂಡರಾದ ನಾರಾಯಣ ಬಡಿಗೇರ, ಪ್ರಸನ್ನ ಕಡಕೋಳ, ಸಚಿನ್ ಗೊಲ್ಲರ, ಶ್ರೀಕಾಂತ್ ಎಚ್ ಎಮ್, ಮಹೇಶ್ ಎಸ್ ಆರ್, ಇದ್ದರು.

ಬಸವರಾಜ ಭೋವಿ
ಎಸ್‌ಎಫ್‌ಐ ಜಿಲ್ಲಾ ಸಹಕಾರ್ಯದರ್ಶಿ

ಜೂನ್ 23ರ ರಷ್ಯಾ-ಭಾರತ-ಚೀನಾ ವಿಡಿಯೋ ಶೃಂಗಸಭೆ ಆರ್.ಐ.ಸಿ ಯ ಕುರಿತು ಭಾರತ ಎಚ್ಚೆತ್ತುಕೊಂಡಿದೆಯೇ?



2019ರ ಆರ್.ಐ.ಸಿ. ಶೃಂಗಸಭೆ

ನಾಗರಾಜ ನಂಜುಂಡಯ್ಯ

ಜೂನ್ 23 ರಂದು ನಡೆದ, ರಷ್ಯಾ-ಭಾರತ-ಚೀನಾ (ಆರ್.ಐ.ಸಿ) ದೇಶಗಳ ವಿದೇಶಾಂಗ ಮಂತ್ರಿಗಳ ವಿಡಿಯೋ ಶೃಂಗಸಭೆ ಭಾರತೀಯ ರಾಜಕೀಯ ವಿಶ್ಲೇಷಕರಲ್ಲಿ ಕುತೂಹಲ ಮೂಡಿಸಿತ್ತು. ಆರ್.ಐ.ಸಿ, ಬ್ರಿಕ್ಸ್ (ಬ್ರೆಜಿಲ್, ರಷ್ಯ ಇಂಡಿಯಾ, ಚೀನಾ ಮತ್ತು ದಕ್ಷಿಣ ಆಫ್ರಿಕಾ), ಹಾಗೂ ಎಸ್.ಸಿ.ಒ (ಶಾಂಘೈ ಸಹಕಾರ ಸಂಘಟನೆ) ನಂತಹ, ಯು.ಎಸ್ ಅನ್ನು ಹೊರಗಿಟ್ಟ ಅಂತರ್‍ರಾಷ್ಟ್ರೀಯ ಸಂಘಟನೆಗಳ, ಮಾಧ್ಯಮ ಹಾಗು ವಿದೇಶ ನೀತಿ ವಿಶ್ಲೇಷಕರಲ್ಲಿರುವ ಕಟ್ಟಾ ಟೀಕಾಕಾರರು ಸಹ ಇದರಲ್ಲಿ ವಿಶೇಷ ಆಸಕ್ತಿ ತೋರಿಸಿದ್ದಾರೆ. ಆದರೆ, ಇಲ್ಲಿ ಆರ್.ಐ.ಸಿ ಪ್ರಕ್ರಿಯೆಗಿಂತ ಹೆಚ್ಚಾಗಿ, ಕಾಕತಾಳೀಯವೆಂಬಂತೆ ಅದೇ ಸಮಯಕ್ಕೆ ಘಟಿಸಿದ ಭಾರತ-ಚೀನಾ ಗಡಿ ಉದ್ವಿಗ್ನತೆಯಿಂದಾಗಿ ಇದು ಹೆಚ್ಚು ಗಮನ ಸೆಳೆದಿದೆ.

ಆರ್.ಐ.ಸಿ ಪ್ರಕ್ರಿಯೆಯು ಭಾರತದ ವಿದೇಶಾಂಗ ನೀತಿಯ ಕ್ರಿಯಾತ್ಮಕ ವಾಹಕವಾಗಿ, ವಿಕಸನಗೊಳ್ಳಬೇಕಾಗಿತ್ತು. ಆದರೆ, ಅದು ಆಗಿಲ್ಲ. ಇದಕ್ಕೆ ಹಲವಾರು ಕಾರಣಗಳನ್ನು ಹೇಳಬಹುದಾದರೂ, ಪ್ರಮುಖವಾಗಿ ನಾಲ್ಕು ಅಂಶಗಳನ್ನು ಗುರುತಿಸಬಹುದು.

* ಭಾರತವು ಬಹು-ದೇಶೀಯ ಗುಂಪುಗಳ ಬದಲು, ದ್ವಿಪಕ್ಷೀಯ ರಾಜತಾಂತ್ರಿಕತೆಗಳ ಮೂಲಕ ತನ್ನ ಹಿತಾಸಕ್ತಿಗಳನ್ನು ಅನುಸರಿಸುತ್ತದೆ.
* ಜಾಗತಿಕ ಚದುರಂಗದ ಬೋರ್ಡಿನಲ್ಲಿ ಯು.ಎಸ್ ನ ಪ್ರಮುಖ ಗುರಿಯಾಗಿರುವ ಎರಡು ದೊಡ್ಡ ಶಕ್ತಿಗಳಾದ ರಷ್ಯಾ ಮತ್ತು ಚೀನಾಗಳ ಗ್ಯಾಂಗ್ ನೊಟ್ಟಿಗೆ ಸೇರಿದೆ ಎಂಬ ಅಭಿಪ್ರಾಯ ಮೂಡದಂತೆ ಭಾರತ ಎಚ್ಚರಿಕೆ ವಹಿಸಿದೆ.
* ಚೀನಾದೊಂದಿಗೆ ಸಂಬಂಧ ಹದಗೆಟ್ಟಿರುವುದರಿಂದ ಆರ್.ಐ.ಸಿ ಒಳಗಿನ ಸಹಜ ತ್ರಿಕೋನದ ಪ್ರಕ್ರಿಯೆಯಲ್ಲಿ ಭಾರತಕ್ಕೆ ಭಾಗವಹಿಸಲಾಗುತ್ತಿಲ್ಲ.
* ಆರ್.ಐ.ಸಿ ಪ್ರಮುಖವಾಗಿ ತನಗೆ ಪ್ರತಿಕೂಲವಾದದ್ದು ಎಂದು ಯು.ಎಸ್ ಪರಿಗಣಿಸುತ್ತದೆ. ಇದು ಏಷ್ಯಾ ಮತ್ತು ಜಾಗತಿಕ ಮತ್ತು ಏಷ್ಯಾ ಮಟ್ಟದಲ್ಲಿ ಯು.ಎಸ್ ಕಾರ್ಯವ್ಯೂಹಗಳನ್ನು ದುರ್ಬಲಗೊಳಿಸಬಹುದು. 'ಚೀನಾ ವಿರೋಧಿ ನಾಲ್ವರ ವೇದಿಕೆ'ಯ ಜತೆ ಭಾರತ ಇರುವುದರಿಂದ ಆರ್.ಐ.ಸಿ ಯ ಪೂರ್ಣ ರೂಪ ಅದರ ಜತೆ ಹೊಂದಾಣಿಕೆಯಾಗುವುದಿಲ್ಲ.

ಜೂನ್ 23ರ ವಿಡಿಯೋ ಕಾನ್ಫರೆನ್ಸ್ ಒಂದು ವಾಸ್ತವ ಶೃಂಗಸಭೆಯಂತೆಯೇ ಇತ್ತು, ಪ್ರತ್ಯೇಕ ಗುಟ್ಟಾದ ಮಾತುಕತೆಗಳು ಸಾಧ್ಯವಿರಲಿಲ್ಲ ಎನ್ನುವುದು ಬಿಟ್ಟರೆ. ಎರಡು ವಿದೇಶಾಂಗ ವ್ಯವಹಾರಗಳ ಸಚಿವರಾದ ಎಸ್.ಜೈಶಂಕರ್ ಮತ್ತು ಚೀನಾದ ವಾಂಗ್ ಯಿ ನಡುವೆ ಒಂದು ಔಪಚಾರಿಕ ಸಂವಾದವಾಗಿತ್ತು. ಆದರೆ ಭಾರತ-ಚೀನಾ ಸಂಬಂಧ ಇದರಿಂದ ಸುಗಮವಾಗಿ ಬಿಡುತ್ತದೆ ಎಂದೇನಲ್ಲ.

ಭಾರತ-ಚೀನಾ ಸಂಬಂಧದಲ್ಲಿ, ಮರು ಹೊಂದಿಸುವಿಕೆಯು ದುರ್ಗಮವಾದ ದೀರ್ಘ ದ್ವಿಪಕ್ಷೀಯ ಪ್ರಕ್ರಿಯೆಯಾಗಿದೆ. ಈ ಸಂದರ್ಭದಲ್ಲಿ, ಅರ್ಥಪೂರ್ಣವಾದ ಕಾರ್ಯವ್ಯೂಹಾತ್ಮಕ ಸಂವಾದಕ್ಕೆ ಬೇಕಾದ ಪರಿಸ್ಥಿತಿಗಳು ಈಗ ಇಲ್ಲ. ಉಗ್ರ ರಾಷ್ಟ್ರೀಯವಾದಿ ಗಿಡುಗಗಳು ಇನ್ನೂ ವಾಸ್ತವದ ನೆಲಕ್ಕೆ ಇಳಿದಿಲ್ಲ.

ಭಾರತ-ಚೀನಾ ಗಡಿ ಉದ್ವಿಗ್ನತೆಯ ಹಿನ್ನೆಲೆಯಲ್ಲಿ ವ್ಯಾಪಕವಾಗಿ ಚಾಲನೆಯಲ್ಲಿರುವ ಭಾರತೀಯ ನಿರೂಪಣೆಯಲ್ಲಿ ಅಸಂಬದ್ಧ ಅತಿರೇಕದ ಪ್ರಲಾಪಗಳು ಪ್ರಾಬಲ್ಯ ಹೊಂದಿದೆ. ಮಾಜಿ ರಕ್ಷಣಾ ಮಂತ್ರಿಗಳು ಸೇರಿದಂತೆ ಅನೇಕರು, ಹಿಮಾಲಯದಲ್ಲಿ ಭಾರತೀಯ ಮಿಲಿಟರಿ ಸಾಮರ್ಥ್ಯವು ಚೀನಾಕ್ಕಿಂತ ಹೆಚ್ಚಿದೆ ಎಂದು ನಂಬಿದ್ದಾರೆ. ಗಾಲ್ವಾನ್ ಕಣಿವೆಯಲ್ಲಿ ಚೀನಾದ ಕಮಾಂಡಿಂಗ್ ಅಧಿಕಾರಿಯನ್ನು ಭಾರತೀಯ ಸೇನೆಯು ಕೊಂದಿದೆ ಎಂಬ ವಿಜಯೋತ್ಸವವನ್ನು ನಡೆಸಲಾಗಿದೆ. ಚೀನೀ ಅಧ್ಯಕ್ಷರ ಚಿತ್ರಗಳನ್ನು ಸುಟ್ಟಿದ್ದಾರೆ. ಆಳುವ ವರ್ಗಗಳಲ್ಲಿ ಹಲವರು ಚೀನಾದೊಂದಿಗೆ ವ್ಯಾಪಾರ ಮತ್ತು ವಾಣಿಜ್ಯವನ್ನು ಬಹಿಷ್ಕರಿಸಲು ಕರೆ ಕೊಟ್ಟಿದ್ದಾರೆ. ಕೊರೊನಾ ವೈರಸ್ ಮತ್ತು ಯು.ಎಸ್ ದಿಗ್ಬಂಧನದ ಪರಿಣಾಮಗಳಿಂದಾಗಿ ಚೀನಾ ಆರ್ಥಿಕವಾಗಿ ದುರ್ಬಲವಾಗಿದೆ ಮತ್ತು ಚೀನಿ ಜನ ಚೀನೀ ಕಮ್ಯುನಿಸ್ಟ್ ಪಕ್ಷದ ಆಡಳಿತದಿಂದ ಬೇಸತ್ತು ದಂಗೆಯೆದ್ದಿದ್ದಾರೆ. ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾಗಳು ಚೀನಾವನ್ನು ಸುತ್ತುವರೆದು ಮಣಿಸುತ್ತಾರೆ ಎಂಬ ಅತಿರೇಕದ ಕಲ್ಪನೆಗಳನ್ನು ಹಲವರು ಹೊಂದಿದ್ದಾರೆ.

ಆರ್.ಐ.ಸಿ ಸಭೆಯ ನಿಜವಾದ ಮಹತ್ವವೆಂದರೆ, ಅದು ನಡೆದಿದೆ ಎಂಬುದೇ. ಜೂನ್ 16 ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರೊಂದಿಗೆ ಜೈಶಂಕರ್ ನಡೆಸಿದ ಸಮಾಲೋಚನೆಯಲ್ಲಿ, ಚೀನಾದ ವಿದೇಶಾಂಗ ಸಚಿವ ವಾಂಗ್ ಅವರೊಂದಿಗೆ ಮಾತನಾಡಲು ನಿರ್ಧರಿಸಲಾಯಿತು. ಜೂನ್ 17ರಂದು ವಾಂಗ್ ಅವರೊಂದಿಗೆ ಜೈಶಂಕರ್ ಸಂಭಾಷಣೆ ನಡೆಸಿದರು. ಇಬ್ಬರು ಉನ್ನತ ರಾಜತಾಂತ್ರಿಕರು ಗಾಲ್ವಾನ್ ಕಣಿವೆಯ ಕುರುಡು ಗಲ್ಲಿಯಿಂದ ಹೊರ ಬರುವ ಮಾರ್ಗದ ಬಗ್ಗೆ ಕೆಲವು ಸಾಮಾನ್ಯ ನೆಲೆಯನ್ನು ತಲುಪಿದರು. ಅದೇ ಮಾತುಕತೆಯಲ್ಲಿ ಜೂನ್ 23 ರಂದು ನಡೆಯಲಿರುವ ಆರ್.ಐ.ಸಿ ಸಭೆಯಲ್ಲಿ ಪಾಲ್ಗೊಳ್ಳಲು ಜೈಶಂಕರ್ ತಮ್ಮ ಒಪ್ಪಿಗೆಯನ್ನು ಸೂಚಿಸಿದರು.

ಇದು ಸಕಾರಾತ್ಮಕ ಸಂಕೇತವಾಗಿತ್ತು. ಅಂದರೆ, ಪ್ರಧಾನ ಮಂತ್ರಿ ಯವರ ಅನುಮೋದನೆ ಯೊಂದಿಗೆ, ವಿದೇಶ ಮಂತ್ರಿ ಜೈಶಂಕರ್ ಬೀಜಿಂಗ್ ನೊಂದಿಗೆ ಒಂದು ರಾಜಕೀಯ ಹಾದಿಯನ್ನು ತೆರೆದಿದ್ದಾರೆ. ಜೈಶಂಕರ್ ಮತ್ತು ಚೀನಾದ ನಾಯಕತ್ವದ ನಡುವಿನ ಯಾವುದೇ ಸಂವಹನವು ಒಂದು ಅರ್ಥಪೂರ್ಣ ಹೆಜ್ಜೆಯಾಗಿದೆ ಎಂದು ಗುರುತಿಸಲ್ಪಡುತ್ತದೆ. ಆರ್.ಐ.ಸಿ ಶೃಂಗಸಭೆ ಭವಿಷ್ಯದಲ್ಲಿ ದ್ವಿಪಕ್ಷೀಯ ಸಭೆಯ ಸಾಧ್ಯತೆಯತ್ತ ದೃಢ ಹೆಜ್ಜೆ ಇಟ್ಟಿದೆ ಎನ್ನಬಹುದು. ಚೀನಾ-ಭಾರತದ ಸಂಬಂಧವನ್ನು ಕುದುರಿಸಲು ರಷ್ಯಾ ಪ್ರಯತ್ನಿಸುತ್ತಿದೆ ಎಂದು ಕೆಲವು ಭಾರತೀಯ ವಿಶ್ಲೇಷಕರು ಎಂದುಕೊಂಡಿದ್ದಾರೆ. ಇದು ತಪ್ಪು ಪರಿಕಲ್ಪನೆ. ಅಧ್ಯಕ್ಷ ವ್ಲಾದಿಮಿರ್ ಪುತಿನ್ ಘರ್ಷಣೆಯನ್ನು ಪರಿಹರಿಸುವ ನಾಯಕ ಏನಲ್ಲ. ಆದರೆ ಆತ ಸಂಘರ್ಷದ ಸಂದರ್ಭಗಳಲ್ಲಿ ವಾಸ್ತವಪ್ರಜ್ಞೆ ಮತ್ತು ವೈಚಾರಿಕತೆ ಎರಡನ್ನೂ ಪ್ರದರ್ಶಿಸುವ ಜಾಗತಿಕ ಮುತ್ಸದ್ದಿ.

ರಷ್ಯಾ-ಚೀನಾ ಸಂಬಂಧಗಳ ರಸವಿದ್ಯೆಯನ್ನು ಭಾರತವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಎಲ್ಲಾ ವಿಷಯಗಳ ಬಗ್ಗೆ ರಷ್ಯ ಮತ್ತು ಚೀನಾ ಸಮಾನ ಧೋರಣೆಯಿದೆ ಎಂದೇನಿಲ್ಲ. ಎರಡೂ ಶಕ್ತಿಗಳು ತಮ್ಮ ಪ್ರಮುಖ ಹಿತಾಸಕ್ತಿಗಳನ್ನು ಸ್ವತಂತ್ರವಾಗಿ ಕಾಪಾಡಿಕೊಳ್ಳಲು ಸಾಕಷ್ಟು ಅವಕಾಶವನ್ನು ಹೊಂದಿವೆ. ಪ್ರಾದೇಶಿಕ ಸಾರ್ವಭೌಮತ್ವವು ಚೀನಾಕ್ಕೆ ಒಂದು ಪ್ರಮುಖ ವಿಷಯವಾಗಿದೆ ಎಂಬುದು ರಷ್ಯಾಕ್ಕೆ ಗೊತ್ತು.

ಆದರೆ ಅಂತರಾಷ್ಟ್ರೀಯ ವ್ಯವಸ್ಥೆಯನ್ನು ಪ್ರಜಾಸತ್ತಾತ್ಮಕಗೊಳಿಸಲು ಮತ್ತು ದೇಶಗಳ ನಡುವೆ ಸಂಬಂಧಗಳಲ್ಲಿ ಅಂತರಾಷ್ಟ್ರೀಯ ಕಾನೂನು ಮತ್ತು ವಿಶ್ವಸಂಸ್ಥೆಯ ಸನ್ನದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾದ ಅನಿವಾರ್ಯತೆಗಳ ಬಗ್ಗೆ ವಿಶ್ವ ಅಭಿಪ್ರಾಯಗಳನ್ನು ಕ್ರೋಢೀಕರಿಸಲು ಆರ್.ಐ.ಸಿ ಪ್ರಕ್ರಿಯೆಗೆ, ರಷ್ಯಾ ಮತ್ತು ಚೀನಾ ಹೆಚ್ಚಿನ ಮಹತ್ವ ಕೊಟ್ಟಿದೆ.

ರಷ್ಯಾ ಮತ್ತು ಚೀನಾಗಳ ದೃಷ್ಟಿಕೋನದಿಂದ ಆರ್.ಐ.ಸಿ ಯು, ಬ್ರಿಕ್ಸ್ ಮತ್ತು ಎಸ್.ಸಿ.ಒ ಗಳಿಗೆ ಪೂರಕವಾಗಿದೆ. ಜೊತೆಗೆ ಆರ್.ಐ.ಸಿ ಭಾರತದೊಂದಿಗಿನ ಅವುಗಳ ಐಕ್ಯತ ವಿಶೇಷ ವೇದಿಕೆಯಾಗಿದೆ. ಭಾರತವು ಬಹುಪಕ್ಷೀಯ ರಂಗದಲ್ಲಿ ಹೆಚ್ಚು ಮಹತ್ವದ ಪಾತ್ರ ವಹಿಸಬಲ್ಲ ಮತ್ತು ಹೆಚ್ಚುತ್ತಿರುವ ಯುರೇಷಿಯನ್ ಸಮಗ್ರೀಕರಣದಲ್ಲಿ ಹಿತಾಸಕ್ತಿಯೂ ಅಡಗಿರುವ ದೇಶವಾಗಿರುವುದರಿಂದ ಅದನ್ನು ಆರ್.ಐ.ಸಿ ಮೂಲಕ ತೊಡಗಿಸಬೇಕು ಎಂಬುದು ಅವುಗಳ ಕಾಳಜಿಯಾಗಿದೆ. ಆರ್.ಐ.ಸಿ ಶೃಂಗಸಭೆಯಲ್ಲಿ ಭಾಗವಹಿಸುವ ಮೂಲಕ ಭಾರತ, ಆರ್.ಐ.ಸಿ ಮತ್ತು ಇತರ ಬಹುಪಕ್ಷೀಯ ವೇದಿಕೆಗಳ ಕಾರ್ಯವ್ಯೂಹಾತ್ಮಕ ಮಹತ್ವದ ಕುರಿತು ಎಚ್ಚೆತ್ತುಕೊಳ್ಳುತ್ತಿದೆ ಎಂಬುದು ಉತ್ತಮ ಬೆಳವಣಿಗೆ. ಆರ್.ಐ.ಸಿ ಮೂಲಕ ಕೆಲವು ಜಂಟಿ ಯೋಜನೆಗಳನ್ನು, ಹಾಕಿಕೊಳ್ಳುವುದರೊಂದಿಗೆ ಈ ವೇದಿಕೆಯನ್ನು ಮುಂದೊಯ್ಯಲು ಪ್ರಯತ್ನಿಸುತ್ತದೆ ಎಂದು ಆಶಿಸಬಹುದು.

ಎಚ್-1ಬಿ ಮತ್ತು ಎಲ್ಲಾ ವೀಸಾಗಳಿಗೆ ತಡೆ

ಯುಎಸ್ ಉದ್ಯೋಗ ಮಾರುಕಟ್ಟೆಯ ಮೇಲೆ ಕಣ್ಣಿಟ್ಟಿರುವ ಭಾರತೀಯ ಐಟಿ ವೃತ್ತಿಪರರಿಗೆ ಭಾರಿ ಹೊಡೆತವನ್ನು ಟ್ರಂಪ್ ಆಡಳಿತ ನೀಡಿದೆ. ಹೆಚ್ಚು ಬೇಡಿಕೆಯಿರುವ ಎಚ್-1ಬಿ ವೀಸಾಗಳ ಜೊತೆಗೆ ಎಚ್-4, ಎಚ್-2ಬಿ ವೀಸಾ ಸೇರಿದಂತೆ, ಇತರೆ ರೀತಿಯ ವಿದೇಶಿ ಕೆಲಸಗಾರರಿಗೆ ಕೊಡುವ ಜೆ ಮತ್ತು ಎಲ್-1, ಎಲ್-2 ವೀಸಾಗಳ ಜಾರಿಯನ್ನು ತಡೆ ಹಿಡಿದಿದೆ. ಬರುವ ನವೆಂಬರ್ ನಲ್ಲಿ ಅಮೆರಿಕಾದ ಅಧ್ಯಕ್ಷೀಯ ನಿರ್ಣಾಯಕ ಚುನಾವಣೆಯ ಮೇಲೆ ಕಣ್ಣಿಟ್ಟಿರುವ ಟ್ರಂಪ್ ಈ ನಿರ್ಧಾರದಿಂದ, ಲಕ್ಷಾಂತರ ಭಾರತೀಯ ಐಟಿ ಉದ್ಯೋಗಿಗಳು, ಅತಂತ್ರಗೊಂಡಿವೆ. ಇದರಿಂದಾಗಿ, ಅಮೆರಿಕಾದ ಕಾರ್ಮಿಕರನ್ನು ರಕ್ಷಿಸಲು ಸಹಕಾರಿಯಾಗುತ್ತದೆ ಎಂಬುದು ಟ್ರಂಪ್ ಆಡಳಿತದ ಅಂಬೋಣ. 2021ರಲ್ಲಿ ಅಮೆರಿಕದಲ್ಲಿ ಕೆಲಸ ಮಾಡಲು ಕೊಡಲಾಗುವ (ಅಕ್ಟೋಬರ್ 2020ರಿಂದ ಜಾರಿಗೆ ಬರಲಿದ್ದ) ಕೆಲಸದ ವೀಸಾಗಳಿಗೆ ಈ ಆಜ್ಞೆ ಅನ್ವಯವಾಗುತ್ತದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರು ಘೋಷಣೆ ಮಾಡಿದ, ಹೊಸ ವೀಸಾ ನಿರ್ಬಂಧಗಳು ಜೂನ್ 24 ರಿಂದಲೇ ಜಾರಿಗೆ ಬಂದು, ಡಿಸೆಂಬರ್ 2020 ರವರೆಗೆ ಚಾಲ್ತಿಯಲ್ಲಿರುತ್ತದೆ.

ಕೋವಿಡ್-19 ರ ಸಾಂಕ್ರಮಿಕ ದಿಂದ ಉಂಟಾದ ಆರ್ಥಿಕತೆಯ ಕುಸಿತದ ಕಾರಣವೆಂದು ಮೇಲ್ನೋಟಕ್ಕೆ ಕಂಡುಬಂದರೂ, ಖಂಡಿತ ಅಷ್ಟಕ್ಕೆ ಸೀಮಿತವಾಗಿಲ್ಲ. ಬದಲಿಗೆ, ಆರ್ಥಿಕ ತೆಗಿಂತ ಹೆಚ್ಚಾಗಿ ರಾಜಕೀಯ ಹಿತಾಸಕ್ತಿ ತುಂಬಿದೆ ಎನ್ನಬಹುದು. ಏಕೆಂದರೆ, ಅಮೆರಿಕಾದ ಅಧ್ಯಕ್ಷೀಯ ಚುನಾವಣಾ ಪ್ರಚಾರಕ್ಕೆ ಇದು ಇಂಬು ಕೊಡಬಲ್ಲದು ಎಂಬ ಲೆಕ್ಕಾಚಾರ ಟ್ರಂಪ್ ರದ್ದು.

ಈ ನಿರ್ಧಾರದಿಂದ, ಒಂದು ಅಂದಾಜಿನಂತೆ, 2,19,000 ವಿದೇಶಿಯರ ಉದ್ಯೋಗಗಳು ಈ ವರ್ಷದಲ್ಲಿ ನಷ್ಟ ಹೊಂದುತ್ತವೆ. ಭಾರತೀಯ ಐಟಿ ವೃತ್ತಿ ಪರರು ಮತ್ತು ಹಲವಾರು ಅಮೇರಿಕನ್ ಮತ್ತು ಭಾರತೀಯ ಕಂಪನಿಗಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಸ್ಟಾಂಪಿಂಗ್ ಪಡೆಯಲು ಯುಎಸ್ ರಾಯಭಾರ ಕಚೇರಿಗಳನು ಸಂಪರ್ಕಿಸಲು, ಅವರು, ಈಗಿನ ವರ್ಷದ ಅಂತ್ಯದವರೆಗೆ ಕಾಯಬೇಕಾಗಿದೆ. ತಮ್ಮ ಎಚ್-1ಬಿ ವೀಸಾಗಳನ್ನು ನವೀಕರಿಸಲು ಬಯಸುವ ಹೆಚ್ಚಿನ ಸಂಖ್ಯೆಯ ಭಾರತೀಯ ಐಟಿ ವೃತ್ತಿಪರರ ಮೇಲೂ ಇದು ಪರಿಣಾಮ ಬೀರುತ್ತದೆ.

ಏತನ್ಮಧ್ಯೆ, ಅಮೆರಿಕಾದ ಉನ್ನತ ಕಾನೂನು ನಿರ್ವಹಕರು, ಹಲವಾರು ಶಾಸಕರು, ಕಾರ್ಪೋರೇಟ್ ಗಳು, ಹಾಗಯೇ, ಮಾನವ ಹಕ್ಕುಗಳ ಸಂಸ್ಥೆಗಳು, ಟ್ರಂಪ್ ಆಡಳಿತದ ಈ ನಿರ್ಧಾರಗಳ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಅಮೆರಿಕದ ಆರ್ಥಿಕ ಬಲವಾಗಿರುವುದು ಎಲ್ಲೆಡೆಯಿಂದ ಕೌಶಲ್ಯವನ್ನು ಆಹ್ವಾನಿಸಿದ್ದರಿಂಧ. ಈ ಅಮೆರಿಕನ್ ವಿಶೇಷತೆಯನ್ನು ತ್ಯಜಿಸುವುದು ದೇಶದ ಹಿತಾಸಕ್ತಿಗೆ ಧಕ್ಕೆ ತರುತ್ತದೆ ಎಂದು ಗೂಗಲ್ ಮುಖ್ಯಸ್ಥ ಸುಂದರ್ ಪಿಚೈ ಹೇಳಿದ್ದಾರೆ. ಕೊವಿಡ್ ವಿರುದ್ಧ ಹೋರಾಟದಲ್ಲಿ ಅಗತ್ಯವಿರುವ ಹಲವು ಉದ್ಯೋಗಗಳಲ್ಲಿ ಉದ್ಯೋಗಿಗಳ ಕೊರತೆಯಿದ್ದು ಅದನ್ನು ವಿದೇಶಿ ವೃತ್ತಿಪರರು ಭರ್ತಿ ಮಾಡುತ್ತಿದ್ದರು. ಅದಕ್ಕೆ ಈ ನಿರ್ಧಾರ ತೊಡಕಾಗಿರುವುದರಿಂದ ಸರಿಯಲ್ಲವೆಂದು ಕೆಲವರು ಟೀಕಿಸಿದ್ದಾರೆ. ಭಾರತದ ಐಟಿ ಉದ್ಯಮಗಳ ಸಂಘಟನೆಯಾದ ನಾಸ್ಕಾಂ ಈ ನಿರ್ಣಯವನ್ನು ಟೀಕಿಸಿದ್ದು ವೀಸಾ ತಡೆ ಹಿಡಿಯುವುದನ್ನು 90 ದಿನಗಳಿಗೆ ಮಿತಿಗೊಳಿಸಬೇಕೆಂದು ಮನವಿ ಮಾಡಿದೆ.

'ಅಮೆರಿಕನ್ನರಿಗೆ ಚೀತರಿಕೆ ಮೊದಲು' ಪ್ರಯತ್ನದ ಭಾಗ ಎಂದು ಈ ನಿರ್ಧಾರದ ಹಿನ್ನೆಲೆಯನ್ನು ವಿವರಿಸಲಾಗುತ್ತಿದೆ. ಇದರಿಂದಾಗಿ, ಸುಮಾರು 5,25,000 ಉದ್ಯೋಗ ಗಳು ಅಮೆರಿಕಾದ ಜನರಿಗೆ ಲಭ್ಯವಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೊವಿಡ್ ನಿಂದ ಬಳಲುತ್ತಿರುವ ಅಮೆರಿಕಾದಲ್ಲಿ, ಕಳೆದ ಎರಡು ತಿಂಗಳಲ್ಲಿ, ಸುಮಾರು 4 ಕೋಟಿ ಅಮೆರಿಕನ್ನರು ತಮ್ಮ ಉದ್ಯೋಗ ಗಳನ್ನು ಕಳೆದುಕೊಂಡಿದ್ದಾರೆ. ಏಕೆಂದರೆ, ಇದುವರೆಗೆ ಅಮೆರಿಕದಲ್ಲಿ 1,21,000 ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿರುವ ಮಾರಣಾಂತಿಕ ಕೋವಿಡ್-19 ನಿಂದಾಗಿ, ಯುಎಸ್ ಆರ್ಥಿಕತೆ ಯ ಸ್ಥಗಿತಗೊಂಡಿದೆ.

JANASHAKTHI KANNADA VARA PATRIKE JUNE 29-JULY 5, 2020 Price: Rs. 10/- Date of Publication: 26 JUNE 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಕಾ॥ ಎನ್.ಎಲ್. ಉಪಾಧ್ಯಾಯ ಸ್ಮರಣೆ



ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕರ್ನಾಟಕದಲ್ಲಿ ಕಮ್ಯೂನಿಷ್ಟ ಚಳುವಳಿಯ ಸ್ಥಾಪಕರಲ್ಲಿ ಒಬ್ಬರು, ಗೋವಾ ವಿಮೋಚನಾ ಚಳುವಳಿ, ಕರ್ನಾಟಕ ಏಕೀಕರಣ ಚಳುವಳಿಯ ಮುಖಂಡ ದಿವಂಗತ ಕಾ॥ ಎನ್.ಎಲ್. ಉಪಾಧ್ಯಾಯ ರವರ ಜನ್ಮದಿನ ಜೂನ್ 21 ರಂದು ಇಎಂಎಸ್ ಭವನದಲ್ಲಿ ಅವರನ್ನು ನೆನಪು ಮಾಡುವ ಕಾರ್ಯಕ್ರಮವನ್ನು ಎನ್.ಎಲ್. ಉಪಾಧ್ಯಾಯ ಟ್ರಸ್ಟ್ ಏರ್ಪಡಿಸಿತು. ರಾಜ್ಯದ ಹಿರಿಯ ಕಮ್ಯೂನಿಸ್ಟ ಮುಖಂಡ ಕಾ॥ ವಿಜೆಕೆ ನಾಯರ್‌ರವರು ಉಪಾಧ್ಯಾಯರ ಹೋರಾಟದ ಬದುಕನ್ನು ವಿಸ್ತೃತವಾಗಿ ಉಪನ್ಯಾಸದ ಮೂಲಕ ತೆರೆದಿಟ್ಟರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ಯು. ಬಸವರಾಜ್ ಹಾಗೂ ಪಕ್ಷದ ಹಿರಿಯ ಮುಖಂಡರಾದ ನಿತ್ಯಾನಂದಸ್ವಾಮಿ ಟ್ರಸ್ಟ್ ಅಧ್ಯಕ್ಷ ಗೋಪಾಲಕೃಷ್ಣ ಹರಳಹಳ್ಳಿ, ಕಾರ್ಯದರ್ಶಿ ಎನ್. ರಾಜಣ್ಣ ಖಜಾಂಚಿ ಕೆ.ಎಸ್. ಶಾರದ ಪಾಲ್ಗೋಂಡಿದ್ದರು.

ಮಂಗಳೂರಿನ ನಂದಕೂರಿನಲ್ಲಿ 1912 ರ ಜೂನ್ 24 ರಂದು ಜನಿಸಿದ ಉಪಾಧ್ಯಾಯರು, ಮುಂಬೈನಲ್ಲಿ ಕಾನೂನು ಪದವಿ ಮಾಡುವಾಗಲ್ಲೆ ಕಾಂಗ್ರೇಸ್ ನೇತಾರನಾಗಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. 1931 ರಲ್ಲಿ ಕಾಂಗ್ರೇಸ್ ಸೊಷಲಿಸ್ಟ್ ಪಾರ್ಟಿಯ ಸಹ ಕಾರ್ಯದರ್ಶಿಯಾಗಿದ್ದರು. 1936 ರಲ್ಲಿ ಜಮಶೆಡ್‌ಪುರ ಎಐಸಿಸಿ ಯಲ್ಲಿ ಭಾಗವಹಿಸಿ ನಂತರ ಮುಂಬೈಗೆ ತೆರಳಿದರು. 1942 ರಲ್ಲಿ ಕಮ್ಯೂನಿಸ್ಟ ಪಕ್ಷ ಕಟ್ಟಲು ಮುಂಬೈನಿಂದ ಕರ್ನಾಟಕಕ್ಕೆ ನಿಯೋಜಿತಗೊಂಡರು.

ಮಂಗಳೂರಿನಲ್ಲಿ ಕೆಲ ವರ್ಷವಿದ್ದು ಬೆಂಗಳೂರಿಗೆ ಅವರು ಬಂದಾಗ ಇಲ್ಲಿ ಸಿ. ರಾಜಗೋಪಾಲಚಾರಿ, ಎನ್.ಡಿ. ಶಂಕರ್, ಎಂ.ಸಿ. ನರಸಿಂಹನ್, ಎಂ.ಎಸ್. ಕೃಷ್ಣನ್, ಸೂರ್ಯನಾರಾಯಣರಾವ್ 5 ಜನ ಗುಂಪು ಸೇರಿದರು. ಮಂಗಳೂರಿನಲ್ಲಿ ಪಿಳ್ಳೈ, ಕಕ್ಕಿಲಾಯ, ಕೃಷ್ಣಶೆಟ್ಟಿ, ನಿಂಭಾಳ, ಕೆ.ಜಿ.ಎಫ್. ನಲ್ಲಿ ವಾಸನ್, ಮೈಸೂರಿನಲ್ಲಿ ಜನಜಾಗೃತಿ ಸಂಘದ ಎಂ.ಎಸ್. ಉಗ್ರಪ್ಪ ಗುಲ್ಬರ್ಗಾದಲ್ಲಿ ಕಾದಂಬರಿ ರಾಣಿ, ಭದ್ರಾವತಿ, ದಾವಣಗೆರೆಗಳು ಚಳುವಳಿ ಕೇಂದ್ರಗಳಾಗಿದ್ದವು.

1926 ರ ಸಂದರ್ಭದಲ್ಲಿ ಕಮಲಾದೇವಿ ಚಟೋಪಾಧ್ಯಯ ಮತ್ತು ದಾಸಪ್ಪ ಮುಂತಾದ, ಜಸ್ಟಿಸ್ ಪಾರ್ಟಿಯಿಂದ ಅಂತರಜಾತಿ ವಿವಾಹ, ಸಹಪಂಕ್ತಿ ಬೋಜನ ಜಾತಿವಿನಾಶ ಸುಧಾರಣಾ ಚಳುವಳಿ ಪ್ರಾರಂಭಿಸಿದರು. ಮೀಸಲಾತಿ ಹೋರಾಟ, ರಾಜರ ವಿರುದ್ಧ ಹೋರಾಟ, ಚುನಾಯಿತ ಜವಾಬ್ದಾರಿ ಪ್ರಜಾಪ್ರತಿನಿಧಿಗಳ ಸರ್ಕಾರಕ್ಕಾಗಿ ಒತ್ತಾಯ ಪ್ರಾರಂಭವಾಯಿತು. ಆಂಧ್ರದಲ್ಲಿ ಭಷ್ಟ ಚಳುವಳಿ ಹಾಗೂ ನಿಜಾಮನ ವಿರುದ್ಧ ಚಳುವಳಿ ತಮಿಳುನಾಡಿನಲ್ಲಿ ಪೆರಿಯಾರ್ ಚಳುವಳಿ ಬೆಳೆದು ಬಂದವು. ಈ ರೀತಿಯ ಚಳುವಳಿ ಕರ್ನಾಟಕದಲ್ಲಿ ಕಾಣಬರದಿರುವುದನ್ನು ನಾವು ಗಮನಿಸಬೇಕು. ಸಾಹಿತ್ಯ ಕ್ಷೇತ್ರದಲ್ಲಿ ಖ್ಯಾತರಾಗಿದ್ದ ತಾ.ರಾ. ಸುಬ್ಬರಾವ್, ಅನಕೃ, ಬಸವರಾಜ ಕಟ್ಟಿಮನಿ, ನಿರಂಜನ ಮುಂತಾದವರ ಒಡನಾಟ ಉಪಾಧ್ಯಾಯರಿಗಿತ್ತು.

ಉಪಾಧ್ಯಾಯರನ್ನು ಮೈಸೂರು ರಾಜರ ಆಡಳಿತ ಹರಿಹರದ ಸೇತುವೆ ಆಚೆಗೆ ಗಡಿಪಾರು ಮಾಡಿತು. ಹುಬ್ಬಳಿಗೆ ತೆರಳಿ ಅಲ್ಲಿ ರೈಲ್ವೆ ಕಾರ್ಮಿಕ ಸಂಘ ಕಟ್ಟಿದ ಅವರು ನಂತರ ವಿಜಯಪುರ ಹಾಗೂ ಕಾರವಾರದಲ್ಲಿ ಕುಳಕುಂದ ಶಿವರಾಂ, (ನಿರಂಜನ) ಶ್ಯಾಮ್‌ರಾವ್ ಜೊತೆ ಚಳುವಳಿ ಬೆಳೆಸಿದರು. ಭೂಸುಧಾರಣಾ ಚಳುವಳಿ ನಾಸಿಕ ಜೈಲು ಗೋಲಿಬಾರ್ 1947 ರಲ್ಲಿ ಪಕ್ಷದ ರಾಜ್ಯ ಸಮಿತಿ ರಚನೆ. 1960 ರಲ್ಲಿ ಆಯ್ಕೆ 1952 ಡಾಂಗೆ ವಾದ ಪ್ರಚಲಿತವಾಯಿತು.1954 ರಲ್ಲಿ ಹುಬ್ಬಳ್ಳಿಯಲ್ಲಿ ಜರುಗಿದ ಕಾಂಗ್ರೇಸ್ ಸಮಾವೇಶದಲ್ಲಿ ಹನುಮಂತಯ್ಯನವರು ಮೈಸೂರುಕೇಂದ್ರವಾಗಬೇಕು ಎಂದು ಹಾಗೂ ನಿಜಲಿಂಗಪ್ಪನವರು ಹುಬ್ಬಳಿ ಕೇಂದ್ರವಾಗಿ ರಾಜ್ಯ ಆಡಳಿತ ನಡೆಯಬೇಕೆಂಬ ವಾದ ಪ್ರಾರಂಭವಾಯಿತು.

ಕಾ॥ ಸುಂದರಯ್ಯನವರ ನೇತೃತ್ವದಲ್ಲಿ ತೇನಾಲಿಯಲ್ಲಿ ಜರುಗಿದ ಪಕ್ಷದ ಸಮಾವೇಶದಲ್ಲಿ ಕರ್ನಾಟಕ ಪ್ರತಿನಿಧಿಸಿ ಕಾ॥ ಬಿ.ವಿ. ಕಕ್ಕಿಲಾಯ, ಹೈದರ್, ಸೂರ್ಯನಾರಾಯಣರಾವ್ ಚಂದುಕುಟ್ಟಿನಾಯರ್ ಹೆಚ್.ಎಸ್. ರಾಮರಾವ್ ಎಂ.ಹೆಚ್. ಕೃಷ್ಣಪ್ಪ ನವರು ಭಾಗವಹಿಸಿದ್ದರು.

1968 ರಲ್ಲಿ ದಾವಣಗೆರೆಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದ ಕಾ॥ ಉಪಾಧ್ಯಾಯರು 1973 ರವರೆಗೆ ರಾಜ್ಯ ಸುತ್ತಿ ಪಕ್ಷ ಬೆಳೆಸಿದರು. 1973 ರ ಮೈಸೂರು ಸಭೆಯಲ್ಲಿ ಎಂ.ಎಚ್. ಕುಟ್ಟಪ್ಪ ಹಾಗೂ ಕೃಷ್ಣಪ್ಪನವರ ತೀವ್ರ ವಿರೋಧದ ಪರಿಣಾಮವಾಗಿ ಮನನೊಂದು ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರನಡೆಯುವಾಗ ಕಾ॥ ವಿಜೆಕೆ ನಾಯರ್ ರವರು ಅವರನ್ನು ತಡೆದು ನಿಲ್ಲಿಸಿ ರಾಜೀನಾಮೆ ಪತ್ರವನ್ನು ಹರಿದು ಹಾಕಿ ಅವರನ್ನು ಪಕ್ಷದಲ್ಲೇ ಉಳಿಯುವಂತೆ ಮನವೊಲಿಸಿದರು. 1974 ರಲ್ಲಿ ರಾಜ್ಯ ಸಮಿತಿಯನ್ನು ರದ್ದು ಮಾಡಲಾಯಿತು. 1962 ರಲ್ಲಿ ಸುಧಾರಣಾವಾದಿಗಳ 1974 ರಲ್ಲಿ ಕುಟ್ಟಪ್ಪ-ಕೃಷ್ಣಪ್ಪನವರ ನಿಲುವುಗಳ ಫಲವಾಗಿ ಪಕ್ಷ ವಿಭಜನೆಗೊಂಡು ಮಾರ್ಕ್ಸ್‌ವಾದಿ ಸೈದ್ಧಾಂತಿಕ

ಪುಟ 14 ನೋಡಿ



ಮಹಮದನ ಪ್ರೇಮಪತ್ರ

ಹತ್ತೂ ಜನರು ಓದಿಯಾದ ಮೇಲೆ
ನನ್ನ ಕೈಸೇರಿತು ಮಹಮದನ ಪತ್ರ

ತನ್ನೂರಿನ ಬಗ್ಗೆ
ತನ್ನ ಅಕ್ಕ ತಂಗಿಯರ ಬಗ್ಗೆ
ಮಲ್ಪೆಯ ಮೀನು, ಸಮುದ್ರದ ಹಿನ್ನೀರು
ಗೇರು ಹಣ್ಣು, ಗುಳ್ಳದ ಬಗ್ಗೆ
ಏನೆಲ್ಲಾ ಅಚ್ಚ ಕನ್ನಡದಲ್ಲಿ
ಬರೆದಿದ್ದ ಪತ್ರ –
'ಈದ್' ಗೆ ಮನೆಗೆ ಬರಲೇಬೇಕೆಂದು
ಕೇಳಿಕೊಂಡಿದ್ದ ಪತ್ರ –

ಕವನ

ಅದರಲ್ಲಿ ಪ್ರೇಮದ ವಿಷಯವೇನೂ
ಇರಲಿಲ್ಲವಾದರೂ
ಅದು ಪ್ರೇಮ ಪತ್ರವೆಂದು
ಮುದ್ರೆ ಒತ್ತಲ್ಪಟ್ಟಿತು
ಮಹಮದನಿಗೆ ಗುದ್ದು
ನನಗೆ ಎಚ್ಚರಿಕೆ
ಹತ್ತು ಹಲವು ಹದ್ದುಗಳು
ನನ್ನ-ಅವನ
ಚಲನವಲನದ ಬಗ್ಗೆ
ನಿಗಾ ಇಡುವಂತಾಯಿತು
ಒಮ್ಮೆ ಮಹಮದನನ್ನು
ಭೇಟಿಯಾಗಬೇಕು
'ಪ್ರೇಮ ಭಾವ'
ಅರಳಿಸಿದಕ್ಕೆ
ಕ್ಷಮೆ ಬೇಡಬೇಕು ಎಂದೆಲ್ಲಾ
ಅಂದುಕೊಂಡೆನಾದರೂ...

ಪ್ರತಿ ಬಾರಿ...
ನಮ್ಮಿಬ್ಬರ ನಡುವೆ
ಮಸೀದಿಯ ಗುಡ್ಡ
ಅಡ್ಡ ಬರುತ್ತಿತ್ತು

ಅದೊಂದು ದಿನ –
ದೊಡ್ಡ ದೇವರ ಪಲ್ಲಕ್ಕಿ ಉತ್ಸವ
ಇಬ್ಬರನೂ ಸೀಳಿಕೊಂಡು
ಹೊರಟು ಹೋಯಿತು !

ಹೂವಿನಷ್ಟೇ ತಾಜಾ-ಕೋಮಲ
ಮಹಮದನ ಪ್ರೇಮ
ವಜ್ರದಷ್ಟೇ ಕಠಿಣ-ಕಠೋರ
ಸುತ್ತಣ ಜನರ ಆತ್ಮ...

ಗಾಳಿ-ಬೆಂಕಿ ಸೇರಿಕೊಂಡು
ತನಗೆ ತಾನೇ ಕೂಡಿಕೊಂಡು
ಎಷ್ಟು ಸುತ್ತು ಉರಿದರೇನು
ಎಷ್ಟು ಹೊತ್ತು ಉರಿದರೇನು
ಉರಿಯೊಳಗೆ ಬಿರಿಯುತ್ತಿತ್ತು
ಬಿರಿದು ತಾನೇ ಬೆಳಗುತ್ತಿತ್ತು
ಪ್ರೇಮ ಪುಷ್ಪ ಅರಳುತ್ತಿತ್ತು

– ಸವಿತಾ ನಾಗಭೂಷಣ

ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ

'ಜನಶಕ್ತಿ ಮೀಡಿಯಾ' ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 15 ವಿಡಿಯೊಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ :

* ಭೂಸುಧಾರಣೆ ತಿದ್ದುಪಡಿ – ಭೂಸಂಬಂಧಗಳ ಮೇಲೆ ಪರಿಣಾಮಗಳು' – ರವಿವರ್ಮ ಕುಮಾರ್ (ಜೂ. 26)
* ಭಾರತ ಸ್ವಾವಲಂಬಿಯಾಗದೆ ಚೀನಾ ವಸ್ತುಗಳ ಬಹಿಷ್ಕಾರ ಸಾಧ್ಯವೇ? (ಜೂ. 25)
* ತುರ್ತು ಪರಿಸ್ಥಿತಿ ಯಾಕೆ ? ಅಂದು – ಇಂದು : ವಿಜೆಕೆ ನಾಯರ್ (ಜೂ. 24)
* ಸರ್ಕಾರಿ ಆಸ್ಪತ್ರೆಗಳಲ್ಲಿ ಕೊರೊನಾ ರೋಗಿಗಳ ಗೋಳು (ಜೂ. 23)
* ಖಾಸಗಿ ಆಸ್ಪತ್ರೆಯಲ್ಲಿ ದುಬಾರಿ ಕೊರೊನಾ ಚಿಕಿತ್ಸೆ ದರ (ಜೂ. 22)
* ಕಂಕಣ ಸೂರ್ಯ ಗ್ರಹಣ : ಅಹ್ಮದ್ ಹಗರೆ (ಜೂ. 21)
* ಅಟೋ ಡ್ರೈವರುಗಳಿಗೆ ಪರಿಹಾರ ಬಂತಾ? (ಜೂ. 20)

ಯೂಟ್ಯೂಬ್ ನಲ್ಲಿ **'Janashakthi Media'** ಎಂದು ಸರ್ಚ್ ಕೊಡಿ.
ನಂತರ ಅಲ್ಲಿ ಕಾಣುವ **'Subscribe'** ನ್ನು ಕ್ಲಿಕ್ ಮಾಡಿ.
ನಂತರದಲ್ಲಿ ಕಾಣುವ 'ಬೆಲ್ ಐ ಕಾನ್ ಬಟನ್' ಒತ್ತಿ. ನಿರಂತರ ನೊಟೀಫಿಕೇಶನ್ ಬರುತ್ತದೆ.
ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ನ್ನು ಪ್ರೋತ್ಸಾಹಿಸಿ.



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**